
ಲಂಕೇಶ್

ಫೆಬ್ರವರಿ 17, 2010 ರೂ. 12/-

ಲಂಕೇಶ್-75

ಲಂಕೇಶರಿಂದ ಕುವೆಂಪು ಸಂದರ್ಶನ





ಭ್ರಷ್ಟರ ವೃತ್ತಾಂತ

ಪಿಷಲಿಂಬೆ ಸುಲಿಗೆಕೋರ



ಪ್ರಾಣಿಪೀಡಕ
ರೂರು ಸ್ವಾಮಿ



ಮಳವಳ್ಳಿ
ದಲಿತ ದ್ರೋಹಿ
ನರೇಂದ್ರಸ್ವಾಮಿ



ಬಳ್ಳಾರಿ
ಮನೆಮುರುಕ
'ಡೆಡ್ಲಿ' ಸೋಮ




ತೋತಾ ರಫೀಕ್
ನಿಕಾಲಿ

ೋಹತ್ಯೆ
ನಿಷೇಧ


ಅಸಲಿ ಮಸಲತ್ತು ಏನು?

The Karnataka Prevention Of Cow Slaughter And Cattle Preservation (Amendment) Bill, 2009

ಗೋಹತ್ಯೆಗೆ ನಿಷೇಧ ನರಹತ್ಯೆಗೆ ಪರವಾನಗಿ!



ಈ ದೇಶವನ್ನು ಮತ್ತು ಈ ದೇಶದ ಅಗತ್ಯಗಳನ್ನು ಬ್ರಾಹ್ಮಣ್ಯದ ಕಣ್ಣಿಂದಲ್ಲದೆ ರೈತಾಪಿಯ ಮತ್ತು ದಮನಿತರ ಕಣ್ಣಿಂದ ಎಂದಿಗೂ ಅರ್ಥಮಾಡಿಕೊಳ್ಳದ ಬಿಜೆಪಿಗೆ ಈ ದೇಶ ಎಂದಿಗೂ ಅರ್ಥವಾಗಿಲ್ಲ. ಹೀಗಾಗಿ ಈ ದೇಶದ ಸಂಸ್ಕೃತಿಯನ್ನು ಉಳಿಸುವ ಹೆಸರಲ್ಲಿ ಅವರು ರೂಪಿಸುತ್ತಿರುವ ಕಾನೂನುಗಳೆಲ್ಲಾ ಈ ದೇಶದ ಬಹುಸಂಖ್ಯಾತರ ಹಿತಾಸಕ್ತಿಗೆ ವಿರುದ್ಧವಾಗಿದೆ ಮತ್ತು ಅವರ ಬದುಕನ್ನು ಮತ್ತಷ್ಟು ದುರ್ಬಲಗೊಳಿಸುತ್ತಿದೆ. ಬಿಜೆಪಿ ಪೂರ್ಣ ಬಹುಮತದೊಂದಿಗೆ ರಾಜ್ಯದಲ್ಲಿ ಅಧಿಕಾರ ಹಿಡಿದ ನಂತರ ಒಂದೆಡೆ ಬ್ರಹ್ಮಾಂಡ ಭ್ರಷ್ಟಾಚಾರ ಮಾಡುತ್ತಾ ನಾಡಿನ ತಿಜೋರಿಯನ್ನು ಲೂಟಿ ಹೊಡೆಯುತ್ತಿದ್ದರೆ ಇನ್ನೊಂದೆಡೆ ದಲಿತ, ಶೂದ್ರ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳ ಸಾಂಸ್ಕೃತಿಕ ಸಂಪನ್ಮೂಲಗಳ ಮೇಲೂ ದಾಳಿ ಮಾಡುತ್ತಾ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತವಾದ ಬ್ರಾಹ್ಮಣೀಯ ಸಂಸ್ಕೃತಿಯನ್ನು ಸಮಾಜದ ಮೇಲೆ ಹೇರಲು ಸತತ ಪ್ರಯತ್ನ ನಡೆಸುತ್ತಿದೆ.



ಈ ನಿಟ್ಟಿನಲ್ಲಿ ಫೆಬ್ರವರಿಯ ಕೊನೆಗೆ ಪ್ರಾರಂಭವಾಗಲಿರುವ ವಿಧಾನಸಭಾ ಅಧಿವೇಶನದಲ್ಲಿ ಅದು ಕರ್ನಾಟಕದಲ್ಲಿ ಗೋಹತ್ಯೆ ನಿಷೇಧ ಮಾಡುವ ಮತ್ತು ಜಾನುವಾರುಗಳ ಸಂರಕ್ಷಣೆ ಮಾಡುವ ಸಲುವಾಗಿ 1964ರಲ್ಲೇ ಜಾರಿಮಾಡಲಾಗಿದ್ದ **The Karnataka Prevention of Cow Slaughter And Cattle Preservation Act-1964** ಗೆ ಹಲವಾರು ದುರುದ್ದೇಶಗಳಿಂದ ಕೂಡಿದ ತಿದ್ದುಪಡಿಗಳನ್ನು ತರಲು **The Karnataka Prevention of Cow Slaughter And Cattle Preservation (Amendment) Bill, 2009** ಎಂಬ ಮಸೂದೆಯನ್ನು ಪಾಸುಮಾಡುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಇದರ ಉದ್ದೇಶ ಗೋಹತ್ಯೆಯನ್ನು ನಿಷೇಧ ಮಾಡುವುದಕ್ಕಿಂತ ಹೆಚ್ಚಾಗಿ ಅದರ ಹೆಸರಲ್ಲಿ ಅಲ್ಪಸಂಖ್ಯಾತರ ಮೇಲೆ ಈಗ ಕಾನೂನು ಬಾಹಿರವಾಗಿ ರಾಜ್ಯದೆಲ್ಲೆಡೆ ಭಜರಂಗಿಗಳು ನಡೆಸುತ್ತಿರುವ ಆಕ್ರಮಣಗಳನ್ನು ಸಕ್ರಮಗೊಳಿಸುವುದೇ ಆಗಿದೆ. ಮಾಂಸಾಹಾರಿ ಆಹಾರ ಪದ್ಧತಿ- ಅದರಲ್ಲೂ ಗೋಮಾಂಸ ಭಕ್ಷಣೆ ಮಾಡುವ ಮುಸ್ಲಿಂ, ಕ್ರಿಶ್ಚಿಯನ್, ದಲಿತ ಹಾಗೂ ಶೂದ್ರ ಜನಾಂಗಗಳ ಆಹಾರ ಪದ್ಧತಿಗಳ ಮೇಲೆಯೇ ಸಾಂಸ್ಕೃತಿಕ ಆಕ್ರಮಣ ನಡೆಸುವ ಮತ್ತು ನಿರ್ದಿಷ್ಟವಾಗಿ ಮಾಂಸಾಹಾರ ವ್ಯಾಪಾರದಲ್ಲಿ ತೊಡಗಿ ಕೊಂಡಿರುವ ಮುಸ್ಲಿಮರ ಮೇಲೆ ನಡೆಸುವ ಹಲ್ಲೆಯನ್ನು ಶಾಸನಬದ್ಧಗೊಳಿಸುವ ಉದ್ದೇಶವನ್ನೇ ಈ ಮಸೂದೆ ಹೊಂದಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗುತ್ತದೆ.

ಆದರೆ ಈ ಭರತವರ್ಷದಲ್ಲಿ ವಿವಿಧ ಆಹಾರ ಮತ್ತು ಅನನ್ಯ ಸಂಸ್ಕೃತಿಗಳು ವಿಕಸನಗೊಂಡ ಪ್ರಕ್ರಿಯೆ ಅರ್ಥವಾಗದೆ ಈ ಮಸೂದೆಯ ಹಿಂದಿನ ಕರಾಳ ಕಾರಾಸ್ಥಾನಗಳು ಅರ್ಥವಾಗುವುದಿಲ್ಲ.



ಒಂದು ಜನಾಂಗ ತನ್ನದೇ ನಿರ್ದಿಷ್ಟ ಪರಿಸರದಲ್ಲಿ ವಿಕಸನಗೊಳ್ಳುವ ಪ್ರಕ್ರಿಯೆಯಲ್ಲಿ ತನದೇ ಅನನ್ಯವಾದ ಸಂಸ್ಕೃತಿ, ಧಾರ್ಮಿಕ ಶ್ರದ್ಧೆ ಮತ್ತು ಆಹಾರಾಭ್ಯಾಸಗಳನ್ನು ರೂಢಿಸಿಕೊಳ್ಳುತ್ತದೆ. ಅದಕ್ಕೆ ಭಿನ್ನವಾದ ಪರಿಸರದಲ್ಲಿ ಅರಳುವ ಸಂಸ್ಕೃತಿಗಳು ಅದಕ್ಕಿಂತ ಭಿನ್ನವಾದ ಆಹಾರ ಪದ್ಧತಿಗಳನ್ನು ಮತ್ತು ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತವೆ. ಆದರೆ ಒಂದು ದೇಶವಾಗಿ ಮತ್ತು ಅದರ ನಾಗರಿಕರಾಗಿ ಈ ವಿಭಿನ್ನ ಸಂಸ್ಕೃತಿಯ ಜನಾಂಗಗಳು ಐಕ್ಯಜೀವನ ನಡೆಸುವಾಗ ಪರಸ್ಪರರ ಸಂಸ್ಕೃತಿಯನ್ನು ಗೌರವಿಸುವ ಮತ್ತು ಸಹಬಾಳ್ವೆ ನಡೆಸುವ ಪ್ರಜಾತಾಂತ್ರಿಕ ಸಂಸ್ಕೃತಿ ಅತ್ಯಗತ್ಯವಾಗುತ್ತದೆ. ಅಂಥಾ ಬಹುಸಂಸ್ಕೃತಿ ರಾಷ್ಟ್ರವೊಂದರ ಪ್ರಭುತ್ವಕ್ಕೆ ಈ ಸಾಂಸ್ಕೃತಿಕ ಬಹುತ್ವವನ್ನು ಕಾಪಾಡಿಕೊಂಡು ಬರುವ ಹೊಣೆಗಾರಿಕೆ ಇರುತ್ತದೆ.

ನಮ್ಮ ದೇಶದಲ್ಲಿ ವಿವಿಧ ಐತಿಹಾಸಿಕ ಕಾರಣಗಳಿಂದ ಬಗೆಬಗೆಯ ಆಹಾರ ಸಂಸ್ಕೃತಿಗಳು ನೆಲೆಗೊಂಡಿವೆ. ಈ ದೇಶದ ಹಲವು ಸಹಸ್ರ ವರ್ಷಗಳ ನಾಗರಿಕತೆಯಲ್ಲಿ ಶುದ್ಧ ಶಾಖಾಹಾರಿ ಸಂಸ್ಕೃತಿಯಿಂದ ಮೊದಲುಗೊಂಡು ಗೋಮಾಂಸ ಭಕ್ಷಣೆಯವರೆಗಿನ ವೈವಿಧ್ಯಮಯ ಆಹಾರ ಸಂಸ್ಕೃತಿಗಳು ವಿಕಸನಗೊಂಡಿವೆ. ಇವೆಲ್ಲವೂ ಈ ದೇಶದ ಆಹಾರ ಪದ್ಧತಿಗಳೇ ಆಗಿದ್ದು ಯಾವುದೂ ಮತ್ತೊಂದಕ್ಕಿಂತ ಮೇಲೂ ಅಲ್ಲ ಕೀಳೂ ಅಲ್ಲ. ಬಹುತ್ವವನ್ನು ಗೌರವಿಸುವ ಪರಂಪರೆಯುಳ್ಳ ನಮ್ಮ ದೇಶದಲ್ಲಿ ಯಾವುದೇ ಆಹಾರಪದ್ಧತಿಯನ್ನು ಹೀನಾಯವಾಗಿ ನೋಡುವ ಅಥವಾ ಯಾವುದಾದರು ಒಂದು ಆಹಾರ ಪದ್ಧತಿಯನ್ನು ಪುರಸ್ಕರಿಸಿ ಮತ್ತೊಂದು ಆಹಾರ ಪದ್ಧತಿಯನ್ನು ನಿಷೇಧಿಸಿದ ಉದಾಹರಣೆಯೂ ಇಲ್ಲ.

ಇಷ್ಟಾಗಿಯೂ ಭಾರತದಲ್ಲಿ ಕೆಲವು ಸಮುದಾಯದವರು ಗೋವನ್ನು ಪವಿತ್ರ ಎಂದು ಭಾವಿಸುತ್ತಿರುವುದನ್ನು ಸಮಾಜ ಗೌರವಿಸುತ್ತಲೇ ಬಂದಿದೆ. ಹಾಗೆಯೇ ಗೋವನ್ನು ಒಂದು ಆಹಾರವಾಗಿ ಬಳಸುವವರೂ ಬಹುದೊಡ್ಡ ಸಂಖ್ಯೆಯಲ್ಲಿ ಇದ್ದಾರೆ. ಹೀಗಾಗಿಯೇ ಸ್ವಾತಂತ್ರ್ಯಾನಂತರದಲ್ಲಿ ನಮ್ಮ ದೇಶದ ಬಹುತ್ವ ಸಂಸ್ಕೃತಿಯ ಆಶಯವನ್ನು ಧ್ಯೇಯವಾಗಿಟ್ಟುಕೊಂಡು ಸಂವಿಧಾನ ರಚನಾ ಸಭೆಯಲ್ಲಿ ಸಾಕಷ್ಟು ಚರ್ಚೆಗಳು ನಡೆದವು.

1948ರ ನವಂಬರ್ 24ರಂದು ಸಂವಿಧಾನ ರಚನಾ ಸಭೆಯಲ್ಲಿ ಈ ಬಗ್ಗೆ ನಡೆದ ಚರ್ಚೆಯಲ್ಲಿ ಪಂಡಿತ್ ಠಾಕೂರ್ ದಾಸ್ ಭಾರ್ಗವ, ಸೇಠ್ ಗೋವಿಂದ್ ದಾಸ್ ಹಾಗೂ ಇನ್ನಿತರ ಕೆಲವು ಹಿಂದೂ ಮೂಲಭೂತವಾದಿಗಳು ಗೋಹತ್ಯಾ ನಿಷೇಧವನ್ನು ಮೂಲಭೂತ ಹಕ್ಕಾಗಿ ಸೇರಿಸಬೇಕೆಂದು ಒತ್ತಾಯಿಸಿದ್ದರು. ಇವರೊಂದಿಗೆ ಆಗಿನ ಯುನೈಟೆಡ್ ಪ್ರಾವಿನ್ಸ್ ಪ್ರದೇಶವನ್ನು ಪ್ರತಿನಿಧಿಸುತ್ತಿದ್ದ ಮುಸ್ಲಿಮ್ ಪ್ರತಿನಿಧಿ ಜೆಡ್.ಹೆಚ್. ಲಾರಿ ಮತ್ತು ಅಸ್ಸಾಮಿನ ಮೊಹಮ್ಮದ್ ಸೈದುಲ್ಲಾ ಎಂಬುವರೂ ಧ್ವನಿಗೂಡಿಸಿದ್ದರು. ಆದರೆ ಡಾ. ಅಂಬೇಡ್ಕರ್, ಅಂದಿನ ಪ್ರಧಾನಿ ನೆಹರೂ ಹಾಗೂ ಇನ್ನಿತರರು ಅದರ ದೂರಗಾಮಿ ಪರಿಣಾಮದ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಟ್ಟರು. ಅಂಥಾ ಒಂದು ಕಾನೂನು ಜಾರಿಗೆ ಬಂದರೆ ರೈತಾಪಿಗಳಿಗೆ ಧಕ್ಕೆ ಬರುವುದರಿಂದ ರೈತಾಪಿಯ ಹಿತಾಸಕ್ತಿಗೂ, ಗೋಮಾಂಸ ಆಹಾರ ಪದ್ಧತಿ ಉಳ್ಳವರ ಆಸಕ್ತಿಗೂ ಮತ್ತು ಗೋವನ್ನು ಪವಿತ್ರ ಎಂದು ಭಾವಿಸುವವರ ಭಾವನೆಗೂ ಧಕ್ಕೆ ಬರದಂತೆ 48ನೇ ಪರಿಚ್ಛೇಧವನ್ನು ಸಂವಿಧಾನದ ನಿರ್ದೇಶನಾ ತತ್ವದಡಿಯಲ್ಲಿ ಸೇರಿಸಲಾಯಿತು.

▸▸▸13

ನೋ ಕಾಮೆಂಟ್ಸ್

"ಶರದ್ ಪವಾರ್‌ರವರು ರೈತರಿಗಿಂತ ಬಹುರಾಷ್ಟ್ರೀಯ ಕಂಪನಿಗಳಿಗೇ ಆಪ್ತಮಿತ್ರರು. ಮಾನ್ಸಾಂಟೋ, ಕಾರ್ಗಿಲ್, ಬಾಯರ್ ಇನ್ನಿತ್ಯಾದಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಅವರಿಗಿರುವ ಆತ್ಮೀಯ ಸಂಬಂಧ ಎಲ್ಲರಿಗೂ ತಿಳಿದಿರುವಂಥದ್ದೇ."

-ಭಾವದೀಪ್ ಕಾಂಗ್

"ರಾಜ್ಯ ಮಾನವ ಹಕ್ಕುಗಳ ಪರಿಷತ್‌ನ ಅಧ್ಯಕ್ಷ ವಿವೇಕಾನಂದರನ್ನು ಬಂಧಿಸುವಲ್ಲಿ ಪೊಲೀಸರು ಕೊನೆಗೂ ಯಶಸ್ವಿಯಾಗಿದ್ದಾರೆ. ಪ್ರಿಯಾಂಕ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪಡೆಯಲು ಠಾಣೆಗೆ ಬಂದಿದ್ದ ವೇಳೆ ಪೊಲೀಸರು ಈತನನ್ನು ಬಂಧಿಸಿದ್ದಾರೆ."

-ಪತ್ರಿಕಾ ವರದಿ

"ಜಾಂಬಿಯಾ ದೇಶಕ್ಕೆ ಬರಗಾಲ ಬಂದಾಗ ಅಮೆರಿಕ ಕುಲಾಂತರಿ ತಂತ್ರಜ್ಞಾನದ ಜೋಳ ಮತ್ತು ಗೋಧಿ ಕಾಳುಗಳನ್ನು ಕೊಡಲು ಮುಂದಾದರು. ಆದರೆ ಅದರಿಂದ ತಮ್ಮ ದೇಶದ ದೇಸೀ ತಳಿಯ ಕಾಳುಗಳು ನಾಶವಾಗುವ ಭಯದಿಂದ ಜಾಂಬಿಯಾ ಕೊಡುವುದಾದರೆ ನಮಗೆ ಹಿಟ್ಟು ಕೊಡಿ, ಕಾಳು ಬೇಡ ಎಂದು ಖಡಾಖಂಡಿತವಾಗಿ ಹೇಳಿತು. ಅಮೆರಿಕ ಅದಕ್ಕೆ ಒಪ್ಪದಿದ್ದಾಗ ಅವರ ಸಹಾಯವನ್ನೇ ಬೇಡವೆಂದಿತು. ಜಾಂಬಿಯಾಗಿರುವಷ್ಟು ಧೈರ್ಯ ನಮಗೇಕಿಲ್ಲ."

-ಸಂತೋಷ್ ಕೌಲಗಿ, ಚಿಂತಕ, ಸಾವಯವ ಕೃಷಿಕ

"ಗೋವಿನ ಬಗ್ಗೆ ಅಷ್ಟೊಂದು ಪೂಜನೀಯ ಭಾವನೆ ಇದ್ದಿದ್ದೇ ಆಗಿದ್ದಲ್ಲಿ ದೇಶ ವಿಭಜನೆಯ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಾಣಿಯನ್ನಾಗಿ ಹುಲಿಯನ್ನೂ, ರಾಷ್ಟ್ರೀಯ ಪಕ್ಷಿಯನ್ನಾಗಿ ನವಿಲನ್ನೂ, ರಾಷ್ಟ್ರೀಯ ಹೂವನ್ನಾಗಿ ಕಮಲವನ್ನೂ ಆಯ್ಕೆ ಮಾಡಿದಂತೆ ರಾಷ್ಟ್ರೀಯ ಪಶುವನ್ನಾಗಿ ಗೋವನ್ನು ಏಕೆ ಆಯ್ಕೆ ಮಾಡಲಿಲ್ಲ?"

-ಅಜೀಜ್ ಬರ್ನಿ, ರಾಷ್ಟ್ರೀಯ ಸಹಾರ ಸಮೂಹದ ಸಂಪಾದಕ

"ಮುಂಬೈ ಮೇಲೆ ಭಯೋತ್ಪಾದಕ ದಾಳಿ ನಡೆದಾಗ ರಕ್ಷಣೆಗೆ ನಿಂತ ಎನ್.ಎಸ್.ಜಿ. ಯೋಧರು ಎಲ್ಲಾ ರಾಜ್ಯಗಳಿಂದ ಬಂದವರು. ಅಂದು ಈ ಶಿವಸೇನೆ ಮಂದಿ ಬಿಹಾರ ಮತ್ತು ಉತ್ತರ ಪ್ರದೇಶಕ್ಕೆ ಸೇರಿದ ಯೋಧರನ್ನು ತಮ್ಮ ರಾಜ್ಯದಲ್ಲಿ ಕಾರ್ಯಾಚರಣೆ ಕೈಗೊಳ್ಳಬೇಡಿ ಎಂದು ವಾಪಸ್ ಕಳಿಸಿದರೇ?"

-ರಾಹುಲ್ ಗಾಂಧಿ

"ನೈಸರ್ಗಿಕ ಬದನೆಯ ತವರು ಭೂಮಿಯಲ್ಲಿ ವಿಷಕಾರಿ ಬದನೆಯ ಅಗತ್ಯವಿಲ್ಲ. ಬಿಟಿ ಬದನೆಯಿಂದ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭವಾಗುತ್ತದೆಯೇ ವಿನಃ ರೈತರಿಗಲ್ಲ."

-ಪಿ. ಸಾಯಿನಾಥ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಕಳೆದ ಸಾಲಿಗೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ಅಂತ್ಯಕ್ಕೆ ರಾಜಸ್ವ ಆದಾಯ 851 ಕೋಟಿ ರೂ. ಹೆಚ್ಚು ಸಂಗ್ರಹವಾಗಿದೆ."

-ಯಡಿಯೂರಪ್ಪ

"ಐದು ಸಲ ವಿವಾಹವಾಗಿರುವ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜಾಕೊಬ್ ಜುಮಾ ತನ್ನ 67ನೇ ವಯಸ್ಸಿನಲ್ಲಿ ವಿವಾಹಬಾಹಿರ ಸಂಬಂಧದ ಮೂಲಕ ತನ್ನ ಇಪ್ಪತ್ತನೇ ಮಗುವಿಗೆ ತಂದೆಯಾಗಿದ್ದಾನೆ."

-ಪತ್ರಿಕಾ ವರದಿ

ಈ ವಾದ ಎರಡಲಗಿನ ಕತ್ತಿಯಲ್ಲವೇ?

"ದಲಿತರು ಮಾತ್ರ ದಲಿತರ ನೋವಿನ ಬಗ್ಗೆ ಏಕೆ ಬರೆಯಬೇಕು ಎನ್ನುವ ವಾದಕ್ಕೆ ನನ್ನ ಪ್ರತಿಕ್ರಿಯೆ ಇಷ್ಟೇ! ಹೆರಿಗೆ ನೋವನ್ನು ಹೆಂಗಸಿಗಿಂತ ಗಂಡು ಬಣ್ಣಿಸಬಲ್ಲನೇ? ಕಾರ್ಮಿಕರ ಕಥೆಗಳನ್ನು ಮಾಲೀಕರು ಬರೆಯಬಲ್ಲರೇ?"

-ಶಿವಕಾಮಿ, ಖ್ಯಾತ ತಮಿಳು ಲೇಖಕಿ

ಇದು ತಾಲಿಬಾನಿಗಳ ಮಾತಲ್ಲ, ನಮ್ಮ ಮುಖ್ಯಮಂತ್ರಿಗಳು ನೀಡಿರುವ ಸುಪಾರಿ

"ಚರ್ಚ್ ಮೇಲೆ ದಾಳಿ ನಡೆಸುವವರ ಕೈ ಕತ್ತರಿಸಿ."
"ನಮ್ಮ ಯಡಿಯೂರಪ್ಪನನ್ನು ಟೀಕಿಸುವವರ ನಾಲಿಗೆಯನ್ನು ಕಿತ್ತುಹಾಕಿ."

-ಯಡಿಯೂರಪ್ಪ

ದುಡ್ಡಿಗೆ ಸಾವಿನ ಸೂತಕವಿಲ್ಲ

"ಗುಜರಾತ್ ರಾಜ್ಯದ ಅಭಿವೃದ್ಧಿಯ ರಾಯಭಾರಿಯಾಗಲು ಅಮಿತಾಬ್ ಬಚ್ಚನ್ ಒಪ್ಪಿಕೊಂಡಿದ್ದಾರೆ."

-ವರದಿ

ನೇರವಾಗಿ ನೋಡಲಾಗದ್ದನ್ನೇ ಅಲ್ಲವೇ ಪ್ರತಿಬಿಂಬದಲ್ಲಿ ಕಾಣುವುದು?

"ಕತೆಯೆಂದರೇ ಸುಳ್ಳು. ಕತೆಯೆಂಬ ಪದವೇ ತಾನು ನಿಜವಲ್ಲ ಎಂಬುದನ್ನು ಹೇಳುತ್ತದೆ. ಕತೆಯನ್ನು ಬದುಕಿನ ಪ್ರತಿಬಿಂಬ ಎನ್ನುತ್ತಾರಾದರೂ ಆ ಪ್ರತಿಬಿಂಬ ನಿಜವಲ್ಲ."

-ಬೊಳುವಾರು ಮಹಮ್ಮದ್ ಕುಂಞ

ಈ ಪ್ರಶ್ನೆಗೆ ಮುಲ್ಲಾಗಳಿರಲಿ ಹಿಂದೂತ್ವವಾದಿಗಳ ಬಳಿಯೂ ಉತ್ತರವಿಲ್ಲ!

"ಪಾಶ್ಚಿಮಾತ್ಯ ದೇಶಗಳಲ್ಲಿ ಬುರ್ಖಾದ ಬಗೆಗಿನ ಚರ್ಚೆ ಕೇವಲ ಆ ವಸ್ತ್ರದ ವಿನ್ಯಾಸಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಹೆಂಗಸರ ಮಟ್ಟಿಗೆ ಬುರ್ಖಾದ ಅರ್ಥವೇನು? ಹೆಣ್ಣಿನ ದೇಹ ಗಂಡಿನ ಲೈಂಗಿಕ ತೃಷೆಯನ್ನು ಹೆಚ್ಚಿಸುತ್ತಾದ್ದರಿಂದ ಅದರಿಂದ ಆತನನ್ನು ಕಾಪಾಡಲು ಹೆಂಗುಸು ತನ್ನ ದೇಹವನ್ನು ಮುಚ್ಚಿಕೊಳ್ಳಬೇಕು ಎಂಬುದೇ ಬುರ್ಖಾದ ಅರ್ಥ. ಆದರೆ ಗಂಡು ತನ್ನ ನಿಯಂತ್ರಣ ಕಳೆದುಕೊಳ್ಳುತ್ತಾನೆ ಎನ್ನುವುದಕ್ಕೆ ಹೆಣ್ಣಿಗೇಕೆ ಶಿಕ್ಷೆ?"

-ಅಯಾನ್ ಹಿರ್ಸಿ ಅಲಿ, ಡಚ್ ಲೇಖಕಿ

ಸೋಮಶೇಖರ್ ಆಯೋಗದ ವರದಿಗೆ ರಾಮಾ ಜೋಯಿಸರ ಕರಸೇವೆ!

"ಚರ್ಚ್‌ಗಳ ಮೇಲೆ ದಾಳಿ ನಡೆಸಲು ಮತಾಂತರದ ಪ್ರಚೋದನೆಯೇ ಕಾರಣವಾಗಿದ್ದರಿಂದ ಚರ್ಚ್‌ಗಳ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಅಪರಾಧವೆಸಗಿದವರೆಲ್ಲರ ಮೇಲೆ ಹೂಡಿರುವ ಮೊಕದ್ದಮೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಸಲಹೆ ಸೂಕ್ತವಾಗಿದೆ."

-ರಾಮಾ ಜೋಯಿಸ್

ಸ್ಯಾಲಿಂಜರ್ ಎಂಬ ವಿಕ್ಷಿಪ್ತ ಲೇಖಕ!



ಕಂಡಹಾಗೆ

■ ಗೌರಿ ಲಂಕೇಶ್

ಅಪ್ಪ ಮತ್ತು ನನ್ನ ಮೆಚ್ಚಿನ ಲೇಖಕರಲ್ಲಿ ಒಬ್ಬರಾದ ಡಿ. ಸ್ಯಾಲಿಂಜರ್ ಮೊನ್ನೆ ತಮ್ಮ 91ನೇ ವಯಸ್ಸಿನಲ್ಲಿ ಕೊಂಡರು.

ಈ ಸ್ಯಾಲಿಂಜರ್ ವಿಚಿತ್ರ ದುಗುಡಗಳ ಮನುಷ್ಯ. ಜೀವಿತಾವಧಿಯಲ್ಲಿ ಈತ ಕೇವಲ 25 ಗಳ ಕಾಲ ಬರೆದ. ಹಾಗೆ ದಿದ್ದರಲ್ಲಿ ಒಂದೆರಡು ಕಿರು ಂಬರಿಗಳು, ಹತ್ತಾರು ಗತೆಗಳು ಸೇರಿದ್ದರೂ ಒಂದೇ ದು ಪೂರ್ಣ ಪ್ರಮಾಣದ ಂಬರಿಯಾದ 'ಕ್ಯಾಚರ್ ಇನ್ ರೈ' ಆತನಿಗೆ ಎಷ್ಟು ಪ್ರಿಯತೆ ತಂದಿತೆಂದರೆ ಅದನ್ನು ಡಿ ದಿಗ್ಭ್ರಾಂತನಾಗಿ ರಿಂದಲೇ ತಪ್ಪಿಸಿಕೊಂಡು ದ. ಅಮೆರಿಕದ ಒಂದು ಟ್ಟ ಊರಿನಲ್ಲಿ ಅನಾಮಿಕನಾಗಿ ಸಿದ. ಅಭಿಮಾನಿಗಳು, ಹಗಾರರು, ವಿಮರ್ಶಕರು, ಪತ್ರಕರ್ತರು–ಯಾರ ೂ ಸಿಗದಂತೆ, ಯಾರನ್ನು ಮಾತನಾಡಿಸದೆ, ತನ್ನ ವ ಬರಹಗಳನ್ನು ಪ್ರಕಟಿಸದೆ ಸಂಪೂರ್ಣವಾಗಿ ನಿಯಾದ. ಮೊನ್ನೆ ಜನವರಿ 27 ರಂದು ಅಷ್ಟೇ ನವಾಗಿ ಸತ್ತುಹೋದ.



ಸ್ಯಾಲಿಂಜರ್ ಬಗ್ಗೆ ಒಮ್ಮೆ 'ಮರೆಯುವ ಮುನ್ನ'ದಲ್ಲಿ ಹೀಗೆ ಒಂದು ಪುಟ್ಟ ಟಿಪ್ಪಣಿ ಬರೆದಿದ್ದರು:

ನೀವು ಜೆ.ಡಿ. ಸ್ಯಾಲಿಂಜರ್ ಹೆಸರನ್ನು ಕೇಳಿರಬಹುದು. ಹುಡುಗನಾಗಿದ್ದಾಗ ಲವಲವಿಕೆಯ, ಸೂಕ್ಷ್ಮಮನಸ್ಸಿನ ಯಾಗಿದ್ದ; ಹೆಣ್ಣುಗಳ ಸೌಂದರ್ಯಕ್ಕೆ ಖುಷಿಯಿಂದ ಸುತ್ತಿದ್ದ. ಆದರೆ ಜನರನ್ನು ನೋಡುತ್ತಾ ಹೋದಂತೆ, ು ಕಲಿತ ಎರಡು ಕಾಲೇಜುಗಳಲ್ಲಿ ದೊಡ್ಡವರ ಪ್ರಾಮಾಣಿಕತೆ ಮತ್ತು ಡಾಂಬಿಕತನವನ್ನು ಗಮನಿಸುತ್ತಾ ದಂತೆ ಬದಲಾಗತೊಡಗಿದ. ಮನುಷ್ಯನ ಉದ್ದೇಶ, ತ್ತ ಕುತಂತ್ರದ ಬಗ್ಗೆ ದಿಗ್ಭ್ರಮೆಗೊಂಡ. ಇಲ್ಲಿ ಸರಳತೆ, ಮಾಣಿಕತೆ, ಮುಗ್ಧತೆ ಸಾಧ್ಯವೆ– ಎಂದು ಕೇಳಿಕೊಂಡ. ು ಬರೆದ ಒಂದೇ ಒಂದು ಕಾದಂಬರಿ 'ಕ್ಯಾಚರ್ ದಿ ರೈ' ಮತ್ತು ಕೆಲವೇ ಕೆಲವು ಕತೆಗಳಲ್ಲಿ ತನ್ನ ಸಿಕೆಯನ್ನೆಲ್ಲ ನೋವಿನಿಂದ, ತಮಾಷೆಯಾಗಿ, ಭಾವುಕನಾಗಿ ಿದ. ಇದೆಲ್ಲ ಆದ ಮೇಲೆ ಏಕಾಂಗಿಯಾದ.

ಎಷ್ಟು ಏಕಾಂಗಿಯಾದನೆಂದರೆ ಮನುಷ್ಯರನ್ನು ಸಲು ನಿರಾಕರಿಸತೊಡಗಿದ. 1951ರಲ್ಲಿ ಬರೆದ ಂಬರಿಯಿಂದ ಬಂದ ಹಣದಲ್ಲಿ ಮನೆಯೊಂದನ್ನು ಡುಕೊಂಡು ಒಬ್ಬನೇ ಜೀವಿಸತೊಡಗಿದ. ಪರಿಚಿತರು, ತರು, ವಿಮರ್ಶಕರು– ಯಾರನ್ನೂ ನೋಡಲಿಲ್ಲ. ಈಗ 72 ವರ್ಷದವನಾದ ಸ್ಯಾಲಿಂಜರ್ ಹಾಗೇ ಸಿದ್ದಾನೆ. ಏನನ್ನು ಯೋಚಿಸುತ್ತಿದ್ದಾನೆ, ಕಲ್ಪಿಸಿಕೊಳ್ಳು ದ್ದಾನೆ– ಯಾರಿಗೂ ಗೊತ್ತಿಲ್ಲ. ಯಾವನಾದರೂ ತನ್ನ ನಚರಿತ್ರೆ ಬರೆದರೆ, ಊಹಿಸಿ ಸುಳ್ಳು ಲೇಖನ ಬರೆದರೆ ರ್ಟಿಗೆಳೆಯುವ ಬೆದರಿಕೆ ಹಾಕುತ್ತಾನೆ.


ಆತನಿಗೆ ಕ್ಷುದ್ರ ಮಾನವರಿಂದ ದೊರೆಯುವ ೋವಂತೂ ಇಲ್ಲ. ಆದರೆ ಎಷ್ಟು ಜನಕ್ಕೆ ಹೀಗೆ ಸುವ ಧೈರ್ಯ, ಆತ್ಮಸಂಪತ್ತು ಇರುತ್ತದೆ?

ಸ್ಯಾಲಿಂಜರ್‌ನಷ್ಟೇ ಕುತೂಹಲಕಾರಿ ಆತನ 'ಕ್ಯಾಚರ್' ಂಬರಿ. ಇದು 1951 ರಲ್ಲಿ ಪ್ರಕಟಗೊಂಡಿದ್ದರೂ, ತ್ತಿಗೂ ಅಷ್ಟೇ ಜನಪ್ರಿಯ ಮತ್ತು ವಿವಾದಾಸ್ಪದ ಕ. ಈಗಾಗಲೇ ಜಗತ್ತಿನಾದ್ಯಂತ ಈ ಕಾದಂಬರಿಯ ಕೋಟಿ ಪ್ರತಿಗಳು ಖರ್ಚಾಗಿದ್ದು ಈಗಲೂ ಪ್ರತಿ ಎರಡೂವರೆ ಲಕ್ಷ ಕಾಪಿಗಳು ಮಾರಾಟವಾಗುತ್ತವೆ.

ಇಪ್ಪತ್ತನೇ ಶತಮಾನದಲ್ಲಿ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡ ಅತ್ಯುತ್ತಮ ನೂರು ಪುಸ್ತಕಗಳ ಪಟ್ಟಿಯಲ್ಲಿ 'ಕ್ಯಾಚರ್' ಸದಾ ಇರುತ್ತದಲ್ಲದೆ, ಹೆಮಿಂಗ್ವೆ ನಂತರ ಪ್ರಭಾವಶಾಲಿ ಲೇಖಕ ಸ್ಯಾಲಿಂಜರ್ ಎಂದೇ ಬಹಳಷ್ಟು ಜನ ಭಾವಿಸುತ್ತಾರೆ.

ಅಂದಹಾಗೆ, ಹೆಮಿಂಗ್ವೆಯಿಂದ ಪ್ರಭಾವಿತನಾಗಿದ್ದ ಸ್ಯಾಲಿಂಜರ್ ಒಮ್ಮೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಆತನನ್ನು ಪ್ಯಾರಿಸ್‌ನಲ್ಲಿ ಭೇಟಿ ಆಗುತ್ತಾನೆ. ಮೇಲುನೋಟಕ್ಕೆ ಹೆಮಿಂಗ್ವೆ ಒರಟನಂತೆ ಕಂಡರೂ ಆತನ ಸ್ನೇಹಮಯ ಸ್ವಭಾವ ಮತ್ತು ವಿನಯವನ್ನು ಕಂಡ ಸ್ಯಾಲಿಂಜರ್ ಮಾರುಹೋಗುತ್ತಾನೆ. ಹಾಗೆಯೇ ಸ್ಯಾಲಿಂಜರ್‌ನ ಪ್ರತಿಭೆಯನ್ನು ನೋಡಿ ಹೆಮಿಂಗ್ವೆ "Jesus, he has a helluva talent" ಎಂದು ಉದ್ಗಾರ ವೆತ್ತುತ್ತಾನೆ.

ಸ್ಯಾಲಿಂಜರ್ ಚಿಕ್ಕವನಾಗಿದ್ದಾಗಿನಿಂದಲೂ ಬರಹಗಾರನಾಗಬೇಕೆಂದೇ ಬಯಸಿದ್ದವನು. ಈಗಿನಂತೆ ಆಗಲೂ ಅಮೆರಿಕದ 'ದಿ ನ್ಯೂಯಾರ್ಕರ್' ಎಂಬ ಪ್ರಖ್ಯಾತ ಪತ್ರಿಕೆಯೇ ಎಲ್ಲ ಸಾಹಿತಿಗಳು ಮತ್ತು ಸಾಹಿತ್ಯಾಸಕ್ತರ ಪ್ರಮುಖ ಪತ್ರಿಕೆಯಾಗಿತ್ತು. ಆ ಪತ್ರಿಕೆಯಲ್ಲಿ ಯಾರದ್ದೇ ಒಂದು ಪ್ರಬಂಧ, ಕತೆ, ಕವನ ಪ್ರಕಟಿತಗೊಂಡಿತೆಂದರೆ ಆತ ನಿಜವಾದ ಸಾಹಿತಿ ಎಂದೇ ಈಗಲೂ ಜನ ನಂಬಿದ್ದಾರೆ. ಆ ಪತ್ರಿಕೆಗೆ ಸ್ಯಾಲಿಂಜರ್ 22 ವರ್ಷದವನಾಗಿದ್ದಾಗಿನಿಂದಲೂ ತನ್ನ ಬರಹಗಳನ್ನು ಕಳುಹಿಸಲಾರಂಭಿಸಿದ. ಆದರೆ 1941 ರಿಂದ 1947 ರ ತನಕ ಆತನ ಎಲ್ಲಾ ಬರಹಗಳನ್ನು ತಿರಸ್ಕರಿಸಿದ 'ದಿ ನ್ಯೂಯಾರ್ಕರ್' 1948 ರಲ್ಲಿ ಆತನ ಒಂದು ಕಿರುಗತೆಯನ್ನು ನೋಡಿ ಎಷ್ಟು ಮೆಚ್ಚಿತೆಂದರೆ ಇನ್ನು ಮುಂದೆ ಸ್ಯಾಲಿಂಜರ್ ಈ ಪತ್ರಿಕೆಗೇ ತನ್ನ ಎಲ್ಲಾ ಬರಹಗಳನ್ನು ಕಳುಹಿಸಬೇಕೆಂದೂ, ಅದನ್ನು ತಿರಸ್ಕರಿಸುವ ಪ್ರಥಮ ಹಕ್ಕು ಪತ್ರಿಕೆಗೆ ಇರಬೇಕೆಂದೂ ಆತನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು. ಇದಾದ ಮೂರು ವರ್ಷಗಳ ನಂತರ ಪ್ರಕಟಗೊಂಡಿದ್ದೇ 'ದಿ ಕ್ಯಾಚರ್ ಇನ್ ದ ರೈ'.



ಹದಿನೇಳು ವರ್ಷ ವಯಸ್ಸಿನ ಹಾಲ್ಡನ್ ಕೌಲ್‌ಫೀಲ್ಡ್ ಎಂಬ ಯುವಕನೇ ಆ ಕಾದಂಬರಿಯ ಕೇಂದ್ರಬಿಂದು. ಆ ವಯಸ್ಸಿಗೆ ಸಹಜವಾದ ಧಿಮಾಕು, ಗೊಂದಲಗಳು, ಉಡಾಫೆ, ಜಗತ್ತಿನ ಬಗ್ಗೆ ಅಸಡ್ಡೆ ಹಿರಿಯರ ಬಗ್ಗೆ ಗುಮಾನಿ, ಪಡ್ಡೆಗಳ ಭಾಷಾ ಬಳಕೆ ಎಲ್ಲವನ್ನೂ ಹೊಂದಿರುವ ಕೌಲ್‌ಫೀಲ್ಡ್ ಯಾರಿಗೂ ಹೇಳದೆ ತಾನು ಓದುತ್ತಿರುವ ಶಾಲೆಯಿಂದ ನ್ಯೂಯಾರ್ಕ್ ನಗರಕ್ಕೆ ಓಡಿ ಬಂದಿದ್ದಾನೆ. ಅಲ್ಲಿ ಆತನಿಗಾಗುವ ಅನುಭವಗಳೇ ಕಾದಂಬರಿಯ ಕತೆ.

ಆ ಕಾದಂಬರಿಯ ಸಾರವನ್ನು ಕುರಿತು ಅಪ್ಪ ಬರೆದಿದ್ದನ್ನು ಇಲ್ಲಿ ನೀಡುತ್ತಿದ್ದೇನೆ:

ಹೋಲ್ಡನ್ ಕೌಲ್‌ಫೀಲ್ಡ್ ಎಂಬ ಹುಡುಗ ಸೂಕ್ಷ್ಮ ಮನಸ್ಸಿನವನು, ಯಾವುದು ಖರೆ, ಯಾವುದು ಗಿಲೀಟು, ಯಾವುದು vulgar ಎಂದು ತಕ್ಷಣ ಪತ್ತೆಹಚ್ಚಬಲ್ಲವನು... ಅವನು ತನ್ನ ಸ್ಕೂಲ್ ಬಗ್ಗೆ ಹೇಳುತ್ತಿದ್ದಾನೆ. ಸುಳ್ಳು ಅಧ್ಯಾಪಕರು, ಸುಡುಗಾಡು ಪಾಠಗಳು, ಸ್ಕೂಲನ್ನು ಕಟ್ಟಿಸಿಕೊಟ್ಟ ದಾನಿ... ಈ ದಾನಿಯೊಬ್ಬ ಖದೀಮ; ಕಳ್ಳದಾರಿಗಳಲ್ಲಿ ಹಣ ಗಳಿಸಿದವನು. ವಂಚನೆಯನ್ನೇ ಜೀವನಶೈಲಿಯನ್ನಾಗಿ ಮಾಡಿಕೊಂಡವನು. ವರ್ಷಕ್ಕೊಮ್ಮೆ ಸ್ಕೂಲಿಗೆ ಆಹ್ವಾನಿತನಾಗಿ ತನ್ನ ಹಳೇ ಜೋಕ್‌ಗಳು, ಸುಳ್ಳುಕತೆಗಳು, ವಿಕೃತ ಉದಾಹರಣೆಗಳೊಂದಿಗೆ ನೂರಾರು ಗಂಟೆಗಳ ಕಾಲ ಸ್ಕೂಲಿನ ಮಕ್ಕಳಿಗೆ ಭಾಷಣ ಕೊಡುತ್ತಾನೆ. ಆತನ ಒಂದು ಗಂಟೆಯ ಭೀಕರ ಭಾಷಣ ಹಾಗೆ ನೂರಾರು ಗಂಟೆಗಳಂತೆ ಕೌಲ್‌ಫೀಲ್ಡ್‌ಗೆ ಭಾಸವಾಗುತ್ತದೆ! ಒಂದು ದಿನ ಆ ದಾನಿಯ ಭಾಷಣ ಜೋರಾಗಿ ನಡೆಯುತ್ತಿದ್ದಾಗ ಸಭೆಯಲ್ಲಿದ್ದ ಒಬ್ಬ ಹುಡುಗ ಭಯಂಕರವಾಗಿ ಹೂಸು ಬಿಡುತ್ತಾನೆ. ಇಡೀ ಸಭೆ ಈ ಹೂಸಿನ ಶಬ್ದಕ್ಕೆ ನಗತೊಡಗುತ್ತದೆ; ಆದರೆ ಗಣ್ಯ ತನ್ನ ಭಾಷಣ ರಂಜಿಸುತ್ತಿದೆ ಎಂದು ತಿಳಿದು ತನ್ನ ತಡೆರಹಿತ ಭಾಷಣವನ್ನು ಮುಂದುವರಿಸುತ್ತಾನೆ. ಈ ಸ್ಕೂಲಿನ ಹುಡುಗರು, ಅಧ್ಯಾಪಕರು, ವಿದ್ಯಾರ್ಥಿನಿಯರು, ಆಟಗಾರರು ಎಲ್ಲರೂ ವಿಕೃತ ನಾಟಕವೊಂದರಲ್ಲಿ ಮುಳುಗಿಹೋಗಿರುವಂತೆ ಕಾಣಿಸಿ ಕೌಲ್‌ಫೀಲ್ಡ್ ಅದನ್ನು ಬಿಟ್ಟು ತನ್ನ ನ್ಯೂಯಾರ್ಕ್ ನಗರಕ್ಕೆ ಹೊರಡುತ್ತಾನೆ. ದಾರಿಯಲ್ಲಿ ಈತ ಸಿನಿಮಾ ನಟರ ಬಗ್ಗೆ ಕನಸುವ ಬೋಗಸ್ ಹುಡುಗಿಯರು, ಸೂಳೆಯರು, ಸಂಪನ್ನೆಯರಾದ ತಲೆಚಿಟ್ಟು ಹಿಡಿಸುವ ಹೆಂಗಸರು, ತಮ್ಮ ವ್ಯರ್ಥ ಸೇವೆಯಲ್ಲಿ ಮುಳುಗಿರುವ ಚರ್ಚಿನ ಸಿಸ್ಟರುಗಳು–ಹೀಗೆ ಅನೇಕರನ್ನು ನೋಡುತ್ತಾನೆ. ಒಂದು ನಡುರಾತ್ರಿ ಒಂದು ಬಾಡಿಗೆ ಟ್ಯಾಕ್ಸಿ ಕರೆದು, ಆ ಟ್ಯಾಕ್ಸಿ ಡ್ರೈವರ್‌ನ ಹೆಸರು ಹೋವಿಟ್ಜ್ ಎಂದು ಕೇಳಿಕೊಳ್ಳುತ್ತಾನೆ. ಡ್ರೈವರ್ ಹೋವಿಟ್ಜ್ ತನ್ನದೇ ಆದ ಬಾಡಿಗೆ, ಸಣ್ಣ ಆದಾಯ, ಗೆಳೆಯರು, ಹೆಂಡತಿಮಕ್ಕಳ ಲೋಕದಲ್ಲಿ ವ್ಯವಹರಿಸುವವನು. ಅವನಿಗೆ ಕೌಲ್‌ಫೀಲ್ಡ್‌ನ ಅತೃಪ್ತಿ ಗೊತ್ತಿಲ್ಲ; ಆತನ ಸಂತೋಷಗಳು ಅವನಿಗೆ ತಿಳಿಯುವುದಿಲ್ಲ.

'ಎಲ್ಲಿಗೆ ಟ್ಯಾಕ್ಸಿ ಬಿಡಲಿ?' ಎಂದು ಹೋವಿಟ್ಜ್ ಕೇಳಿದರೆ, 'ಅಲ್ಲೊಂದು ಕೊಳ ಇದೆಯಲ್ಲ– ಈ ವಿಳಾಸದಲ್ಲಿ– ಅಲ್ಲಿಗೆ ಬಿಡು. ಅಲ್ಲಿಯ ಬಾತುಕೋಳಿಗಳನ್ನು ನಾನು ನೋಡಬೇಕು' ಅನ್ನುತ್ತಾನೆ ಕೌಲ್‌ಫೀಲ್ಡ್. 'ಆ ಬಾತುಕೋಳಿಗಳನ್ನು ನೀನು ನೋಡಿದ್ದೀಯಾ?' ಎಂದು ಡ್ರೈವರ್‌ನನ್ನು ಕೇಳುತ್ತಾನೆ.

'ಆ ಕೋಳಿಗಳನ್ನು ತಗೊಂಡು ನನಗೇನು? ಏನ್ ಸಮಾಚಾರ?' ಎಂದು ಕೇಳುತ್ತಾನೆ ಹೋವಿಟ್ಜ್.

'ಅವು ವಸಂತಋತುವಿನಲ್ಲಿ ತೇಲುತ್ತವೆ, ಚಳಿಗಾಲದಲ್ಲಿ ಹೇಗೆ ಜೀವಿಸುತ್ತವೆ? ಅವು ಎಲ್ಲಿಗೆ ಹೋಗುತ್ತವೆ?'

'ಏನಂದೆ? ಯಾರು ಎಲ್ಲಿಗೆ ಹೋದರೆ ನಿನಗೇನು?'

'ಹಾಗಲ್ಲ, ಸಿಟ್ಟು ಮಾಡಬೇಡ ಮಾರಾಯ. ಉತ್ತರ ಹೇಳು, ಮಂಜುಗಡ್ಡೆಯಲ್ಲಿ ಮೀನು ಹೇಗೆ ಇರುತ್ತದೆ?'

'ಯಾರು ಹ್ಯಾಗಿದ್ದರೆ ನಿನಗೇನು? ನೋಡಯ್ಯ, ಅದೆಲ್ಲ ರಾಮಾಯಣ ನನಗೇನು ಗೊತ್ತು? ಅದನ್ನ ತಗೊಂಡು ನೀನೇನ್ ಮಾಡ್ತಿ?'

'ಕೋಪಿಸಿಕೊಳ್ಳಬೇಡ... ಮಂಜಿನಲ್ಲಿ ಹೇಗಿರುತ್ತವೆ?'

'ನೋಡು ಮಿಸ್ಟರ್, ಮಂಜುಗಡ್ಡೆಯಲ್ಲಿ ಹೂತುಹೋಗಿ ಆರಾಮಾಗಿರ್ತವೆ, ತಿಳೀತ? ಮೀನುಗಳ ದೇಹ ಜೊಂಡು, ಕಸ ಎಲ್ಲವನ್ನು ಆಹಾರವಾಗಿ ಹೀರಿಕೊಳ್ಳಬಹುದು. ಆರಾಮಾಗಿರ್ತವೆ.'

'ರೇಗಬೇಡ ಕಣಯ್ಯ.'

'ನಾನೆಲ್ಲಿ ರೇಗಿದೆ? ಎಲ್ಲಿಗೆ ಹೋಗಬೇಕು ಗೊತ್ತಿಲ್ಲದೆ ಏನೇನೋ ಕೇಳ್ತಿದ್ದಿ.'

'ಒಂದೆರಡು ಗ್ಲಾಸ್ ಗುಂಡು ಹಾಕಿಸ್ತೇನೆ, ಬಾರ್‌ಗೆ ಬರ್ತೀಯಾ?'

'ಛೆ ನನಗೆ ಟೈಮಿಲ್ಲ' ಎನ್ನುತ್ತಾನೆ ಹೋವಿಟ್ಜ್.

ಹೀಗೆ ಎಲ್ಲೆಲ್ಲೂ ತೊಲಗಿಸಲ್ಪಟ್ಟ ಕೌಲ್‌ಫೀಲ್ಡ್ ಒಬ್ಬಳು ಕಾಲ್‌ಗರ್ಲ್ ಕರೆಸಿಕೊಂಡು ಕರುಣೆಯಿಂದ, ಭಯದಿಂದ ಏನೇನೂ ಮಾಡಲಾರದೆ ಅವಳಿಗೆ ಬಿಟ್ಟಿಯಾಗಿ ಐದು ಡಾಲರ್ ಕೊಟ್ಟು ಕಳಿಸುತ್ತಾನೆ....

ಲೇಖಕ ಪೊರೆ ಬಿಡುತ್ತಾ ಜೀವಿಸುತ್ತಾನೆ; ಸುತ್ತಣ ಜೀವನದ ಪೊರೆ ತೆಗೆಯುತ್ತಾ ಬರೆಯುತ್ತಾನೆ. ಈ ದೇಶದಲ್ಲಿ ಪೊರೆಯನ್ನೇ ನಿಜವಾದ ಜೀವನ ಎಂದು ತಿಳಿದು ಸಾವಿರಾರು ವರ್ಷ ಸತ್ತ ಮಾತುಗಳನ್ನು ಬಳಸುತ್ತ ಯಾಂತ್ರಿಕ ಛಂದಸ್ಸುಗಳಲ್ಲಿ ಹೇಳುತ್ತ ಎಲ್ಲವನ್ನೂ ಕೊಂದು ಹಾಕಿದ್ದರು.

ಈ ಕಾದಂಬರಿಯನ್ನು ಸಿನಿಮಾ ಮಾಡಲು ಅನುಮತಿ ನೀಡುವಂತೆ ಪ್ರಖ್ಯಾತ ಚಿತ್ರ ನಿರ್ದೇಶಕ ಸ್ಟೀವನ್ ಸ್ಪೀಲ್‌ಬರ್ಗ್ ಸೇರಿದಂತೆ ಬಹಳಷ್ಟು ಜನ ಸ್ಯಾಲಿಂಜರ್‌ನನ್ನು ಬೇಡಿಕೊಂಡರು. ಆದರೆ ಅದಕ್ಕೆ ಸ್ಯಾಲಿಂಜರ್ ಎಂದೂ ಸಮ್ಮತಿಸಲಿಲ್ಲ. ಆದರೆ ಹಿಂದೊಮ್ಮೆ (1957) ಸ್ಯಾಲಿಂಜರ್ ಮಿತ್ರರೊಬ್ಬರಿಗೆ ಒಂದು ಪತ್ರದಲ್ಲಿ ಹೀಗೆ ಬರೆದಿದ್ದ: "ಮುಂದೊಂದು ದಿನ ಇದನ್ನು ಯಾರಾದರೂ ಸಿನಿಮಾ ಮಾಡಬಹುದು. ನಾನು ಹೆಚ್ಚು ಹಣ ಗಳಿಸದೇ ಸಾಯುವ ಸಾಧ್ಯತೆಗಳಿರುವುದರಿಂದ ಈ ಕಾದಂಬರಿ ಮೇಲಿನ ಹಕ್ಕುಗಳನ್ನು ನನ್ನ ಹೆಂಡತಿ ಮತ್ತು ಮಗಳಿಗೆ ಬಿಟ್ಟು ಹೋಗುತ್ತೇನೆ. ಅವರಿಗೆ ಹಣದ ಅವಶ್ಯಕತೆ ಎದುರಾದರೆ ಆಗ ಅನುಮತಿ ನೀಡಲಿ. ನನಗೆ ಸಂತೋಷ ನೀಡುವ ವಿಚಾರ ಯಾವುದೆಂದರೆ ಅವರ ಪರಿಣಾಮವನ್ನು ನೋಡಲು ನಾನಂತೂ ಇರುವುದಿಲ್ಲ."

ಸ್ಯಾಲಿಂಜರ್ ಎಂತಹ ವಿಚಿತ್ರ ವ್ಯಕ್ತಿ ಎಂದರೆ ಆತ ಇತ್ತೀಚಿಗಿನ ತನಕ ಬರೆಯುವುದನ್ನು ಮುಂದುವರೆಸಿದ್ದರೂ ಆತ ಅದ್ಯಾವುದನ್ನು ಪ್ರಕಟಿಸಲೇ ಇಲ್ಲ. ಅಪರೂಪಕ್ಕೆ ಆತ 1974 ರಲ್ಲಿ ನೀಡಿದ ಒಂದು ಸಂದರ್ಶನದಲ್ಲಿ "ಪ್ರಕಟಿಸದೇ ಇರುವುದರಲ್ಲಿ ಅದ್ಭುತವಾದ ನೆಮ್ಮದಿ ಇದೆ. ಬರೆಯುವುದು ನನ್ನ ಪ್ರೀತಿಯ ಹವ್ಯಾಸ. ಆದರೆ ನಾನು ನನಗಾಗಿ, ನನ್ನ ಸಂತೋಷಕ್ಕಾಗಿ ಬರೆಯುತ್ತೇನೆ" ಎಂದು ಹೇಳಿದ್ದ. ಆತನ ಪರಿಚಿತರೊಬ್ಬರು ಹೇಳಿರುವಂತೆ ಸ್ಯಾಲಿಂಜರ್ ಇದುವರೆಗೂ ಅಪ್ರಕಟಿತ 15 ಕಾದಂಬರಿಗಳನ್ನು ಬರೆದಿದ್ದಾನಂತೆ. ಅವನ್ನು ಬಹಿರಂಗಪಡಿಸದೇ ಇರುವುದಕ್ಕೆ ಕಾರಣ ಅವು ಆತನಿಗೆ ಇಷ್ಟವಾಗಲಿಲ್ಲವೋ ಅಥವಾ 'ಕ್ಯಾಚರ್'ನ ಮಟ್ಟಿಗೆ ಬಂದಿಲ್ಲ ಎಂಬ ಅಸಮಾಧಾನವೋ, ಯಾರಿಗೂ ಗೊತ್ತಿಲ್ಲ.

ಸ್ಯಾಲಿಂಜರ್ ಬಗ್ಗೆ ಇನ್ನೊಂದು ಮಾತನ್ನು ಹೇಳಿ ಇದನ್ನು ಮುಗಿಸುತ್ತೇನೆ. ಸಾರ್ವಜನಿಕ ಬದುಕು, ಪ್ರಚಾರ, ಅಭಿಮಾನಿಗಳು... ಎಲ್ಲವನ್ನೂ ತ್ಯಜಿಸಿ ಕಾರ್ನಿಷ್ ಎಂಬ ಪುಟ್ಟ ನಗರದಲ್ಲಿ ತನ್ನ ಹೆಂಡತಿಯೊಂದಿಗೆ ವಾಸಿಸಲಾರಂಭಿಸಿದಾಗ ಆ ನಗರದ ಜನರೂ ಸ್ಯಾಲಿಂಜರ್‌ನನ್ನು ಆತ್ಮೀಯವಾಗಿ ಸ್ವಾಗತಿಸಿದರಲ್ಲದೆ, ಆತನ ಗೌಪ್ಯತೆಯನ್ನು ಕಾಪಾಡಲು ಸಹಕರಿಸಿದರು. ಸ್ಯಾಲಿಂಜರ್‌ನನ್ನು ನೋಡಲು, ಮಾತನಾಡಿಸಲು ಆ ನಗರದ ಮೇಲೆ ದಾಳಿ ಇಡುತ್ತಿದ್ದವರನ್ನು ದಾರಿ ತಪ್ಪಿಸುವುದೇ ಕಾರ್ನಿಷ್ ಜನರಿಗೆ ಒಂದು ಹವ್ಯಾಸವೂ, ಪೈಪೋಟಿಯೂ ಆಯಿತು.

"ಸ್ಯಾಲಿಂಜರ್ ಮನೆಯೆಲ್ಲಿದೆ" ಎಂದು ವಿನಮ್ರವಾಗಿ ಯಾರಾದರು ಕೇಳಿದರೆ ಆ ಮಾಹಿತಿಯನ್ನು ಬಿಟ್ಟುಕೊಡದೇ ದಿಕ್ಕುದೆಸೆಯಿಲ್ಲದಂತೆ ನಗರವನ್ನು ಸುತ್ತಾಡುವಂತೆ ಮಾಡುತ್ತಿದ್ದರು. ಅದೇ ಪ್ರಶ್ನೆಯನ್ನು ಧಿಮಾಕಿನಿಂದ ಕೇಳಿದರೆ ಊರಿನಿಂದ ಹತ್ತಾರು ಕಿಲೋಮೀಟರ್ ದೂರದ ಪ್ರದೇಶದಲ್ಲಿ ಯಾವ ಮನೆಯೂ ಇಲ್ಲದ ಜಾಗದಲ್ಲಿ ಪರದಾಡುವಂತೆ ಮಾಡುತ್ತಿದ್ದರು. ಇದೆಲ್ಲದರ ನಡುವೆ ಸ್ಯಾಲಿಂಜರ್ ಸರ್ವೇಸಾಮಾನ್ಯನಂತೆ ಚರ್ಚ್, ಪುಸ್ತಕದ ಅಂಗಡಿ, ಹೋಟೆಲ್ ಎಲ್ಲವುಗಳಿಗೆ ಭೇಟಿ ನೀಡುತ್ತಾ ನೆಮ್ಮದಿಯಿಂದ ಬದುಕುವಂತೆ ನೋಡಿಕೊಂಡರು. ಈ ಕಾರಣಕ್ಕಾಗಿಯೇ ಮೊನ್ನೆ ಸ್ಯಾಲಿಂಜರ್ ಹೆಂಡತಿ ಆ ನಗರದ ವಾಸಿಗಳಿಗೆ ಕೃತಜ್ಞತೆಯನ್ನು ಹೇಳಿದ್ದಾರೆ.

ಐದು ನಿಮಿಷಗಳ ಖ್ಯಾತಿಗಾಗಿ ಹಪಹಪಿಸುವ ಜಗತ್ತಿನಲ್ಲಿ ಯಾವ ಖ್ಯಾತಿಯೂ ಬೇಡವೆಂದು ಬದುಕಿದ ಸ್ಯಾಲಿಂಜರ್ ಅಪರೂಪದ ವ್ಯಕ್ತಿ ಅಲ್ಲವೆ?

ರಾಮಚಂದ್ರಾಪುರ ಮಠದ ಸೆಕ್ಸ್ ಹಗರಣ CNN-IBNನಲ್ಲಿ....



ಇದೊಂದು ಜಿಗುಪ್ಸೆ ತರಿಸುವ ಸಂಗತಿ.

ರಾಘವೇಶ್ವರ ಸ್ವಾಮಿಯ ರಾಮಚಂದ್ರಾಪುರ ಮಠದೊಳಗೆ ಜಗದೀಶ್ ಶರ್ಮ ಎಂಬ ನೀಚನು ಅಲ್ಲಿನ ಕೆಲವು ವಿದ್ಯಾರ್ಥಿನಿಯರ ಮೇಲೆ ನಡೆಸಿದ ದೌರ್ಜನ್ಯದ ಬಗ್ಗೆ ಇಡೀ ರಾಜ್ಯದ ಜನತೆಗೆ ತಿಳಿದಿದೆ. ಆದರೂ ಬಿಜೆಪಿ ಸರ್ಕಾರ ಸ್ವಾಮಿ ಹಾಗೂ ಜಗದೀಶ ಶರ್ಮನ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳದೆ ಮೌನವಾಗಿದೆ. ಈಗ ಈ ಹಗರಣವು ರಾಷ್ಟ್ರಮಟ್ಟದಲ್ಲಿ ಬೆಳಕಿಗೆ ಬರಲಿದೆ. CNN-IBN ನ್ಯೂಸ್ ಚಾನಲ್‌ನಲ್ಲಿ ನಾಳೆ ದಿನಾಂಕ 5.2.2010 ರ ಶುಕ್ರವಾರ ಸಂಜೆ ಈ ಹಗರಣ ಹಾಗೂ ಯಡಿಯೂರಪ್ಪನ ಸರ್ಕಾರದ ಶಾಮೀಲಿನ ಕುರಿತ ಒಂದು ವಿಶೇಷ ವರದಿ ಪ್ರಸಾರವಾಗುತ್ತಿದೆ.

ಜಿಗುಪ್ಸೆ ಹುಟ್ಟಿಸುವ ಸಂಗತಿ ಏನೆಂದರೆ ಮುಖ್ಯಮಂತ್ರಿ ಯಡಿಯೂರಪ್ಪ, ಗೃಹ ಸಚಿವ ಆಚಾರ್ಯ ಹಾಗೂ ಶಿವಮೊಗ್ಗ ಎಸ್‌ಪಿ ಮುರುಗನ್ ಎಲ್ಲರೂ ಈ ವರದಿ ಟೆಲಿಕಾಸ್ಟ್ ಆಗದಂತೆ ತಡೆಯಲು ಇನ್ನಿಲ್ಲದ ಪ್ರಯತ್ನ ಮಾಡಿ ವಿಫಲರಾಗಿದ್ದಾರೆ. CNN-IBN ದೆಹಲಿ ಕಚೇರಿಗೇ ಫೋನ್ ಮಾಡಿರುವ ಈ ಮಾನಗೇಡಿಗಳು ಅಂಥ ಹಗರಣ ನಡೆದೇ ಇಲ್ಲ ಎಂದಿದ್ದಾರೆ. ಆದರೆ ರುಚಿಕಾ ಪ್ರಕರಣದ ಬೆನ್ನಲ್ಲೇ ಒಂದು ಮಠದೊಳಗೆ ನಡೆದಿರುವ ಈ ಹಗರಣವನ್ನು ಪ್ರಸಾರ ಮಾಡಲು CNN-IBN ನಿರ್ಧರಿಸಿದೆ. ಅವರ ಈ ಬದ್ಧತೆ ಪ್ರಶಂಸನೀಯ.

ಅಂದಹಾಗೆ ಈ ವರದಿ ಸಿದ್ಧಪಡಿಸಿರುವುದು ಕನ್ನಡಿಗರೇ ಆದ ಡಿ.ಪಿ. ಸತೀಶ್.


ಬಚ್ಚಿಡೋರು ಇರೋ ತನಕ ಕೆದಕೋರೂ ಇರ್ತಾರಲ್ಲವೆ?

ಮಧ್ಯಪ್ರದೇಶ ಸರ್ಕಾರದ ಅಧಿಕೃತ ಮ್ಯಾಗಜೆನ್ 'ಮಧ್ಯಪ್ರದೇಶ ಸಂದೇಶ' ಪತ್ರಿಕೆಯು ಇತ್ತೀಚಿನ ತನ್ನ ಸಂಚಿಕೆಯಲ್ಲಿ ಮಧ್ಯಪ್ರದೇಶದ ಸಿಯೋನಿ ಜೈಲಿನಲ್ಲಿದ್ದ 41 ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯೊಂದನ್ನು ಪ್ರಕಟಿಸಿದೆ. ಈ ಪಟ್ಟಿಯಲ್ಲಿ ಸುಭಾಷ್ ಚಂದ್ರ ಬೋಸ್ ಮತ್ತು ಆಚಾರ್ಯ ವಿನೋಭಾ ಭಾವೆಯವರು ಮೊದಲೆರಡು ಸ್ಥಾನಗಳನ್ನು ಆಕ್ರಮಿಸಿಕೊಂಡರೆ ಮೂರನೇ ಸ್ಥಾನವನ್ನು ಚೆಡ್ಡಿಗಳ ಗುರೂಜಿ ಅಲಿಯಾಸ್ ಗೋಳ್ವಾಲ್ಕರ್ ಹೆಸರು ತುಂಬಿದೆ. ಈ ಪಟ್ಟಿಯಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದೆಲ್ಲರ ಬಗ್ಗೆ ಅವರು ನಿರ್ದಿಷ್ಟವಾಗಿ ಯಾವ ದಿನಾಂಕದಿಂದ ಯಾವ ದಿನಾಂಕದ ತನಕ ಒಟ್ಟು ಎಷ್ಟು ಸಮಯ ಸಿಯೋನಿ ಜೈಲಿನಲ್ಲಿದ್ದರು ಎಂಬ ವಿವರಗಳನ್ನು ಕೊಡಲಾಗಿದೆ. ಆದರೆ ಅಂತಹ ಮಾಹಿತಿ ಕೊಡದಿರುವ ಇಬ್ಬರಲ್ಲಿ ಒಬ್ಬರ ಬಗ್ಗೆ ಮಾಹಿತಿ ಲಭ್ಯವಿರದ ಕಾರಣ ಈ ವಿವರಗಳನ್ನು ಕೊಡಲಾಗಿಲ್ಲ, ಆದರೆ, ವಿಶೇಷ ಎಂದರೆ ಇನ್ನೊಬ್ಬರ ಬಗ್ಗೆ ಮಾಹಿತಿಯಿದ್ದರೂ ಕೊಡಲಾಗಿಲ್ಲ, ಆ ಮಹಾಶಯ ಯಾರೆಂದರೆ ಗೋಳ್ವಾಲ್ಕರ್.

ಇದಿಷ್ಟನ್ನೇ ಇಟ್ಟುಕೊಂಡು ಗೋಳ್ವಾಲ್ಕರ್ ಎಂಥ ಸ್ವಾತಂತ್ರ್ಯ ಹೋರಾಟ ನಡೆಸಿದ್ದಕ್ಕಾಗಿ ಆತನನ್ನು ಸಿಯೋನಿ ಜೈಲಿಗೆ ಹಾಕಲಾಯಿತೆಂದು ಕೆದಕುತ್ತಾ ಹೋದರೆ ಬಹಳ ಮಜಾ ಅನ್ನಿಸುವ ವಿಚಾರ ಹೊರಬೀಳುತ್ತದೆ.

ಬ್ರಿಟಿಷರು ಸುಭಾಷ್ ಚಂದ್ರ ಭೋಸ್ ಅವರನ್ನು ಜನವರಿ 3, 1932 ರಿಂದ ಮೇ 30, 1932ರ ತನಕ ಸಿಯೋನ್ ಜೈಲಿನಲ್ಲಿ ಕೂಡಿಹಾಕಿದ್ದರೆ ವಿನೋಭಾ ಭಾವೆಯವರನ್ನು ಏಪ್ರಿಲ್ 8, 1944 ರಿಂದ ಜುಲೈ 9, 1945ರ ತನಕ ಈ ಜೈಲಿನಲ್ಲಿಟ್ಟಿದ್ದರು. ಅದೇ ರೀತಿ ಗೋಳ್ವಾಲ್ಕರ್ ಒಬ್ಬನನ್ನು ಹೊರತುಪಡಿಸಿ ಉಳಿದವರನ್ನು ಬ್ರಿಟಿಷರು 1930 ಮತ್ತು 1945ರ ಅವಧಿಯಲ್ಲಿ ಬೇರೆ ಬೇರೆ ವರ್ಷಗಳಲ್ಲಿ ಬಂಧಿಸಿದ್ದರು. ಸ್ವಾತಂತ್ರ್ಯ ಚಳವಳಿ ಉಕ್ಕೇರಿ ಬರುತ್ತಿದ್ದ ಆ ಕಾಲಘಟ್ಟದಲ್ಲಿ ಬ್ರಿಟಿಷರು ಸ್ವಾತಂತ್ರ್ಯ ಹೋರಾಟಗಾರರನ್ನು ಈ ರೀತಿ ಬಂಧಿಸಿಡುವುದು ಮಾಮೂಲಿಯಾಗಿತ್ತು.

ಗೋಳ್ವಾಲ್ಕರ್ ಕೂಡ ಸಿಯೋನ್ ಜೈಲಿನಲ್ಲಿದ್ದದ್ದು ನಿಜ. ಆತ ಯಾವ ಅವಧಿಯಿಂದ ಯಾವ ಅವಧಿಯವರೆಗೆ ಅಲ್ಲಿದ್ದ ಎಂಬುದಕ್ಕೆ ಸ್ಪಷ್ಟವಾದ ದಾಖಲೆಗಳೂ ಇವೆ. ಹಾಗಿದ್ದರೂ ಏಕೆ ಅದನ್ನು ಬಹಿರಂಗಪಡಿಸಿಲ್ಲವೆಂದರೆ ಗೋಳ್ವಾಲ್ಕರ್ ಸಿಯೋನ್ ಜೈಲಿನಲ್ಲಿದ್ದದ್ದು ಸ್ವಾತಂತ್ರ್ಯ ಹೋರಾಟ ಉತ್ತುಂಗದಲ್ಲಿದ್ದ ಕಾಲಘಟ್ಟದಲ್ಲಿ ಅಲ್ಲ! ಬದಲಾಗಿ ಬ್ರಿಟಿಷರು ತೊಲಗಿ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಒಂದೂವರೆ ವರ್ಷದ ನಂತರ!!




ಗೋಳ್ವಾಲ್ಕರ್ ಜನವರಿ 1, 1949 ರಿಂದ ಜೂನ್ 6, 1949ರ ತನಕ ಆರು ತಿಂಗಳುಗಳ ಕಾಲ ಜೈಲಿನಲ್ಲಿದ್ದ. ಬ್ರಿಟಿಷರು ದೇಶಬಿಟ್ಟು ತೊಲಗಿದ ಮೇಲೆ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಒಂದೂವರೆ ವರ್ಷವಾದ ಮೇಲೆ ಗೋಳ್ವಾಲ್ಕರ್ ಎಂಬ ಮಹಾಶಯ ಅದೆಂಥ ಸ್ವಾತಂತ್ರ್ಯ ಹೋರಾಟ ನಡೆಸುತ್ತಿದ್ದ?!

ಅಸಲೀಯತ್ತೇನೆಂದರೆ ಆರೆಸ್ಸೆಸ್‌ನ ನಾಥೂರಾಮ್ ಗೋಡ್ಸೆ 1948ರಲ್ಲಿ ಮಹಾತ್ಮ ಗಾಂಧಿಯನ್ನು ಕೊಂದ ಪರಿಣಾಮವಾಗಿ ಆರೆಸ್ಸೆಸ್ ಸಂಘಟನೆಯನ್ನು ದೇಶದಾದ್ಯಂತ ನಿಷೇಧಿಸಲಾಗಿತ್ತು, ಅದರ ಬೆನ್ನಲ್ಲೇ ಆರೆಸ್ಸೆಸ್ ನಾಯಕರನ್ನೂ ಕಾರ್ಯಕರ್ತರನ್ನೂ ಬಂಧಿಸಿ ಜೈಲಿನಲ್ಲಿಡಲಾಗಿತ್ತು, ಅದರ ಭಾಗವಾಗಿಯೇ ಗೋಳ್ವಾಲ್ಕರ್ ಕೂಡ ಜೈಲು ಪಾಲಾಗಿದ್ದನೇ ಹೊರತು ಸ್ವಾತಂತ್ರ್ಯ ಚಳವಳಿಗೂ ಗೋಳ್ವಾಲ್ಕರ್‌ಗೂ ಏನೇನೂ ಸಂಬಂಧವಿಲ್ಲ, ಆದರೂ ಈಗ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಲ್ಲಿ ಗೋಳ್ವಾಲ್ಕರ್‌ನ ಹೆಸರನ್ನೂ ನಮೂದಿಸಿ ಆತನಿಗೆ 'ಸ್ವಾತಂತ್ರ್ಯ ಯೋಧ' ಬಿರುದು ಅಂಟಿಸುವ ಷಡ್ಯಂತ್ರವನ್ನು ಮಾಡಲು ಸಂಘಪರಿವಾರ ಮುಂದಾಗಿದೆ.

ವಾಸ್ತವವಾಗಿ ಭೋಸ್, ಭಾವೆ ಮತ್ತು ಮಹಾತ್ಮಾ ಗಾಂಧಿಜಿ ತರಹದವರು ದೇಶದ ಸ್ವಾತಂತ್ರ್ಯಕ್ಕಾಗಿ ಜೈಲುಪಾಲಾಗಿದ್ದರೆ, ಗೋಳ್ವಾಲ್ಕರ್ ಜೈಲು ಸೇರಿದ್ದು ಮಹಾತ್ಮರ ಕೊಲೆಗೆ ತಂತ್ರ ರೂಪಿಸಿದ್ದರು ಎಂಬ ಆರೋಪದ ಮೇಲೆ.

ಎಲ್ಲಿ ಸ್ವಾತಂತ್ರ್ಯ ಹೋರಾಟ, ಎಲ್ಲಿ ಕೊಲೆ ಆರೋಪ?!

ತನ್ನ ಢೋಂಗಿ ನಾಯಕರ ಅಸಲಿ ದೇಶಪ್ರೇಮವನ್ನು ಚೆಡ್ಡಿಗಳು ಬಚ್ಚಿಡಲು ಯತ್ನಿಸಿದಷ್ಟೂ ಅದನ್ನು ಕೆದಕಿ ನಿಜ ಸುದ್ದಿಯನ್ನು ಹೊರಗೆಡವುವವರು ಇದ್ದೇ ಇರುತ್ತಾರೆ!




ಸುತ್ರ-ಮುತ್ರ

ಕುಮಾರ್ ಬುರಡಿಕಟ್ಟೆ

ಸುಪ್ರೀಂ ಕೋರ್ಟ್ ಮತ್ತು ಪ್ರಾದೇಶಿಕ ಪೀಠ

ಕೇಂದ್ರ ಸರ್ಕಾರದ ಕಾನೂನು ಸಚಿವಾಲಯ ಹಾಗೂ ನ್ಯಾಯಾಂಗದ ನಡುವಿನ ಮುಸುಕಿನ ಗುದ್ದಾಟ ಮುಂದುವರಿದಿದೆ.

ನ್ಯಾಯಾಧೀಶರೂ ಪ್ರಜೆಗಳಿಗೆ ಮತ್ತು ದೇಶದ ಸಂವಿಧಾನಕ್ಕೆ ಉತ್ತರದಾಯಿಗಳಾಗಿರಬೇಕು, ತಪ್ಪಿತಸ್ಥ ನ್ಯಾಯಾಧೀಶರ ವಿರುದ್ಧ ಶಿಸ್ತುಕ್ರಮ ಜರುಗಿಸುವುದಕ್ಕೆ ಅವಕಾಶವಿರುವಂಥ ಕಾನೂನು ರೂಪಿಸಬೇಕು, ನ್ಯಾಯಾಧೀಶರೂ ತಮ್ಮ ಆಸ್ತಿಪಾಸ್ತಿಯನ್ನು ಬಹಿರಂಗಗೊಳಿಸಬೇಕು - ಹೀಗೆ ಹತ್ತು ಹಲವು ರೀತಿಯ ನ್ಯಾಯಾಂಗ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾಗರಿಕ ಸಮಾಜದಿಂದ ಒತ್ತಡ ಹೆಚ್ಚಾಗುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಕಾನೂನು ಮಂತ್ರಿ ವೀರಪ್ಪ ಮೊಯ್ಲಿ, ಕೇಂದ್ರ ಮಾಹಿತಿ ಇಲಾಖೆ ನ್ಯಾಯಾಂಗ ಸುಧಾರಣೆಯ ಪರವಾಗಿ ಮಾತನಾಡುತ್ತಿದ್ದರೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್ ಆದಿಯಾಗಿ ನ್ಯಾಯವ್ಯವಸ್ಥೆಯ ನೇತೃತ್ವ ವಹಿಸಿಕೊಂಡಿರುವವರು ಅದನ್ನು ಒಪ್ಪುತ್ತಿಲ್ಲ, ತಮ್ಮನ್ನು ಪ್ರಶ್ನಿಸುವಂಥ ಯಾವುದೇ ಸುಧಾರಣೆಗೆ ಅವರು ಸೊಪ್ಪು ಹಾಕುತ್ತಿಲ್ಲ.



ಈಗ ದೇಶದ ನಾಲ್ಕು ಕಡೆಗಳಲ್ಲಿ ಸುಪ್ರೀಂಕೋರ್ಟಿನ ಪ್ರಾದೇಶಿಕ ಪೀಠಗಳನ್ನು ಸ್ಥಾಪಿಸಬೇಕೆಂಬ ಕೇಂದ್ರ ಕಾನೂನು ಆಯೋಗದ ಶಿಫಾರಸ್ಸನ್ನೂ ಮುಖ್ಯ ನ್ಯಾಯಮೂರ್ತಿ ಸಾರಾಸಗಟಾಗಿ ತಳ್ಳಿ ಹಾಕಿದ್ದಾರೆ.

ಕೇಂದ್ರ ಕಾನೂನು ಆಯೋಗದ ಶಿಫಾರಸ್ಸು ವಾಸ್ತವದಲ್ಲಿ ಒಂದಿಷ್ಟು ಜನಪರವಾಗಿರುವಂತಹದ್ದು. ಮಣಿಪುರದ ಯಾವುದೋ ಮೂಲೆಯಲ್ಲಿರುವ ವ್ಯಕ್ತಿ ಸುಪ್ರೀಂಕೋರ್ಟಿನ ಕೆಲಸಕ್ಕಾಗಿ ದೆಹಲಿಗೆ ಬರಬೇಕೆಂದರೆ ಕನಿಷ್ಠ ಎರಡೂವರೆ ಸಾವಿರ ಕಿ.ಮೀ. ಬರಬೇಕಾಗುತ್ತದೆ. ಅದೇ ರೀತಿ ಕನ್ಯಾಕುಮಾರಿಯಿಂದ ಬರಬೇಕೆಂದರೆ ಹೆಚ್ಚೂ ಕಡಿಮೆ ಮೂರು ಸಾವಿರ ಕಿ.ಮೀ. ಆಗುತ್ತದೆ. ಇದಕ್ಕಾಗಿ ಜನರ ಅಪಾರ ಹಣ, ಸಮಯ, ಶಕ್ತಿ ಪೋಲಾಗುತ್ತದೆ. ದೇಶದ ಬೇರೆ ಬೇರೆ ಕಡೆ ಸುಪ್ರೀಂಕೋರ್ಟಿನ ಪ್ರಾದೇಶಿಕ ಪೀಠಗಳನ್ನು ರಚನೆ ಮಾಡಿದರೆ ಜನರು ಎಲ್ಲದಕ್ಕೂ ದೆಹಲಿಗೆ ಅಲೆಯುವುದು ತಪ್ಪುತ್ತದೆ, ಇದರಿಂದ ಅಪಾರ ಹಣ, ಸಮಯ, ಶಕ್ತಿ ಉಳಿತಾಯವಾಗಿ ಜನರಿಗೆ ಅನುಕೂಲವಾಗುತ್ತದೆ ಎಂದು ಬಹಳಷ್ಟು ಜನ ಮೊದಲಿನಿಂದಲೂ ಅಭಿಪ್ರಾಯಪಡುತ್ತಿದ್ದಾರೆ. ಈಗ ನ್ಯಾಯಾಂಗ ಸುಧಾರಣೆ ಬಗ್ಗೆ ಭಾರೀ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಈ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟ ಕೇಂದ್ರ ಕಾನೂನು ಆಯೋಗವು ದೆಹಲಿಯಲ್ಲಿ ಸುಪ್ರೀಂಕೋರ್ಟಿನ ಸಾಂವಿಧಾನಿಕ ಪೀಠವನ್ನೂ ಹಾಗೂ ಕಲ್ಕತ್ತಾ ಚೆನ್ನೈ ಮತ್ತು ಮುಂಬೈಗಳಲ್ಲಿ ಅದರ ಪ್ರಾದೇಶಿಕ ಪೀಠಗಳನ್ನೂ ಸ್ಥಾಪನೆ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಅದನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

ಪ್ರಾದೇಶಿಕ ಪೀಠ ಸ್ಥಾಪನೆಯಾದರೆ ದೇಶದ ಅತ್ಯುನ್ನತ ನ್ಯಾಯಾಲಯದ ಸಮಗ್ರತೆಗೆ ಧಕ್ಕೆ ಬರುತ್ತದೆ ಎಂದು ಅವರು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ.

ನೆನಪಿದೆಯೇ, ಕರ್ನಾಟಕದಲ್ಲೂ ಉತ್ತರ ಕರ್ನಾಟಕದ ಜನ ಹೈಕೋರ್ಟಿಗಾಗಿ ಐದಾರು ನೂರು ಕಿ.ಮೀ ಪ್ರಯಾಣ ಮಾಡಿ ಬೆಂಗಳೂರಿಗೆ ಬರುವುದನ್ನು ತಪ್ಪಿಸುವುದಕ್ಕಾಗಿಯೇ ಹುಬ್ಬಳ್ಳಿ, ಗುಲ್ಬರ್ಗಾಗಳಲ್ಲಿ ಪ್ರಾದೇಶಿಕ ಪೀಠಗಳನ್ನು ಸ್ಥಾಪಿಸಲಾಗಿದೆ. ಅದಕ್ಕಾಗಿ ಜನ ಎಷ್ಟೊಂದು ಹೋರಾಟ ಮಾಡಬೇಕಾಗಿ ಬಂತು, ಎಷ್ಟು ಬಾರಿ ಪೊಲೀಸರ ಲಾಠಿ ಏಟು ತಿನ್ನಬೇಕಾಗಿ ಬಂತು ಎಂಬುದೆಲ್ಲಾ ನಮಗೆ ಗೊತ್ತೇ ಇದೆ. ಆವಾಗಲೂ ಕರ್ನಾಟಕ ಹೈಕೋರ್ಟಿನ ಬಹಳಷ್ಟು ನ್ಯಾಯಾಧೀಶರು ಪ್ರಾದೇಶಿಕ ಪೀಠ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿದ್ದರು; ಅಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸರಿಯಾದ ಶಿಕ್ಷಣ ಸಂಸ್ಥೆಗಳಿಲ್ಲ, ಸರಿಯಾದ ಮೂಲಭೂತ ಸೌಕರ್ಯಗಳಿಲ್ಲ, ಅಂಥ ಜಾಗಗಳಿಗೆ ತಾವು ಹೇಗೆ ಹೋಗಬೇಕು ಎಂದೆಲ್ಲಾ ಮಾತನಾಡಿದ್ದರು.


ಕೊನೆಗೆ ಜನಹೋರಾಟ ತೀವ್ರವಾದ ಕಾರಣ ಅದಕ್ಕೆ ಮಣಿದು ಪ್ರಾದೇಶಿಕ ಪೀಠಗಳನ್ನು ಸ್ಥಾಪನೆ ಮಾಡಲೇಬೇಕಾಯಿತು. ಇದೇ ರೀತಿಯಲ್ಲಿ ಹಲವಾರು ರಾಜ್ಯಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿಯೇ ಹೈಕೋರ್ಟಿನ ಪ್ರಾದೇಶಿಕ ಪೀಠಗಳನ್ನು ಸ್ಥಾಪಿಸಲಾಗಿದೆ. ಅಂದ ಮಾತ್ರಕ್ಕೆ ಹೈಕೋರ್ಟುಗಳ 'ಸಮಗ್ರತೆ'ಯೇನೂ ಕಡಿಮೆಯಾಗಲಿಲ್ಲವಲ್ಲ? ಬದಲಿಗೆ, ಜನರಿಗೆ ಹೆಚ್ಚು ಪ್ರಯೋಜನವೇ ಆಗಿದೆಯಲ್ಲ? ಹೈಕೋರ್ಟ್ ಪೀಠ ಸ್ಥಾಪನೆಯಿಂದ ಆಗದ 'ಸಮಗ್ರತೆಯ ಭಂಗ' ಸುಪ್ರೀಂಕೋರ್ಟಿನ ಪೀಠ ಸ್ಥಾಪನೆಯಾದರೆ ಹೇಗಾಗುತ್ತದೆ?

ನ್ಯಾಯಾಂಗ ಸುಧಾರಣೆಯಾಗಬೇಕು, ಅದು ಮತ್ತಷ್ಟು ಜನಪರವಾಗಬೇಕು, ಸುಲಭವಾಗಿ ಜನರಿಗೆ ಕೈಗೆಟುಕುವಂತಿರಬೇಕು, ಜನರಿಗೆ ಉತ್ತರದಾಯಿಯಾಗಿರಬೇಕು, ಪಾರದರ್ಶಕವಾಗಿರಬೇಕು ಎಂಬುದು ವಾಸ್ತವ. ಅತಿ ದುರ್ಬಲನಿಗೆ, ಬಡವನಿಗೆ, ಅಸಹಾಯಕನಿಗೆ ನ್ಯಾಯ ಸಿಗುವಂತೆ ನೋಡಿಕೊಳ್ಳುವುದೇ ನಿಜವಾದ 'ನ್ಯಾಯ'ವಲ್ಲವೇ ಮಾನ್ಯ ನ್ಯಾಯಮೂರ್ತಿಗಳೇ?

ಕೊನೆಗೂ ಅಮೆರಿಕ ತಾಲೀಬಾನ್‌ಗೆ ಶರಣಾಯಿತೆ?

ಈ ಪ್ರಶ್ನೆಯೇ ಅಸಂಬದ್ಧ ಅಂತ ಕೆಲವರಿಗೆ ಅನ್ನಿಸಬಹುದು. ವಿಶ್ವದ ಅತ್ಯಂತ ಬಲಿಷ್ಠ ಮಿಲಿಟರಿ ಶಕ್ತಿಯೆನಿಸಿದ ಅಮೆರಿಕ ಎಲ್ಲಿ ಹಿಡಿಯಷ್ಟು ಉಗ್ರರನ್ನು ಹೊಂದಿರುವ ಅಫಘಾನಿಸ್ತಾನದ ತಾಲಿಬಾನ್ ಎಲ್ಲಿ ಎಂದು ಕೆಲವರು ಮೂಗು ಮುರಿಯಬಹುದು. ಹಾಗಿದ್ದರೂ ಇಂಥ ಪ್ರಶ್ನೆಯೊಂದನ್ನು ಕೇಳಬೇಕಾದ ಪರಿಸ್ಥಿತಿಯಂತೂ ಅಫಘಾನಿಸ್ತಾನದಲ್ಲಿ ಸೃಷ್ಟಿಯಾಗಿರುವುದು ಸತ್ಯ. ಇತ್ತೀಚಿನ ಕೆಲವು ಬೆಳವಣಿಗೆಗಳು ಅದಕ್ಕೆ ಪೂರಕ ಸಮರ್ಥನೆಗಳನ್ನು ಒದಗಿಸುತ್ತವೆ.

ಅಮೆರಿಕದ ವಿಶ್ವ ವಾಣಿಜ್ಯ ಕೇಂದ್ರದ ಅವಳಿ ಕಟ್ಟಡಗಳ ಮೇಲೆ ದಾಳಿ ನಡೆದ ತಕ್ಷಣವೇ ಅದಕ್ಕೆ ಒಸಾಮಾ ಬಿನ್ ಲಾಡೆನ್‌ನೇ ಕಾರಣ ಎಂದು ಆರೋಪಿಸಿ ಆತನನ್ನೂ, ಆತನ ಅಲ್‌ಕೈದಾ ಸಂಘಟನೆಯನ್ನೂ ನಿರ್ನಾಮ ಮಾಡುವುದಕ್ಕೆ 2002ರಲ್ಲಿ ಅಮೆರಿಕ ತನ್ನ ಸೈನ್ಯವನ್ನು ಅಫಘಾನಿಸ್ತಾನಕ್ಕೆ ನುಗ್ಗಿಸಿದ್ದು ನಮಗೆಲ್ಲಾ ಗೊತ್ತೇ ಇದೆ. ಹೀಗೆ ನುಗ್ಗುವಾಗ ಒಂದೆರಡು ತಿಂಗಳಲ್ಲಿ ಅಲ್‌ಕೈದಾ ಸಂಘಟನೆಯನ್ನು ಧ್ವಂಸ ಮಾಡಿ ಲಾಡೆನ್‌ನನ್ನು ಮುಗಿಸಿಬಿಡುತ್ತೇವೆಂಬ ಆತ್ಮವಿಶ್ವಾಸ ಅಮೆರಿಕನ್ ಸೈನ್ಯಕ್ಕಿತ್ತು. ಈಗ ಅದಾಗಿ ಎಂಟು ವರ್ಷಗಳಾಗಿವೆ. ಈ ಸುದೀರ್ಘ ಅವಧಿಯಲ್ಲಿ ಅಮೆರಿಕ ಈ ಕೆಲಸಕ್ಕಾಗಿ ಭಾರಿ ಪ್ರಮಾಣದಲ್ಲಿ ದುಡ್ಡು ಸುರಿದಿದೆ. ಮೊದಲು ಕಳಿಸಿದ್ದ ಸೈನ್ಯ ಸಾಕಾಗದೆಂದು ಮತ್ತೆ ಮತ್ತೆ ಹೆಚ್ಚುವರಿ ಸೈನಿಕ ತುಕಡಿಗಳನ್ನು ಕಳಿಸುತ್ತಲೇ ಇದೆ. ಬಾಂಬುಗಳು, ಬಂದೂಕುಗಳು, ಮಿಲಿಟರಿ ವಾಹನಗಳು, ಯುದ್ಧ ವಿಮಾನಗಳು ಅಫಘಾನಿಸ್ತಾನಕ್ಕೆ ಬಂದಿಳಿಯುತ್ತಲೇ ಇವೆ.



ಇಷ್ಟೆಲ್ಲಾ ಆದರೂ, ಅನೇಕ ಅಮೆರಿಕನ್ ಸೈನಿಕರು ಹೆಣವಾಗಿ ಮನೆಗೆ ಮರಳಿದರೇ ಹೊರತು ಅದಕ್ಕೆ ಅಲ್‌ಕೈದಾವನ್ನೂ ಸಂಪೂರ್ಣವಾಗಿ ಧ್ವಂಸ ಮಾಡುವುದಕ್ಕಾಗಿಲ್ಲ, ಲಾಡೆನ್‌ನನ್ನೂ ಹಿಡಿಯುವುದಕ್ಕಾಗಿಲ್ಲ.


ಈಗ ಅಮೆರಿಕನ್ ಸೈನ್ಯ ಸ್ವಲ್ಪ ಸುಸ್ತಾದಂತೆ ಕಾಣುತ್ತಿದೆ. ಹಾಗಂತ ಬರಿ ಕೈಯಲ್ಲಿ ಮನೆಗೆ ಮರಳಿದರೆ ವಿಶ್ವದ ಬಲಿಷ್ಠ ರಾಷ್ಟ್ರವೊಂದು ಯಕಶ್ಚಿತ್ ಅಲ್‌ಕೈದಾ ಸಂಘಟನೆಯೆದುರು ಮಂಡಿಯೂರಿ ಮನೆಗೆ ಬಂದಿತೆಂಬ ಅವಮಾನ. ಅಲ್ಲೇ ಮುಂದುವರಿದರೆ ಎಂಟು ವರ್ಷಗಳಲ್ಲಿ ಆದಂತೆಯೇ ಅಪಾರ ಪ್ರಮಾಣದ ಶಕ್ತಿ, ಶ್ರಮ, ಹಣ, ಪ್ರಾಣ ಹಾನಿಗಳನ್ನು ಅನುಭವಿಸುತ್ತಲೇ ಹೋಗಬೇಕಾದ ದುಸ್ಥಿತಿ. ಇಂಥ ಪರಿಸ್ಥಿತಿಯಿಂದ ಪಾರಾಗುವುದಕ್ಕೆ ಅಮೆರಿಕ ಹೊಸದೊಂದು ವ್ಯೂಹತಂತ್ರವನ್ನು ರೂಪಿಸುತ್ತಿರುವಂತೆ ಕಾಣುತ್ತಿದೆ. ಅದರ ಮೊದಲ ಕುರುಹು ಮೊನ್ನೆ ಬಹಿರಂಗವಾಗಿ ಪ್ರಕಟಗೊಂಡಿದೆ. ಅದೆಂದರೆ, ತಾಲೀಬಾನ್‌ನಲ್ಲಿರುವ ಕೆಲವು ಸಾಪೇಕ್ಷ ಸೌಮ್ಯವಾದಿಗಳೊಂದಿಗೆ ಶಾಂತಿ ಮಾತುಕತೆಗಳನ್ನು ನಡೆಸಿ, ಅವರ ಮನವೊಲಿಸಿ ಭವಿಷ್ಯದ ಅಫಘಾನಿಸ್ತಾನ್ ಸರ್ಕಾರದಲ್ಲಿ ಅವರನ್ನು ಸೇರಿಸಿಕೊಳ್ಳುವುದು! ಇದರಿಂದ ವಿಯೇಟ್ನಾಂನಲ್ಲಾದಂತೆ ಸೋತು ಸುಣ್ಣವಾಗಿ ಮನೆಗೆ ಮರಳಿದೆವೆಂಬ ಅವಮಾನದಿಂದಲೂ ತಪ್ಪಿಸಿಕೊಂಡಂತಾಗುತ್ತದೆ. ಜೊತೆಗೆ ಅಫಘಾನಿಸ್ತಾನದ ಸಮಸ್ಯೆಯನ್ನು ಯಶಸ್ವಿಯಾಗಿ ಬಗೆಹರಿಸಿದೆವೆಂಬ ಹೆಮ್ಮೆಯೂ ಸಿಗುತ್ತದೆ. ಇದು ಅಮೆರಿಕದ ಇಂದಿನ ಬದಲಾದ ವ್ಯೂಹತಂತ್ರ.

ಈ ವಿಚಾರವನ್ನು ಅಫಘಾನಿಸ್ತಾನದಲ್ಲಿ ಅಮೆರಿಕದ ಸೈನ್ಯವನ್ನು ಮುನ್ನಡೆಸುತ್ತಿರುವ ಕಮ್ಯಾಂಡರ್ ಜನರಲ್ ಸ್ಟ್ಯಾನ್ಲಿ ಮೆಕ್‌ಕ್ರಿಸ್ಟಾಲ್ ಸ್ಪಷ್ಟವಾಗಿ ಬಹಿರಂಗಪಡಿಸಿದ್ದಾರೆ. "ಸಂಘರ್ಷದಿಂದ ತತ್ತರಿಸಿರುವ ಅಫಘಾನಿಸ್ತಾನದಲ್ಲಿ ಸ್ಥಿರತೆ ಮತ್ತು ಭದ್ರತೆಯ ಮರುಸ್ಥಾಪನೆಗಾಗಿ ತಾಲೀಬಾನ್ ನಾಯಕರ ಜೊತೆ ರಾಜಕೀಯ ಸಂಧಾನ ನಡೆಸಬಹುದು... ನಾವು ಯಾರೊಂದಿಗೆ ಸಂಘರ್ಷ ಮಾಡುತ್ತಿದ್ದೇವೆಯೋ ಅವರನ್ನೇ ನಮ್ಮೆಡೆ ಸೆಳೆದುಕೊಂಡುಬಿಟ್ಟರೆ ಬಹಳಷ್ಟು ಶ್ರಮ ವ್ಯರ್ಥವಾಗುವುದು ತಪ್ಪುತ್ತದೆ" ಎಂದು ಆತ ದಿ ಫೈನಾನ್ಷಿಯಲ್ ಟೈಮ್ಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾನೆ.

ವಾಸ್ತವದಲ್ಲಿ ಜನರಲ್ ಮೆಕ್‌ಕ್ರಿಸ್ಟಾಲ್ ಅಮೆರಿಕದ ಇಂದಿನ ಮನಸ್ಥಿತಿಯನ್ನು ಪ್ರತಿನಿಧಿಸಿದ್ದಾನೆ. ತಾಲೀಬಾನ್ ಉಗ್ರರನ್ನು ಸೈನಿಕ ಶಕ್ತಿಯ ಮೂಲಕವೇ ಸದೆಬಡಿಯುತ್ತೇವೆಂಬ ವಿಶ್ವಾಸ ಇದ್ದಿದ್ದರೆ ಆತನಿಂದ ಇಂಥ ಮಾತು ಹೊರಬರುತ್ತಿರಲಿಲ್ಲ. ವಿಶ್ವಾಸ ಕುಗ್ಗಿದ ಪರಿಣಾಮವೇ ಈಗ ಶತ್ರುಗಳಲ್ಲೇ ಒಡಕು ಸೃಷ್ಟಿಸಿ ಒಂದು ಬಣವನ್ನು ತಮ್ಮೆಡೆಗೆ ಸೆಳೆದುಕೊಂಡು (ಒಡೆದಾಳುವುದು) ಅಂತಿಮವಾಗಿ ವಿಜಯ ಸಾಧಿಸುವ ಈ ಪಾರಂಪರಿಕ ವ್ಯೂಹತಂತ್ರದ ಕಡೆ ಅದು ವಾಲುತ್ತಿದೆ. ಏನೇ ಆದರೂ ಹೊರಗಿನ ದೇಶವೊಂದು ಎಷ್ಟೇ ಬಲಿಷ್ಠವಾಗಿದ್ದರೂ ಸ್ಥಳೀಯ ಜನಕೋಟಿ ತಿರುಗಿ ಬಿದ್ದರೆ ಕಚ್ಚಿಸಿ ಗಾಯ ಮಾಡಿಕೊಂಡು ಮರಳಬೇಕಾಗುತ್ತದೆ ಎಂಬುದನ್ನು ಇದು ಮತ್ತೊಮ್ಮೆ ಸಾಬೀತುಪಡಿಸುತ್ತದೆ.




ಶ್ರೀಲಂಕ: ಈಗ ಸಿಂಹಳೀಯರಿಗೆ ಶತ್ರುಗಳ್ಯಾರು?



ಶ್ರೀಲಂಕಾ ದ್ವೀಪರಾಷ್ಟ್ರದಲ್ಲೀಗ ಅಧ್ಯಕ್ಷೀಯ ಚುನಾವಣೆಗಳು ಮುಗಿದಿವೆ. ಹಾಲಿ ಅಧ್ಯಕ್ಷ ಮಹಿಂದ ರಾಜಪಕ್ಸೆ ಮತ್ತು ಲಂಕಾ ಸೈನ್ಯದ ಮುಖ್ಯಸ್ಥ ಸರತ್ ಫೊನ್ಸೆಕಾ ನಡುವಿನ ಜಿದ್ದಾಜಿದ್ದಿ ಚುನಾವಣಾ ಹೋರಾಟದಲ್ಲಿ ಕೊನೆಗೂ ರಾಜಪಕ್ಸೆ ಭಾರಿ ಅಂತರದಿಂದ ವಿಜಯ ಸಾಧಿಸಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಶ್ರೀಲಂಕಾ ಸರ್ಕಾರಕ್ಕೆ ಕಾಡುಮೇಡುಗಳಲ್ಲಿ ಚಳ್ಳೆಹಣ್ಣು ತಿನ್ನಿಸುತ್ತಿದ್ದ ವಿಶ್ವದ ಅತ್ಯಂತ ಭಯಾನಕ ಉಗ್ರ ಸಂಘಟನೆಯೆಂದೇ ಪರಿಗಣಿಸಲ್ಪಟ್ಟಿದ್ದ ಎಲ್‌ಟಿಟಿಈ ತಮಿಳು ಹುಲಿಗಳನ್ನು ಹಾಗೂ ಅವರ ಅಧಿನೇತ ಪ್ರಭಾಕರನ್‌ನನ್ನು ಅಂತಿಮವಾಗಿ ಶ್ರೀಲಂಕಾ ಸೇನೆ ಮಣಿಸಿದ್ದು ನಮಗೆಲ್ಲಾ ಗೊತ್ತೇ ಇದೆ. ಶ್ರೀಲಂಕಾದ ಪಾಲಿಗೆ ಇದೊಂದು ಸಾಧಾರಣ ವಿಜಯವಾಗಿರಲಿಲ್ಲ. ಮೂವತ್ತು ವರ್ಷಗಳಲ್ಲಿ ಯಾವ ಸರ್ಕಾರದಿಂದಲೂ ಮಾಡಲು ಸಾಧ್ಯವಾಗದಿದ್ದ ಅಮೋಘ ಕೆಲಸವನ್ನು ತಾನು ಮಾಡಿದ್ದಾಗಿ ರಾಜಪಕ್ಸೆ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು ವಿಜಯೋತ್ಸವ ಆಚರಿಸಿದರು. ಎಲ್‌ಟಿಟಿಈ ವಿರುದ್ಧದ ಈ ಚಾರಿತ್ರಿಕ ವಿಜಯವನ್ನು ಓಟುಗಳನ್ನಾಗಿ ಪರಿವರ್ತನೆ ಮಾಡುವ ಚಾಣಾಕ್ಷ ತಂತ್ರವನ್ನು ಅನುಸರಿಸಿದ ರಾಜಪಕ್ಸೆ ತಡವಾಗಿ ನಡೆಯಬೇಕಿದ್ದ ಅಧ್ಯಕ್ಷೀಯ ಚುನಾವಣೆಗಳನ್ನು ಆತುರಾತುರವಾಗಿ ಅವಧಿಗೆ ಮುಂಚಿತವಾಗೇ ನಡೆಸಲು ತೀರ್ಮಾನಿಸಿಬಿಟ್ಟರು.

ಇದೇ ಸಮಯದಲ್ಲಿ ಮೊಸರಿನಲ್ಲಿ ಕಲ್ಲಾಗಿ ಬಂದವನು ಸರತ್ ಫೊನ್ಸೆಕಾ. ಈತ ಶ್ರೀಲಂಕಾ ಸೇನೆಯ ಮುಖ್ಯಸ್ಥನಾಗಿದ್ದವನು. ಎಲ್‌ಟಿಟಿಈ ಹುಲಿಗಳ ವಿರುದ್ಧದ ಅಂತಿಮ ಕದನದಲ್ಲಿ ಲಂಕಾ ಸೈನ್ಯವನ್ನು ಮುನ್ನಡೆಸಿ ಅಂತಿಮ ವಿಜಯಕ್ಕೆ ಕಾರಣನಾದವನು. ರಣರಂಗದಲ್ಲಿ ಹುಲಿಗಳೊಂದಿಗೆ ಕಾದಾಡಿದ್ದು ತಾನು ಮತ್ತು ತನ್ನ ಸೈನಿಕರು, ಆದರೆ ಅದರ ಕೀರ್ತಿಯೆಲ್ಲಾ ರಾಜಪಕ್ಸೆ ಪಡೆದುಕೊಳ್ಳುತ್ತಿದ್ದಾನೆಂದು ಎಣಿಸಿದ ಈತ ಎಲ್‌ಟಿಟಿಈ ವಿರುದ್ಧದ ಅಂತಿಮ ವಿಜಯಕ್ಕೆ ತಾನೇ ನಿಜವಾದ ಕಾರಣಕರ್ತನೆಂದು ಪ್ರಚಾರ ಮಾಡುತ್ತಾ ಅಧ್ಯಕ್ಷೀಯ ಚುನಾವಣೆಗೆ ಇಳಿದರೆ ಗೆಲುವು ನಿಶ್ಚಿತ ಎಂದು ಲೆಕ್ಕಾಚಾರ ಹಾಕಿದ. ಅಂತೆಯೇ ತನ್ನ ಸೇನಾ ಮುಖ್ಯಸ್ಥ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಚುನಾವಣೆಗೆ ಸ್ಪರ್ಧಿಸಿಯೂ ಬಿಟ್ಟ. ಆತನ ನಿರೀಕ್ಷೆಗೂ ಮೀರಿ ವಿರೋಧ ಪಕ್ಷಗಳೂ ಆತನ ಬೆಂಬಲಕ್ಕೆ ನಿಂತುಬಿಟ್ಟವು. ಯುದ್ಧದಿಂದ ಜರ್ಝರಿತವಾಗಿದ್ದ ಲಂಕಾದ ಉತ್ತರ ಮತ್ತು ಪೂರ್ವ ಭಾಗದ ತಮಿಳು ಪ್ರದೇಶಗಳಲ್ಲಿ ಜನರು ಚುನಾವಣೆಯಲ್ಲೇ ಭಾಗವಹಿಸಲಿಲ್ಲ, ತನ್ನ ಪರಮಾಧಿಕಾರವನ್ನು ದುರ್ಬಳಕೆ ಮಾಡಿಕೊಂಡ ರಾಜಪಕ್ಸೆ ಆ ಪ್ರದೇಶಗಳಲ್ಲಿ ರಿಗ್ಗಿಂಗ್ ನಡೆಸಿ ತನಗೆ ಹೆಚ್ಚು ಮತಚಲಾವಣೆಯಾಗುವಂತೆ ನೋಡಿಕೊಂಡ. ಅದೂಅಲ್ಲದೇ ರಾಜಪಕ್ಸೆಯ ಪರವಾಗಿ ಸಿಂಹಳೀಯ ಪ್ರದೇಶಗಳಲ್ಲಿ ಎದ್ದ ಬೆಂಬಲದ ಅಲೆಯಿನ್ನೂ ಇಳಿದಿರದ ಕಾರಣ ಅಂತಿಮವಾಗಿ ರಾಜಪಕ್ಸೆಯೇ ಭಾರಿ ಅಂತರದಲ್ಲಿ ಗೆದ್ದು ಎರಡನೇ ಬಾರಿಗೆ ಶ್ರೀಲಂಕಾದ ಅಧ್ಯಕ್ಷನಾಗಿ ಆಯ್ಕೆಗೊಂಡಿದ್ದಾನೆ. ಚುನಾವಣೆಗಳು ಮುಗಿದ ತಕ್ಷಣವೇ ಆತ ಮಾಡಿದ ಮೊದಲ ಕೆಲಸ ಎಂದರೆ ಚುನಾವಣಾ ಸಮಯದಲ್ಲಿ ತನ್ನ ವಿರೋಧಿ ಸರತ್ ಫೊನ್ಸೆಕಾ ಪರವಾಗಿ ಕೆಲಸ ಮಾಡಿದ ಹನ್ನೆರಡು ಸೇನಾಧಿಕಾರಿಗಳನ್ನು ಕೆಲಸದಿಂದ ಕಿತ್ತೆಸೆದು ಮನೆಗೆ ಕಳಿಸಿದ್ದು. ಅಷ್ಟೇ ಅಲ್ಲ, ಖುದ್ದು ಫೊನ್ಸೆಕಾ ಕಚೇರಿಯ ಮೇಲೂ ದಾಳಿ ನಡೆಸಿದ್ದು.



ಶ್ರೀಲಂಕಾ ಪ್ರಭುತ್ವದ ಅಸಲೀ ಚಿತ್ರಣ ಇನ್ನು ಮುಂದೆ ಹೊರಜಗತ್ತಿಗೆ ಸ್ಪಷ್ಟವಾಗಿ ಕಾಣಲಿದೆ: ಲಂಕಾದಲ್ಲಿರುವ ಎರಡು ಪ್ರಮುಖ ರಾಜಕೀಯ ಪಕ್ಷಗಳೆಂದರೆ ಒಂದು ಯುಎನ್‌ಪಿ ಮತ್ತೊಂದು ಎಸ್‌ಎಲ್‌ಎಫ್‌ಪಿ. ಲಂಕಾ ದ್ವೀಪವನ್ನು ಬ್ರಿಟಿಷರು ಬಿಟ್ಟು ಹೋದ ಮೇಲೆ ಅರವತ್ತು ವರ್ಷಗಳ ಕಾಲ ಲಂಕಾವನ್ನು ಆಳಿದ್ದು ಇವೇ ಎರಡು ಪಕ್ಷಗಳು. ಬಹುಸಂಖ್ಯಾತರಾಗಿರುವ ಸಿಂಹಳೀಯರ ದುರಭಿಮಾನ ಮತ್ತು ತಮಿಳು ವಿರೋಧಿ ನಿಲುವುಗಳೇ ಈ ಎರಡೂ ಪಕ್ಷಗಳಿಗೆ ಬಂಡವಾಳ. ಅದರಲ್ಲೂ ಸಿಂಹಳೀಯರ ಹೇಳತೀರದ ದೌರ್ಜನ್ಯ, ತಾರತಮ್ಯಗಳನ್ನು ತಾಳಲಾರದೇ, ತಮಿಳರು-ಸಿಂಹಳೀಯರು ಒಂದೇ ದೇಶದಲ್ಲಿ ಸಹಬಾಳ್ವೆ ನಡೆಸುವುದು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದ ತಮಿಳರು ಎಲ್‌ಟಿಟಿಈ ಹುಲಿಗಳ ನೇತೃತ್ವದಲ್ಲಿ ಎಂಭತ್ತರ ದಶಕದಲ್ಲಿ ಸಶಸ್ತ್ರ ಸಂಗ್ರಾಮ ಪ್ರಾರಂಭಿಸಿದ ಮೇಲಂತೂ ಈ ಎರಡೂ ಪಕ್ಷಗಳು ಎಲ್‌ಟಿಟಿಈ ಮತ್ತು ಪ್ರಭಾಕರನ್‌ನನ್ನೇ ಪ್ರಧಾನ ಶತ್ರುವನ್ನಾಗಿ ತೋರಿಸುತ್ತಾ ಸಿಂಹಳೀಯರ ಬೆಂಬಲ ಪಡೆಯುತ್ತಿದ್ದವು. ಒಂದು ಪಕ್ಷ ಅಧಿಕಾರದಲ್ಲಿದ್ದ ಪಕ್ಷ ಎಲ್‌ಟಿಟಿಈಯೊಂದಿಗೆ ಸೌಮ್ಯ ನಿಲುವು ತಾಳಿದೆ ಎಂದು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿದ್ದ ಪಕ್ಷ ವಾದಿಸುತ್ತಾ ಸಿಂಹಳೀಯರ ಬೆಂಬಲ ಗಿಟ್ಟಿಸಲು ಪ್ರಯತ್ನಿಸುತ್ತಿತ್ತು.

ಇನ್ನೊಂದೆಡೆ ಪಕ್ಕಾ ತಮಿಳು ವಿರೋಧಿ, ಭಾರತ ವಿರೋಧಿ ನಿಲುವು ಹೊಂದಿದ್ದ ಜೆವಿಪಿ ಪಕ್ಷ ಸಿಂಹಳೀಯ ಪ್ರದೇಶಗಳಲ್ಲಿ ದೊಡ್ಡ ಮಟ್ಟದ ನಾಗರಿಕ ದಂಗೆಗಳನ್ನೇ ನಡೆಸುತ್ತಿತ್ತು, ಅದರಲ್ಲೂ ವಿಶೇಷವಾಗಿ ರಾಜೀವ್‌ಗಾಂಧಿ ಶ್ರೀಲಂಕಾ ದ್ವೀಪದಲ್ಲಿ ಶಾಂತಿ ಸ್ಥಾಪಿಸುವ ಹೆಸರಿನಲ್ಲಿ ಭಾರತೀಯ ಶಾಂತಿಪಾಲನಾ ಪಡೆಯನ್ನು (ಐಪಿಕೆಎಫ್) ಕಳಿಸಿದ ಮೇಲಂತೂ ಭಾರತ ಶ್ರೀಲಂಕಾವನ್ನು ವಶಪಡಿಸಿಕೊಂಡು ಆಳುವುದಕ್ಕೆ ತನ್ನ ಸೈನ್ಯ ಕಳಿಸಿದೆ ಎಂದು ಪ್ರಚಾರ ಮಾಡಿದ ಜೆವಿಪಿ ಹಲವಾರು ದಂಗೆಗಳನ್ನು ಸಂಘಟಿಸಿ ಹತ್ತಾರು ಸಾವಿರಾರು ಜನರ ಸಾವಿಗೆ ಕಾರಣವಾಯಿತು. ಜೊತೆಗೆ, ತಮಿಳರು ಪ್ರಧಾನವಾಗಿರುವ ಲಂಕಾದ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ಎಲ್‌ಟಿಟಿಈ ಹುಲಿಗಳು ಸಿಂಹಳೀಯ ಸೇನೆಯ ಮೇಲೆ ಮಾತ್ರವಲ್ಲ ಅಮಾಯಕ ಸಿಂಹಳೀಯ ನಾಗರಿಕರ ಮೇಲೆ ನಡೆಸುತ್ತಿದ್ದ ಹಿಂಸಾಚಾರ, ಅದಕ್ಕೆ ಪ್ರತಿಯಾಗಿ ಲಂಕಾ ಸೇನೆ ಅಮಾಯಕ ತಮಿಳು ನಾಗರಿಕರ ಮೇಲೆ ನಡೆಸುತ್ತಿದ್ದ ಹಿಂಸಾಚಾರ, ದಕ್ಷಿಣದಲ್ಲಿ ಸಿಂಹಳೀಯ ಬಾಹುಳ್ಯದ ಪ್ರದೇಶಗಳಲ್ಲಿ ಜೆವಿಪಿ ನಡೆಸುತ್ತಿದ್ದ ಹಿಂಸಾಚಾರ, ಈ ನಡುವೆ ಸಾಲು ಸಾಲು ರಾಜಕೀಯ ಹತ್ಯೆಗಳು - ಎಲ್ಲಾ ಸೇರಿ ಶ್ರೀಲಂಕಾ ಪ್ರಭುತ್ವವನ್ನು ಅತ್ಯಂತ ಫ್ಯಾಸಿಸ್ಟ್ ಪ್ರಭುತ್ವನ್ನಾಗಿ ರೂಪಿಸಿದವು.

ಪ್ರಾಯಶಃ ಇಡೀ ಪ್ರಪಂಚದಲ್ಲಿರುವ ಅತ್ಯಂತ ಕ್ರೂರ ಫ್ಯಾಸಿಸ್ಟ್ ಪ್ರಭುತ್ವಗಳ ಪೈಕಿ ಶ್ರೀಲಂಕಾ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ ಎಂದರೆ ಅತಿಶಯೋಕ್ತಿಯಾಗಲಾರದೇನೋ? ಒಮ್ಮೊಮ್ಮೆ ಶ್ರೀಲಂಕಾಕ್ಕೆ ಹೋಲಿಸಿ ನೋಡಿದರೆ ಭಾರತವೇ ಅದೆಷ್ಟೋ ಪಾಲು ವಾಸಿ ಎಂದೆನಿಸುತ್ತದೆ. ಗುಜರಾತ್‌ನಲ್ಲಿ 2002ರಲ್ಲಿ ಹಿಂದೂತ್ವ ಕೋಮುವಾದಿಗಳು ಮೂರು ಸಾವಿರ ಮುಸಲ್ಮಾನರ ಮಾರಣಹೋಮ ಮಾಡಿದ್ದು ಎಂಟು ವರ್ಷಗಳ ನಂತರವೂ ಇನ್ನೂ ಸೂಕ್ಷ್ಮ ಮನಸ್ಸುಗಳನ್ನು ಕಲಕುತ್ತಲೇ ಇದೆ. ಆದರೆ, ಶ್ರೀಲಂಕಾದಲ್ಲಿ ಒಂದೊಂದು ದಂಗೆಯಲ್ಲಿ ಐದು ಸಾವಿರ ಜನ, ಹತ್ತು ಸಾವಿರ ಜನ, ಇಪ್ಪತ್ತು ಸಾವಿರ ಜನ ಕೆಲವೇ ದಿನಗಳಲ್ಲಿ ಹೆಣವಾಗಿ ಉರುಳಿದ ಅದೆಷ್ಟೋ ಉದಾಹರಣೆಗಳಿವೆ. ರಾಜಕೀಯ ಹತ್ಯೆಯ ವಿಚಾರ ಬಂದರೂ ಅಷ್ಟೇ. ಪ್ರಾಯಶಃ ಶ್ರೀಲಂಕಾ ದ್ವೀಪರಾಷ್ಟ್ರದಲ್ಲಿ ನಡೆದಿರುವಷ್ಟು ರಾಜಕೀಯ ಹತ್ಯೆಗಳು ವಿಶ್ವದ ಬೇರೊಂದು ರಾಷ್ಟ್ರದಲ್ಲಿ ನಮಗೆ ಕಾಣಸಿಗುವುದಿಲ್ಲ. ವಿಶೇಷ ನೋಡಿ. ಇಡೀ ಶ್ರೀಲಂಕಾದಲ್ಲಿ ಮುಕ್ಕಾಲು ಭಾಗ ಸಿಂಹಳೀಯರೇ ಇದ್ದಾರೆ. ಅವರೆಲ್ಲಾ ಬೌದ್ಧ ಧರ್ಮಕ್ಕೆ ಸೇರಿದವರು. ಇಡೀ ವಿಶ್ವಕ್ಕೆ ಶಾಂತಿಮಂತ್ರವನ್ನು ಭೋದಿಸಿದ ಬುದ್ಧನ ಅನುಯಾಯಿಗಳು ಈ ಮಟ್ಟದ ಹಿಂಸಾಚಾರ ನಡೆಸುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗು ತ್ತದೆ. ಆದರೆ, ಆಳುವ ಸಿಂಹಳೀಯ ಪಕ್ಷಗಳಿಗೆ ಎಲ್‌ಟಿಟಿಈ ಹುಲಿಗಳು ಮತ್ತು ಪ್ರಭಾಕರನ್ ಸಾಮಾನ್ಯ ಶತ್ರುವಾಗಿದ್ದರು. ಅದನ್ನೇ ಮುಂದು ಮಾಡಿಕೊಂಡು ಸಿಂಹಳೀಯರ ಬೆಂಬಲ ಗಳಿಸುತ್ತಾ ರಾಜಕೀಯ ಮಾಡಿಕೊಂಡು ಬಂದವು.

ಈಗ ಎಲ್‌ಟಿಟಿಈ ಇಲ್ಲ; ಅದರ ಪರಮೋಚ್ಛ ನಾಯಕ ವೇಲುಪಿಳ್ಳೈ ಪ್ರಭಾಕರನ್ ಕೂಡ ಇಲ್ಲ. ಸಿಂಹಳೀಯರ ಓಟಿಗಾಗಿ ಈ ಪಕ್ಷಗಳು ಈಗ ಯಾರನ್ನು ಶತ್ರುವನ್ನಾಗಿ ತೋರಿಸಬೇಕು? ಈಗಾಗಲೇ ಮನುಷ್ಯರ ರಕ್ತದ ರುಚಿ ನೋಡಿರುವ ಫ್ಯಾಸಿಸ್ಟ್ ಪ್ರಭುತ್ವ, ಸೇನೆಯೀಗ ಯಾರ ರಕ್ತ ಕುಡಿಯಬೇಕು? ಯಾರ ಮೇಲೆ ಕ್ರೌರ್ಯತೆ, ಪೈಶಾಚಿಕತೆಗಳನ್ನು ಮೆರೆಯಬೇಕು? ಇದಕ್ಕೆ ಉತ್ತರ ಕಂಡುಕೊಳ್ಳುವುದು ತೀರಾ ಕಷ್ಟವೇನಲ್ಲ, ಒಮ್ಮೆ ರಕ್ತದ ರುಚಿಕಂಡ ಪ್ರಭುತ್ವ ಅಷ್ಟು ಸುಲಭವಾಗಿ ಸುಮ್ಮನಾಗಿಬಿಡುವುದಿಲ್ಲ, ತಮಿಳು ಹುಲಿಗಳ ರಕ್ತ ಸಿಗದಿದ್ದರೆ ಸಿಂಹಳೀಯರ ರಕ್ತವಾದರೂ ಸರಿ ಎನ್ನುತ್ತದೆ. ಹಾಗಾಗಿ, ಪ್ರಭುತ್ವದ ಪೈಶಾಚಿಕತೆ, ಕ್ರೌರ್ಯತೆಗಳು ಇನ್ನು ಮುಂದೆ ಕೇವಲ ತಮಿಳರಿಗೆ ಮಾತ್ರ ಸೀಮಿತವಾಗಿರುವುದಿಲ್ಲ, ಬದಲಿಗೆ ಸಿಂಹಳೀಯರಿಗೂ, ವಿರೋಧಿ ರಾಜಕೀಯ ಪಕ್ಷಗಳಿಗೂ ವಿಸ್ತರಿಸಲಿದೆ. ಇದು ಭವಿಷ್ಯದಲ್ಲಿ ಇನ್ನಷ್ಟು ಸ್ಪಷ್ಟವಾಗಿ ಗೋಚರಿಸಲಿದೆ.




> ಈಗ ಎಲ್‌ಟಿಟಿಈ ಇಲ್ಲ; ಅದರ ಪರಮೋಚ್ಛ ನಾಯಕ ವೇಲುಪಿಳ್ಳೈ ಪ್ರಭಾಕರನ್ ಕೂಡ ಇಲ್ಲ. ಸಿಂಹಳೀಯರ ಓಟಿಗಾಗಿ ಈ ಪಕ್ಷಗಳು ಈಗ ಯಾರನ್ನು ಶತ್ರುವನ್ನಾಗಿ ತೋರಿಸಬೇಕು? ಈಗಾಗಲೇ ಮನುಷ್ಯರ ರಕ್ತದ ರುಚಿ ನೋಡಿರುವ ಫ್ಯಾಸಿಸ್ಟ್ ಪ್ರಭುತ್ವ, ಸೇನೆಯೀಗ ಯಾರ ರಕ್ತ ಕುಡಿಯಬೇಕು? ಯಾರ ಮೇಲೆ ಕ್ರೌರ್ಯತೆ, ಪೈಶಾಚಿಕತೆಗಳನ್ನು ಮೆರೆಯಬೇಕು?

ಶ್ರೀಲಂಕಾ ಕಂಡ ಅತ್ಯಂತ ಸರ್ವಾಧಿಕಾರಿ ಅಧ್ಯಕ್ಷ ಎಂದರೆ ಅದು ಮಹಿಂದ ರಾಜಪಕ್ಸೆ. ಶ್ರೀಲಂಕಾದಲ್ಲಿ ವಸ್ತುನಿಷ್ಠವಾಗಿ ಬರೆಯುತ್ತಾ ರಾಜಪಕ್ಸೆಯ ದೌರ್ಜನ್ಯಗಳನ್ನು, ಭ್ರಷ್ಟಾಚಾರಗಳನ್ನು ಬಯಲಿಗೆಳೆಯಲು ಪ್ರಯತ್ನಿಸಿದ ಪ್ರತೀ ಪತ್ರಕರ್ತನ ಮೇಲೂ ಕೇಸು ಜಡಿದು ಜೈಲಿಗೆ ಕಳಿಸಿದ್ದಾನೆ ರಾಜಪಕ್ಸೆ. ಎಷ್ಟೋ ಪತ್ರಕರ್ತರನ್ನು ನಿರ್ದಯವಾಗಿ ಕೊಂದು ಹಾಕಿದ್ದಾನೆ. ಎಷ್ಟೋ ಪತ್ರಕರ್ತರು ಪ್ರಾಣ ಉಳಿಸಿಕೊಳ್ಳಲು ಲಂಕಾವನ್ನೇ ತೊರೆದಿದ್ದಾರೆ. ಇಂದು ಲಂಕಾದ ಪರಿಸ್ಥಿತಿ ಹೇಗಿದೆಯೆಂದರೆ ಇಡೀ ದೇಶದ ಒಟ್ಟು ಬಜೆಟ್‌ನ ಶೇ.95ರಷ್ಟನ್ನು ಅಧ್ಯಕ್ಷ ಮಹಿಂದ ರಾಜಪಕ್ಸೆಯ ಕುಟುಂಬ ಮತ್ತು ಸಂಬಂಧಿಕರೇ ನಿಯಂತ್ರಿಸುತ್ತಿದ್ದಾರೆ! ಒಂದು ರೀತಿಯಲ್ಲಿ ಇಡೀ ದೇಶವೇ ರಾಜಪಕ್ಸೆಯ ಸ್ವಂತ ಆಸ್ತಿಯೆಂಬಂತಾಗಿಬಿಟ್ಟಿದೆ. ಈಗ ಎಲ್‌ಟಿಟಿಈ ವಿರುದ್ಧದ ವಿಜಯದ ಉತ್ಸಾಹದಲ್ಲಿ ಆತ ಶ್ರೀಲಂಕಾವನ್ನು ಕೊಳ್ಳೆ ಹೊಡೆಯುತ್ತಿರುವುದು ಅಷ್ಟಾಗಿ ಯಾರ ಗಮನವನ್ನೂ ಸೆಳೆಯುತ್ತಿಲ್ಲ. ಅದನ್ನು ಬಯಲಿಗೆಳೆಯುವುದಕ್ಕೆ ಪ್ರಯತ್ನಿಸಿದ ಪತ್ರಕರ್ತರನ್ನು ಲಂಕಾದಲ್ಲಿ ಉಳಿಯಗೊಡಲಿಲ್ಲ. ಹೀಗಾಗಿ ರಾಜಪಕ್ಸೆ ಮತ್ತೊಮ್ಮೆ ಲಂಕಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾನೆ. ಆತನ ಜಾಗದಲ್ಲಿ ಸರತ್ ಫೊನ್ಸೆಕಾ ಗೆದ್ದಿದ್ದರೂ ಇದಕ್ಕಿಂತ ಭಿನ್ನವಾಗಿಯೇನಿರುತ್ತಿರಲಿಲ್ಲ. ಎಲ್‌ಟಿಟಿಈ ವಿರುದ್ಧ ವಿಜಯ ಸಾಧಿಸಬೇಕೆಂಬ ರಣೋತ್ಸಾಹದಲ್ಲಿ ಆತ ತನ್ನ ಸೈನ್ಯದ ಮೂಲಕ ಅಮಾಯಕ ತಮಿಳರ ಮೇಲೆ ನಡೆಸಿದ ಭಯಾನಕ ದೌರ್ಜನ್ಯಗಳೇ ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ಕೆಲವೇ ತಿಂಗಳುಗಳಲ್ಲಿ ಸುಮಾರು ಹತ್ತು ಸಾವಿರಕ್ಕಿಂತ ಅಮಾಯಕ ತಮಿಳರು ಫೊನ್ಸೆಕಾನ ಸೈನಿಕ ದಾಳಿಯಲ್ಲಿ ಹೆಣವಾಗಿ ಬಿದ್ದರು; ಸುಮಾರು ಹತ್ತು ಲಕ್ಷ ಜನರು ತಮ್ಮ ಮನೆಮಠ ಕಳೆದುಕೊಂಡು ಬೀದಿಗೆ ಬಿದ್ದರು. ಅವರನ್ನು ನಿರಾಶ್ರಿತ ಶಿಬಿರಗಳಲ್ಲಿ ಕೂಡಿಟ್ಟು ನಿತ್ಯವೂ ಅವರ ಮೇಲೆ ದೌರ್ಜನ್ಯ ನಡೆಸುವುದಕ್ಕೆ, ಯುವಕರನ್ನು ಎಲ್‌ಟಿಟಿಈಯ ಹುಲಿ ಎಂದು ಸಂಶಯಿಸಿ ಗುಂಡಿಟ್ಟು ಸಾಯಿಸುವುದಕ್ಕೆ, ಮಹಿಳೆಯರನ್ನು ರೇಪ್ ಮಾಡುವುದಕ್ಕೆ ಇದೇ ಫೊನ್ಸೆಕಾ ತನ್ನ ಸೈನಿಕರನ್ನು ಮುಕ್ತವಾಗಿ ಬಿಟ್ಟಿದ್ದ. ಇಂಥವನೊಬ್ಬ ದೇಶದ ಅಧ್ಯಕ್ಷನಾದರೆ ಆ ದೇಶದ ಪರಿಸ್ಥಿತಿ ಹೇಗಾಗುತ್ತದೆ ಎಂಬುದನ್ನು ಊಹಿಸುವುದು ಕಷ್ಟವಲ್ಲ. ರಾಜಪಕ್ಸೆಯಿರಲಿ, ಫೊನ್ಸೆಕಾ ಇರಲಿ ಮತ್ತಿನ್ಯಾರೇ ಶ್ರೀಲಂಕಾದ ಅಧ್ಯಕ್ಷರಾದರೂ ಪರಿಸ್ಥಿತಿ ಭಿನ್ನವಾಗಿ ಬದಲಾಗುವ ಲಕ್ಷಣಗಳಿಲ್ಲ, ಏಕೆಂದರೆ ಇಡೀ ಪ್ರಭುತ್ವವೇ ಆ ಮಟ್ಟದಲ್ಲಿ ಫ್ಯಾಸಿಸ್ಟೀಕರಣಗೊಂಡುಬಿಟ್ಟಿದೆ; ರಕ್ತ ಹೀರುವುದು ಒಂದು ಹವ್ಯಾಸವಾಗಿಬಿಟ್ಟಿದೆ. ಅದನ್ನು ಸರಿಪಡಿಸಬೇಕೆಂದರೆ ಆ ಬುದ್ಧನೇ ಮತ್ತೊಮ್ಮೆ ಹುಟ್ಟಿ ಬರಬೇಕಷ್ಟೆ!

● ಕುಮಾರ್ ಬುರಡಿಕಟ್ಟಿ

ತೋತಾ ರಫೀಕ್ ನಿಕಾಲಿ ಗೋರಿಪಾಳ್ಯದ ಕೀಚಕ ಸಂಹಾರ

ಗೋರಿಪಾಳ್ಯದ ಬಡ ಮುಸ್ಲಿಂ ಹೆಣ್ಣುಮಕ್ಕಳ ಕಣ್ಣೀರಿಗೆ ವಿಧಿ ಹೇಳಿದ ಸಾಂತ್ವನವೋ ಎಂಬಂತೆ ಕೀಚಕ ತೋತಾ ರಫೀಕ್ ಕೊಲೆಯಾಗಿದ್ದಾನೆ. ಕೊಂದದ್ದು ಆತನ ಒಡನಾಡಿಗಳಾದ ಜಂಗ್ಲಿ ಫೈರೋಜ್ ಮತ್ತಾತನ ಮಗ ಇಮ್ರಾನ್. ಪತ್ರಿಕೆಯ 2007 ಜೂನ್ 27 ರ ಸಂಚಿಕೆಯಲ್ಲಿ ಗೋರಿಪಾಳ್ಯದ ನಿರ್ಗತಿಕ ಮುಸ್ಲಿಂ ಹೆಣ್ಣುಮಕ್ಕಳ ಕಿಡ್ನಾಪ್, ರೇಪ್ ಮತ್ತು ಅಮಾನುಷ ಹತ್ಯಾ ಸರಣಿಯಲ್ಲಿ ಈ ತೋರಾ ರಫಿಕ್‌ನ ಕ್ರೌರ್ಯದ ಸಮಗ್ರ ಚಿತ್ರಣವಿತ್ತು.



ಆವತ್ತು ಅಸ್ಮಾತಾಜ್ ಎಂಬ ನಿಸ್ಸಹಾಯಕ ಯುವತಿಯನ್ನು ಹೊತ್ತೊಯ್ದು ಅತ್ಯಾಚಾರವೆಸಗಿ ಹೇಗೆ ರಫೀಕ್ ಕೊಂದು ಹಾಕಿದ್ದನೋ; ಅಷ್ಟೇ ಹೀನಾಯವಾಗಿ ಗೋರಿಪಾಳ್ಯದ ನಡುರಸ್ತೆಯಲ್ಲೇ ಆತನನ್ನು ಸಾವು ತಿಂದು ಮುಗಿಸಿತ್ತು. ಫೆಬ್ರುವರಿ 1 ರ ರಾತ್ರಿ ವೆಸ್ಟ್ ಆಫ್ ಪಾದರಾಯನಪುರದ ಅರಾಫತ್ ನಗರದ ನಡುರಸ್ತೆಯಲ್ಲಿ ಜಂಗ್ಲಿ ಫೈರೋಜ್ ಮತ್ತು ಆತನ ಮಗ ಇಮ್ರಾನ್ ತಂಡ ಆತನನ್ನು ಅಟ್ಟಾಡಿಸಿ ಕತ್ತರಿಸುತ್ತಿದ್ದರೆ ಯಾವ ನರಪಿಳ್ಳೆಯೂ ನೆರವಿಗೆ ಬರಲಿಲ್ಲ.

ವಿಚಿತ್ರವೆಂದರೆ ಕೊಂದ ಜಂಗ್ಲಿ ಫೈರೋಜ್ ಮತ್ತು ಕೊಲೆಯಾದ ರಫೀಕ್ ಇಬ್ಬರೂ ಚಾಮರಾಜಪೇಟೆ ಶಾಸಕ ಜಮೀರ್ ಅಹ್ಮದ್ ಶಿಷ್ಯರೇ. ಗೋರಿಪಾಳ್ಯದ ಕಿರಾತಕ ಆರಿಫ್ ಮತ್ತಾತನ ಮಗ ಇಮ್ರಾನ್ ತಂಡ ಸದ್ಯ ಎಮ್ಮೆಲ್ಲೇ ಜಮೀರ್ ಬೆನ್ನಿಗೆ ನಿಂತಿದೆಯಾದ್ದರಿಂದ ಅವರಿಬ್ಬರ ಹಂತಕಪಡೆಯಲ್ಲಿರುವ ತನ್ನನ್ನು ಮುಟ್ಟುವವರ್‍ಯಾರು ಎಂದೇ ಹಾವಳಿಗಿಳಿದವನು ರಫೀಕ್.

ಈತನ ಅಣ್ಣ ತುರಾಬ್ ಸದ್ಯ ಜೈಲಿನಲ್ಲಿದ್ದಾನೆ. ಈತ ಉಪ್ಪಾರಪೇಟೆ ಸೇರಿದಂತೆ ಜೆಜೆನಗರ ಪೊಲೀಸ್ ಠಾಣೆಯ ಆಸುಪಾಸಿನ ಅರ್ಧ ಡಜನ್ ಪೊಲೀಸ್ ಠಾಣೆಗಳಲ್ಲಿ ರೌಡಿ ಷೀಟರ್. ರಫೀಕ್‌ನ ತಮ್ಮ ಇಸ್ಮಾಯಿಲ್ ನಟೋರಿಯಸ್ ಮೊಬೈಲ್ ಕಳ್ಳ. ತನ್ನ ಹದಿನೇಳನೇ ವಯಸ್ಸಿಗೇ ರಾಬರಿ, ದಕಾಯಿತಿಗಿಳಿದ ರಫೀಕ್‌ನ ಕುಖ್ಯಾತಿ ಕಂಡೇ ಆವತ್ತು ಗೋರಿಪಾಳ್ಯಕ್ಕೆ ಕೌನ್ಸಿಲರ್ ಆಗಿದ್ದ ಆರಿಫ್ ತನ್ನ ತಂಡಕ್ಕೆ ಸೇರಿಸಿಕೊಂಡ. ಆರಿಫ್‌ನ ಮಗ ಇಮ್ರಾನ್ ನಡೆಸುವ ಮೊಬೈಲ್ ಕಳ್ಳರ ರ್‍ಯಾಕೆಟ್‌ನಲ್ಲಿ ಕೆಲಕಾಲ ರಫೀಕ್ ಬಿಜಿಯಾಗಿದ್ದ.

ಆರಿಫ್‌ನ ದುಷ್ಮನ್ ಮತ್ತು ಗೋರಿಪಾಳ್ಯದ ಹಳೇ ಪಂಟರ್ ಅಲ್ತಾಫ್‌ನ ತಮ್ಮಂದಿರಿಬ್ಬರ ಕೊಲೆಯಾಯಿತಲ್ಲ; ಅದರಲ್ಲಿ ರಫಿಕ್ ಪ್ರಮುಖ ಆರೋಪಿಯಾಗಿದ್ದ. ಜೈಲಿಂದ ಬಂದವನೇ ಗೋರಿಪಾಳ್ಯದ ಮುಸ್ಲಿಂ ಹೆಣ್ಣುಮಕ್ಕಳ ಪಾಲಿಗೆ ಅಕ್ಷರಶಃ ಕೀಚಕನಾದ. ಅರಾಫತ್ ನಗರದ ಆಟೋ ಚಾಲಕನೊಬ್ಬನ ಮಗಳನ್ನು ಹೊತ್ತೊಯ್ದು ಮದುವೆಯಾಗಿದ್ದರೂ ಪಕ್ಕದ ಮೋಮಿನ್‌ಪುರದಲ್ಲಿ ಬತ್ತಿ ಉಜ್ಜುವ ಯುವತಿಯೊಬ್ಬಳನ್ನು ಎಳೆದೊಯ್ದು ರೇಪ್ ಮಾಡಿದ್ದ. ಇದಾಗಿ ಆರೇ ತಿಂಗಳಿಗೆ ಸುಜಾತ ಟೆಂಟ್ ಹಿಂಭಾಗದ ಭೀಫ್ ಅಂಗಡಿಯವನ ಮನೆಗೆ ನುಗ್ಗಿ ಆತನ ಮಗಳನ್ನು ಹಾಳುಗೈದ. ರಫೀಕ್‌ನ ಪಶುವಾಂಛೆ ಇಷ್ಟಕ್ಕೇ ಮುಗಿಯದೇ ಗಾರ್ಮೆಂಟ್ ಕೆಲಸಕ್ಕೆ ಹೋಗಿಬರುತ್ತಿದ್ದ ಕುಲ್ಸುಮ್ ಎಂಬಾಕೆಯನ್ನು ನಡುರಸ್ತೆಯಲ್ಲೇ ಆಟೋಕ್ಕೆ ತುರುಕಿಕೊಂಡು ಪೀಡಿಸಿದ್ದ.


ಇಂಥ ರಫೀಕ್ 2006 ರ ಡಿಸೆಂಬರ್ 27 ರಂದು ಎಂಥಾ ಅನಾಹುತಕ್ಕೆ ಕೈಯಿಟ್ಟನೆಂದರೆ, ಗೋರಿಪಾಳ್ಯದ 9 ನೇ ಕ್ರಾಸಿನ ಶಫಿವುಲ್ಲಾಖಾನ್ ಎಂಬಾತನ ಮಗಳು ಅಸ್ಮಾತಾಜ್‌ಳನ್ನು ತುರಳ್ಳಿ ಕಾಡಿಗೆ ಕರೆದೊಯ್ದು ಅತ್ಯಾಚಾರವೆಸಗಿ ಕೊಂದುಬಿಟ್ಟ. ಆಕೆಯ ಹೆಣ ಸಿಕ್ಕಿದ್ದು ಎಷ್ಟೋ ದಿನಗಳಾದ ಮೇಲೆ. ಹೀಗೆ ಗೋರಿಪಾಳ್ಯದ ಬಡ ಮುಸ್ಲಿಂ ಹೆಣ್ಣುಮಕ್ಕಳ ಪಾಲಿಗೆ ಅಕ್ಷರಶಃ ಸೈತಾನನಾಗಿ ಅವತರಿಸಿದ ರಫೀಕ್ ಅಸ್ಮಾತಾಜ್‌ಳ ರೇಪ್ ಅಂಡ್ ಮರ್ಡರ್ ಕೇಸಿನಲ್ಲಿ ಜೈಲು ಪಾಲಾದರೆ ಆತನ ಗಾಡ್‌ಫಾದರ್ ಆರಿಫ್‌ನೇ ನಿಂತು ವಕೀಲರನ್ನಿಟ್ಟು ಜಾಮೀನು ಕೊಡಿಸಿ ಜೈಲಿಂದ ಹೊರತಂದಿದ್ದ.

ಮೊದಲು ಅಲ್ತಾಫ್ ತಮ್ಮಂದಿರ ಕೊಲೆ, ಆನಂತರ ಅಸ್ಮಾತಾಜ್ ಹತ್ಯೆ ಸಾಲದ್ದಕ್ಕೆ ಅಸಂಖ್ಯಾತ ಕ್ರಿಮಿನಲ್ ಕೇಸು ಹೊತ್ತ ತೋತಾ ರಫೀಕ್ ಕಂಡರೇನೇ ಗೋರಿಪಾಳ್ಯ ನಡುಗುತ್ತಿತ್ತು. ಇಂಥವನನ್ನು ಚುನಾವಣಾ ಪ್ರಚಾರಕ್ಕೆ ಬಳಸಿದ್ದು ಶಾಸಕ ಜಮೀರ್ ಅಹ್ಮದ್.



ಅಸ್ಮಾತಾಜ್

ಜಮೀರ್ ಎಮ್ಮೆಲ್ಲೇಯಾಗಿದ್ದೇ ವಿಪರೀತ ಹಾವಳಿಗಿಳಿದ ರಫೀಕ್ ಗುರು ಇಮ್ರಾನ್‌ನ ತಂಡದವರನ್ನೇ ಪೀಡಿಸಲಾರಂಭಿಸಿದ. ಇಮ್ರಾನ್-ಆರಿಫ್ ಗ್ಯಾಂಗಿನಲ್ಲಿ ರಫೀಕ್‌ನಷ್ಟೇ ಪ್ರಮುಖನಾದವನು ಜಂಗ್ಲಿ ಫೈರೋಜ್. ಈತನೂ ರೌಡಿಜಮ್ಮಿನಲ್ಲಿದ್ದು ಕ್ರಮೇಣ ಫೈನಾನ್ಸಿಂಗ್ ಮಾಡಿಕೊಂಡಿದ್ದ. ದುಡ್ಡೂಕಾಸಿನಲ್ಲಿ ಕೊಂಚ ಮಟ್ಟಿಗೆ ಸುಧಾರಿಸಿದ ಜಂಗ್ಲಿ ಫೈರೋಜ್ ಬಗ್ಗೆ ಗ್ಯಾಂಗ್ ಲೀಡರ್ ಇಮ್ರಾನ್‌ನ ಕಣ್ಣು ಕೆಂಪಗಾಗಿದೆ. ಕಿರಿಕ್ ಮಾಡಿ ಒಂದಷ್ಟು ಕಿತ್ತುಕೋ ಎಂದು ಒಳಗೊಳಗೇ ರಫೀಕ್‌ನನ್ನು ಛೂಬಿಟ್ಟ.



ಹಂತಕ ಆರೀಫ್

ರಫೀಕ್‌ಗೂ ಇಷ್ಟೇ ಸಾಕಿತ್ತು. ಪದೇಪದೇ ಜಂಗ್ಲಿಯ ಅಂಗಡಿಗೆ ಹೋಗಿ ಹಾವಳಿಯಿಡುತ್ತಿದ್ದ. ಇದು ವಿಪರೀತಕ್ಕೆ ಹೋಗಿದ್ದು ಫೆಬ್ರುವರಿ 1 ರ ಸೋಮವಾರ ರಾತ್ರಿ. ಒಂಭತ್ತರ ಸುಮಾರಿಗೆ ಜಂಗ್ಲಿಯ ಅಂಗಡಿಗೆ ಹೋಗಿ ರಫೀಕ್ ಕಾಟ ಕೊಟ್ಟಿದ್ದಾನೆ. ಇಬ್ಬರಿಗೂ ಜಗಳವಾಗುತ್ತಿದ್ದಂತೆ ಜಂಗ್ಲಿಯ ಮಗ ಇಮ್ರಾನ್ ಅಲ್ಲಿಗೆ ಧಾವಿಸಿದ್ದಾನೆ. ಅಪ್ಪ ಮಗ ಇಬ್ಬರೂ ಸೇರಿಕೊಂಡು ರಫೀಕ್‌ನನ್ನು ಅಟ್ಟಾಡಿಸಿದ್ದಾರೆ. ಏರಿಯಾದ ಹುಡುಗರು ತನಗೆ ಸಾಥ್ ಕೊಡುತ್ತಾರೆಂದೇ ನಂಬಿದ್ದ ರಫೀಕ್‌ಗೆ ಲಾಂಗ್‌ನ ಪೆಟ್ಟು ಬೀಳುತ್ತಿದ್ದಂತೆ ಆತನ ಜೊತೆಗಿದ್ದವರು ಎಸ್ಕೇಪಾಗಿದ್ದಾರೆ. ಅಪ್ಪ-ಮಗ ಬೀಸುತ್ತಿದ್ದ ಲಾಂಗ್ ಏಟಿಗೆ ರಫೀಕ್ ಕುಸಿದು ರಕ್ತ ಸುರಿಸುತ್ತಿದ್ದ. ಪೊಲೀಸರು ಆತನನ್ನು ಆಸ್ಪತ್ರೆಗೆ ಸಾಗಿಸುವ ಹೊತ್ತಿಗೆ ರಫೀಕ್ ಹೆಣವಾಗಿದ್ದ. ಆತ ಸತ್ತಿದ್ದಕ್ಕೆ ಮರುಗಲು ಆತನ ಹೆಂಡತಿಯೂ ಬರಲಿಲ್ಲ. ಆಕೆ ಯಾವತ್ತೋ ತಲಾಖ್ ಕೊಟ್ಟು ತವರುಮನೆ ಸೇರಿಕೊಂಡಿದ್ದಳು.



ಕಿಲ್ಲರ್ ಇಮ್ರಾನ್

ಅದೆಷ್ಟು ಮಂದಿ ಬಡ ಮುಸ್ಲಿಂ ಹೆಣ್ಣುಮಕ್ಕಳ ಶಾಪ ಫಲಿಸಿತ್ತೋ. ಮಾಡಿದ ದುಡ್ಡು, ಸಾಕಿದ ಗ್ಯಾಂಗು, ಧಣಿ ಆರಿಫ್, ಗುರು ಇಮ್ರಾನ್ ಮತ್ತು ಗಾಡ್‌ಫಾದರ್ ಜಮೀರ್; ಯಾರಿಂದಲೂ ತೋತಾ ರಫೀಕ್‌ನನ್ನು ಉಳಿಸಲಾಗಲಿಲ್ಲ. ಅದು ಮುಗ್ಧ ಹೆಣ್ಣುಮಗಳೊಬ್ಬಳನ್ನು ಹೊತ್ತೊಯ್ದು ಪೀಡಿಸಿ ಕೊಂದದ್ದಕ್ಕೆ ವಿಧಿ ನೀಡಿದ ಶಿಕ್ಷೆಯಾ? ಅಥವಾ ಆತನ ಪಾಪದ ಕೊಡವೇ ತುಂಬಿ ಬಂದಿತ್ತಾ?

● ರಾ.ಸೋ.

ಮಳವಳ್ಳಿ : ಸಚಿವ ನರೇಂದ್ರಸ್ವಾಮಿಯ ಪವರ್ ಪಾಲಿಟಿಕ್ಸ್‌ಗೆ ದಲಿತರೇ ಬಲಿಪಶು.!

ಮಳವಳ್ಳಿಯ ಪಟ್ಟಲದಮ್ಮ ಮತ್ತು ದಂಡಿನ ಮಾರಮ್ಮನ ಸಿಡಿಹಬ್ಬದಲ್ಲಿ ತಲತಲಾಂತರದಿಂದ ಗಟ್ಟ(ತಂಬಿಟ್ಟಿನ ಆರತಿ)ಪೂಜೆಯನ್ನು ಮೊದಲು ದಲಿತರೇ ನಿರ್ವಹಿಸುತ್ತಾ ಬಂದಿದ್ದಾರೆ. ಈ ಸಲ ಒಕ್ಕಲಿಗರು ಅದಕ್ಕೆ ಅಡ್ಡಿ ಮಾಡಿ ಗಲಾಟೆ ಹುಟ್ಟು ಹಾಕಿದ್ದಾರೆ. ಇದಕ್ಕೆ ದಲಿತ ಸಚಿವ ಪಿ.ಎಂ.ನರೇಂದ್ರಸ್ವಾಮಿಯ ಕುಮ್ಮಕ್ಕಿದೆ.

ಮಳವಳ್ಳಿ ಹೇಳಿಕೇಳಿ ಮೀಸಲು ಕ್ಷೇತ್ರ.. ಆದರೆ ಇದೇ ಸಮುದಾಯದ ದ(ಬ)ಲಿತ ಶಾಸಕ ಕಂ ಸಚಿವರಾಗಿರುವ ಪಿ.ಎಂ.ನರೇಂದ್ರಸ್ವಾಮಿಯು ದಲಿತರ ಹಿತ ಕಾಯುವುದು ಒತ್ತಟ್ಟಿಗಿರಲಿ, ಅವರ ಮೇಲೆ ದೌರ್ಜನ್ಯ ನಡೆಯಲು ತಾನೇ ಕಾರಣನಾಗುತ್ತಿರುವುದು ಮಾತ್ರ ಪರಿಸ್ಥಿತಿಯ ವ್ಯಂಗ್ಯವಾಗಿದೆ.


ಸಿಡಿಹಬ್ಬದ ರಾದ್ಧಾಂತ !

ಮಳವಳ್ಳಿಯ ಪಟ್ಟಲದಮ್ಮ ಮತ್ತು ದಂಡಿನ ಮಾರಮ್ಮನ ಸಿಡಿಹಬ್ಬ ಇಡೀ ಮಂಡ್ಯ ಜಿಲ್ಲೆಯಲ್ಲಿಯೇ ಪ್ರಸಿದ್ಧಿ ದಲಿತರು, ಒಕ್ಕಲಿಗರು, ಬೆಸ್ತರು ಸೇರಿ ಆಚರಿಸುವ ಐಕ್ಯತೆಯ ಹಬ್ಬ. ಈ ಹಬ್ಬ ಈಗ ಐಕ್ಯತೆಯ ಹಬ್ಬವಾಗಿ ಮಾತ್ರ ಉಳಿದಿಲ್ಲ. ಜಾತೀಯತೆ, ರಾಜಕಾರಣ ಬೆರೆತು, ಜಾತಿವೈಷಮ್ಯಕ್ಕೆ ಕಾರಣವಾಗುತ್ತಿದೆ. ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಯಾರು ಮೊದಲು ಗಟ್ಟ(ತಂಬಿಟ್ಟಿನ ಆರತಿ)ಪೂಜೆ ಮಾಡಬೇಕೆಂಬ ವಿವಾದವೇ ಇಷ್ಟೆಲ್ಲಾ ವಿವಾದಗಳಿಗೆ ಕಾರಣವಾಗಿವೆ. 1953ರಲ್ಲಿ ಅಂದು ಶಾಸಕರಾಗಿದ್ದ ಚಿಕ್ಕಲಿಂಗಯ್ಯನವರ ನೇತೃತ್ವದಲ್ಲಿ ನಡೆದ ಮಾತುಕತೆಯಂತೆ ಮಂಡ್ಯ ಜಿಲ್ಲಾಧಿಕಾರಿಯವರು ಈ ಕುರಿತು ಆದೇಶವೊಂದನ್ನು ಹೊರಡಿಸಿದ್ದು ಅದರಂತೆಯೇ ದಲಿತರು 1953ರಿಂದಲೂ ನಾವು ಮೊದಲು ಗಟ್ಟಪೂಜೆ ಮಾಡಿಕೊಂಡು ಬರುತ್ತಿದ್ದೇವೆ ಎಂದು ಇಲ್ಲಿನ ದಲಿತ ನಾಯಕರು ಹೇಳುತ್ತಾರೆ. ಈ ವರ್ಷ ಈ ನಿಯಮವನ್ನು ಉಲ್ಲಂಘಿಸಿದ ಪೇಟೆ ಬೀದಿಯ ಒಕ್ಕಲಿಗರನ್ನು ಪ್ರಶ್ನಿಸಿದ್ದಾರೆ. ತಮ್ಮವರು ಇನ್ನೂ ಬರುವ ಮುಂಚೆಯೇ ತಂಬಿಟ್ಟಿನ ಆರತಿಯನ್ನು ಕೊಂಡೊಯ್ದ ಒಕ್ಕಲಿಗರನ್ನು ದಲಿತ ಯಜಮಾನ ಕರಿಯಪ್ಪ ಪ್ರಶ್ನೆ ಮಾಡಿದ್ದಾರೆ. ಇದು ಒಕ್ಕಲಿಗ ಮುಖಂಡರಿಗಳಿಗೆ ಉರಿ ತರಿಸಿದೆ. ಅಲ್ಲೇ ಇದ್ದ ಸ್ವತಃ ದಲಿತನಾಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ರಮೇಶ್ ಎರಡು ಕಡೆಯವರಿಗೆ ಸಮಾಧಾನಮಾಡಿ ಪೂಜೆಗೆ ಹೋಗುವಂತೆ ಮಾಡಬಹುದಾಗಿತ್ತು, ಆದರೆ ಆತ ದಲಿತ ಸಮುದಾಯದ ಹಿನ್ನೆಲೆಯಿಂದ ಬಂದಂತೆ ಆಗಲೀ ಅಥವಾ ಸಂವಿಧಾನಕ್ಕೆ ಅನುಗುಣವಾಗಿ ಸಾಮಾಜಿಕ ನ್ಯಾಯ ಪಾಲಿಸುವಂತೆ ಆಗಲೀ ವರ್ತಿಸಿಲ್ಲ, ಪೊಲೀಸ್ ಬುದ್ಧಿಯಂತೆ ಬೋ..ಮಗ, ಸೂ..ಮಗ ಎಂತೆಲ್ಲಾ ಬೈದು, ಬೂಟುಕಾಲಿನಲ್ಲಿ ಒದ್ದು ಓಡಿಸ್ತೀನಿ ಅಂತ ದಲಿತ ಯಜಮಾನ ಕರಿಯಪ್ಪರನ್ನು ಕೆಟ್ಟದಾಗಿ ನಡೆಸಿಕೊಂಡಿದ್ದಾನೆ.

ಇದು ಸಂಪ್ರದಾಯ ಮುರಿದಿರುವ ಒಕ್ಕಲಿಗರಿಗೆ ಖುಷಿಕೊಟ್ಟರೆ, ದಲಿತರಿಗೆ ಸಹಜವಾಗಿ ಸಿಟ್ಟು ತರಿಸಿದೆ. ಸಿದ್ಧಾರ್ಥ ನಗರ, ಕೀರ್ತಿನಗರ ಮತ್ತು ಅಶೋಕನಗರದ ದಲಿತರು ಪೂಜೆಗೆ ಹೋಗುವುದನ್ನು ನಿಲ್ಲಿಸಿ, ನ್ಯಾಯಕೇಳಿದ ದಲಿತ ಯಜಮಾನ ಕರಿಯಪ್ಪನಿಗೆ ಅವಮಾನ ಮಾಡಿ, ಕೆಟ್ಟದಾಗಿ ನಡೆದುಕೊಂಡ ಸರ್ಕಲ್ ಇನ್ಸ್‌ಪೆಕ್ಟರ್ ರಮೇಶ್‌ನನ್ನು ಅಮಾನತ್ತಿಗಾಗಿ ಒತ್ತಾಯಿಸಿ ಗ್ರಾಮಾಂತರ ಪೊಲೀಸ್ ಠಾಣೆಗೆ ದಲಿತ ಯುವಕರು ಮುತ್ತಿಗೆ ಹಾಕಿದ್ದಾರೆ, ರಸ್ತೆ ತಡೆ ಮಾಡಿದ್ದಾರೆ. ಊರಿನಲ್ಲೇ ಇದ್ದ ನರೇಂದ್ರಸ್ವಾಮಿ ಸ್ಥಳಕ್ಕೆ ಬಾರದೇ ಇರುವುದರಿಂದ ಕೋಪಗೊಂಡು, ಅಲ್ಲೇ ಇದ್ದ ನರೇಂದ್ರಸ್ವಾಮಿಯ ಕಟೌಟ್‌ಗೆ ಬೆಂಕಿ ಹಚ್ಚಿದ್ದಾರೆ. ಎಸ್ಪಿ ಕೌಶಲೇಂದ್ರ ಕುಮಾರ್, ಡಿವೈಎಸ್ಪಿ ಖಯ್ಯೂಂ ಸ್ಥಳಕ್ಕೆ ಬಂದಿದ್ದರೂ, ಕರ್ತವ್ಯಲೋಪ ಎಸಗಿರುವ ಸಿಪಿಐ ರಮೇಶಗೆ ಕನಿಷ್ಠ ಕ್ಷಮೆ ಕೇಳಿಸಿ ಹಬ್ಬಕ್ಕೆ ದಲಿತರೂ ಹೋಗುವಂತೆ ಮಾಡಬಹುದಾಗಿತ್ತು. ಬದಲಿಗೆ ಪೊಲೀಸರನ್ನ ಕರೆಸಿ ಲಾಠಿಚಾರ್ಜ್ ಮಾಡಿಸಲಾಗಿದೆ.



ದಲಿತರು ತಂಬಿಟ್ಟಿನ ಆರತಿ ಮಾಡಲೇ ಇಲ್ಲ. ಲಾಠಿಚಾರ್ಜ್ ಮಾಡಿ ಓಡಿಸಿದ್ದ ದಲಿತರ ಮನೆಗಳಿಗೆ ರಾತ್ರಿ ಪೊಲೀಸರು ನುಗ್ಗಿದ್ದಾರೆ. ಸಿಡಿ ಹಬ್ಬಕ್ಕೆಂದು ಬಂದ ಅತಿಥಿಗಳ ಜೊತೆ ಊಟ ಮಾಡುತ್ತಿದ್ದವರನ್ನು ಎಳೆದುಕೊಂಡು ಹೋಗಿದ್ದಾರೆ. ಒಟ್ಟು 28 ಜನರನ್ನು ಬಂಧಿಸಲಾಗಿದೆ. ಮಾರನೆಯ ದಿನ ಇದನ್ನು ಪ್ರಶ್ನಿಸಿ ಮತ್ತೆ ಪ್ರತಿಭಟಿಸಿದವರನ್ನು ಸಮಾಧಾನಪಡಿಸುವ ಬದಲು, ಆಗಲೂ ಲಾಠಿಚಾರ್ಜ್ ಮಾಡಲಾಗಿದೆ.



ನರೇಂದ್ರಸ್ವಾಮಿ

ನ್ಯಾಯ ಕೇಳಿದರೆ ಕೇಸು

ಮಳವಳ್ಳಿಯಲ್ಲಿನ ದಲಿತರು ನ್ಯಾಯ ಕೇಳಿದರೆ ಅವರ ಮೇಲೆ ಒಂದರಮೇಲೆ ಒಂದರಂತೆ ಕೇಸುಗಳು ಬೀಳುತ್ತಿವೆ. ಮೊನ್ನೆಯ ಘಟನೆಯಷ್ಟೇ ಅಲ್ಲ, ನರೇಂದ್ರಸ್ವಾಮಿ ಶಾಸಕನಾದ ಮೇಲೆ ದಲಿತರ ಮೇಲೆ ಸವರ್ಣೀಯರ ದೌರ್ಜನ್ಯಗಳು ವಿಪರೀತವಾಗಿವೆ. ದುರಂತ ಅಂದರೆ ಗಲಾಟೆ ನಡೆಸುವವರು ಸಚಿವನ ಚೇಲಾಗಳೆ. ಕಳೆದ ವರ್ಷ ನೆಲಮಾಕನಹಳ್ಳಿಯ ಬುಡಕಟ್ಟು ಸಮುದಾಯದ ವಿಧವೆ ಸಾವಿತ್ರಮ್ಮನನ್ನು ಧೂರ್ತ ಸಿದ್ದೇಗೌಡ ಕ್ರೂರವಾಗಿ ಕೊಲೆ ಮಾಡಿದಾಗ ರಾಜ್ಯದಾದ್ಯಂತ ಮಹಿಳಾ ಸಂಘಟನೆಗಳು, ದಲಿತ ಸಂಘಟನೆಗಳು ಖಂಡಿಸಿ, ಪ್ರತಿಭಟಿಸಿದಾಗಲೂ ಸೌಜನ್ಯಕ್ಕಾದರೂ ಈ ಸಚಿವ ಮಾತಾಡಲಿಲ್ಲ. ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಸಚಿವಸ್ಥಾನದ ಜವಾಬ್ದಾರಿ ಇರುವ ನರೇಂದ್ರಸ್ವಾಮಿ ತನ್ನ ಕ್ಷೇತ್ರದ ಮಹಿಳೆ ಪರ ನಿಲ್ಲಲೇ ಇಲ್ಲ.

ಮಳವಳ್ಳಿ ತಾಲೂಕು ಕ್ಯಾತನಹಳ್ಳಿಯ ಒಕ್ಕಲಿಗ ಗಜೇಂದ್ರ, ದಲಿತ ಮಹಿಳೆಯ ಮೇಲೆ ಅತ್ಯಾಚಾರದ ಪ್ರಯತ್ನ ನಡೆಸಿದ್ದ. ಆತನ ಮೇಲಿನ ಮೊಕದ್ದಮೆ ವಾಪಸ್ ತೆಗೆದುಕೊಳ್ಳುವಂತೆ ಮಾಡಿದ್ದು ನರೇಂದ್ರಸ್ವಾಮಿ ಮತ್ತು ಆತನ ತಮ್ಮ ಪರಶಿವಮೂರ್ತಿ ಎಂಬುದು ಗುಟ್ಟಾಗಿ ಉಳಿದಿಲ್ಲ. ಈ ಹಿಂದೆ 'ಪತ್ರಿಕೆ'ಯಲ್ಲಿ ಬರೆದಂತೆ ಸಚಿವರ ಅಕ್ರಮ ಮರಳು ದಂಧೆಯನ್ನು ವಿರೋಧಿಸಿದ ಯತೀಶ್ ಎಂಬ ದಲಿತ ಯುವಕನನ್ನು ಅಕ್ರಮ ಬಂಧನಕ್ಕೆ ಒಳಪಡಿಸಿ ಪೊಲೀಸರಿಂದ ಹಿಂಸೆ ಕೊಡಿಸಲಾಗಿತ್ತು.

ಕೀರ್ತಿ ನಗರದ ನಾಗರಾಜು ಮತ್ತು ಅವರ 8 ವರ್ಷದ ಮಗ ಕೂಲಿ ಕೆಲಸ ಮುಗಿಸಿ ವಾಪಸ್ಸು ಬಂದಾಗ ವಾಹನವೊಂದು ಡಿಕ್ಕಿ ಹೊಡೆದಾಗ ನಾಗೇಶ್ ಎಂಬ ಆ ಹುಡುಗ ಮೃತಪಟ್ಟ.. ಆಗ ಅಲ್ಲಿ ಇಡೀ ಕೀರ್ತಿನಗರದ ಜನರು ಪ್ರತಿಭಟಿಸಿದ್ದರು. ಸಚಿವರ ನೇತೃತ್ವದಲ್ಲಿ ನಡೆಯುತ್ತಿದ್ದ ಮರಳು ಸಾಗಾಣಿಕೆಯೇ ಇದಕ್ಕೆ ಕಾರಣ ಎಂಬುದು ಅವರ ಆಕ್ರೋಶಕ್ಕೆ ಕಾರಣವಾಗಿತ್ತು. ಆಗ ಪ್ರತಿಭಟಿಸಿದ 52 ಜನ ದಲಿತರು ಈಗಲೂ ಕೋರ್ಟಿಗೆ ಅಲೆಯುವಂತಾಗಿದೆ.

ಈಗಾಗಲೇ ಮಳವಳ್ಳಿ ಕ್ಷೇತ್ರದಲ್ಲಿ ಇಲ್ಲಿನ ಮೀಸಲನ್ನು ತೆಗೆಯಬೇಕೆಂಬ ಕೂಗು ಎದ್ದಿದೆ. ನರೇಂದ್ರಸ್ವಾಮಿಯಂತಹ ಮರಳು ಮಾಫಿಯಾ ಬಂಡವಾಳಿಗರು ಎಲ್ಲಾ ಕಾಲದಲ್ಲೂ ಉಳಿದುಕೊಳ್ಳುತ್ತಾರಾದರೂ, ಸಾಮಾನ್ಯ ದಲಿತರು ಬಲಿಪಶುಗಳಾಗುತ್ತಲೇ ಹೋಗುತ್ತಾರೆ. ಅದೇನೇ ಇರಲಿ, ಆದಷ್ಟು ಬೇಗನೇ ಮಳವಳ್ಳಿಯ ಸದ್ಯದ ಬಿಕ್ಕಟ್ಟನ್ನು ಬಗೆಹರಿಸಲು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಹೆಚ್ಚು ಶೋಷಣೆಗೊಳಗಾದವರಿಗೆ ಹೆಚ್ಚಿನ ನೆರವು, ಸಾಂತ್ವನ ನೀಡುವ ಅವಶ್ಯಕತೆಯಿದೆ.

ಆದರೆ ಅಂತಹ ನಾಯಕರಾಗಲೀ, ಅಧಿಕಾರಿಗಳಾಗಲೀ ಕಾಣದಿರುವುದು ಇಂದಿನ ದುರಂತವಾಗಿದೆ.

● ಲಕ್ಷ್ಮಣ್ ಚೀರನಹಳ್ಳಿ


ಮುರುಗೇಶ್ ನಿರಾಣಿ ಸುಲಿಗೆಯೇ ಮಂತ್ರಿಗೆ ಕೈಗಾರಿಕೆ?



ಕನ್ನಡಿಗರಿಗೆ ಅರ್ಥಾತ್ ರೈತರ ಮಕ್ಕಳಿಗೆ ಕೆಲಸ ಸಿಗಬೇಕು ಆದರೆ ಈ ರಾಜ್ಯಕ್ಕೆ ಕೈಗಾರಿಕೆಗಳು ಬರಬೇಕು. ಕೈಗಾರಿಕೆಗಳಿಗಾಗಿ ರೈತ ತನ್ನ ಭೂಮಿಯನ್ನು ಮುದಿಗಾಸಿಗೆ ಬಿಟ್ಟುಕೊಡಬೇಕು. ಹೀಗೆ ಉದ್ಯೋಗದ ಹೆಸರಲ್ಲಿ ರೈತನಿಂದ ಕಿತ್ತ ಭೂಮಿಯನ್ನು ಸೋಕಾಲ್ಡ್ ಕೈಗಾರಿಕೆಗಳೆಂಬ ನಕಲಿ ಉದ್ದಿಮೆಪತಿಗಳು ಮತ್ತು ಅಸಲಿ ರಿಯಲ್ ಎಸ್ಟೇಟ್ ಕುಳಿಂದುಕರ ಬಾಯಿಗೆ ಹಾಕುವುದೇ ಆಯಾ ಸರ್ಕಾರಗಳ ಅನೆಮುರುಕು ನೀತಿ. ಹಿಂದಿದ್ದ ದೇಶಪಾಂಡೆ, ಸಿಂಧ್ಯಾ ನಂತರದ ಕಟ್ಟಾ ಇತ್ಯಾದಿಗಳೆಲ್ಲ ಕೈಗಾರಿಕಾ ಮಂತ್ರಿಗಳಾಗಿ ಮಾಡಿದ್ದು ಇಂಥ ರಿಯಲ್ ಎಸ್ಟೇಟ್ ದಂಧೆಯನ್ನೇ ಆದರೂ ಕಬಳಿಕೆಯಲ್ಲಿ ಇತಿಮಿತಿಯಿತ್ತು. ರೈತನ ಬಗ್ಗೆ ಸಟಾಚಾರಕ್ಕಾದರೂ ಕಾಳಜಿಯಿರುತ್ತಿತ್ತು.

ಹಾಗಂತ ಸದ್ಯ ಆ ಹುದ್ದೆಯಲ್ಲಿರುವ ಮುರುಗೇಶ್ ನಿರಾಣಿಗೆ ತಾನೊಬ್ಬ ಮಂತ್ರಿಯೆಂಬ ಕನಿಷ್ಠ ಪ್ರಜ್ಞೆಯಾದರೂ ಇರಬೇಕಿತ್ತಲ್ಲವೇ? ನಿರಾಣಿಗೆ ಮಂತ್ರಿಗಿರಿಗೂ, ಮುದಿ ಕಮಿಷನ್‌ಗಾಗಿ ಕೈ ಚಾಚುವ ಲ್ಯಾಂಡ್ ಬ್ರೋಕರಿಕೆಗೂ ವ್ಯತ್ಯಾಸ ಗೊತ್ತಿಲ್ಲ. ಮಂತ್ರಿ ಸ್ಥಾನದ ಘನತೆಯ ಮುಂದೆ ತಾನು ರಿಯಲ್ ಎಸ್ಟೇಟ್ ಖದೀಮನಂತೆ ವರ್ತಿಸಬಾರದೆಂಬ ಪರಿವೆ ಕೂಡ ಇದ್ದಂತಿಲ್ಲ. ಕೈಗಾರಿಕಾ ಸೈಟು ಮಂಜೂರು ಮಾಡಲು ಉದ್ದಿಮೆದಾರರನ್ನೇ ನಿಲ್ಲಿಸಿ ಎಕರೆಕ್ಕಾಗಿ ಕಮಿಷನ್ ಕೇಳುತ್ತಾರೆ. ಭೂಮಿ ಕಳಕೊಂಡ ರೈತ ಹೆಚ್ಚಿಗೆ ಪರಿಹಾರ ನೀಡಿ ಎಂದು ಪ್ರತಿಭಟನೆಗಿಳಿದರೆ ಕೊಟ್ಟ ಪರಿಹಾರದಲ್ಲೂ ಲಂಚಕ್ಕೆ ಕೈಚಾಚುತ್ತಾರೆ. ಮಂತ್ರಿಯಾಗಿ ಇಪ್ಪತ್ತು ತಿಂಗಳಲ್ಲಿ ಕೈಗಾರಿಕಾ ಸೈಟು ದಂಧೆ ಮತ್ತು ಕಮಿಷನ್ ವಸೂಲಿ ಬಿಟ್ಟರೆ ನಿರಾಣಿ ಮಾಡಿದ್ದು ಕನ್ನಡಿಗರಿಗೆ ಉದ್ಯೋಗದ ಬಿಟ್ಟಿ ಭಾಷಣವನ್ನಷ್ಟೇ.

ಬಾಗಲಕೋಟೆಯ ನಿರಾಣಿ ಶುಗರ್ಸ್ ಅಂಡ್ ಸಿಮೆಂಟ್ ಕಂಪೆನಿ ಎಂಬ ಡುಬಾಕೋರ್ ಕಂಪೆನಿಗೆ ಮಾಲೀಕರೂ ಆಗಿರುವ ನಿರಾಣಿ ಅದಕ್ಕೊಂದು ವಿದ್ಯುತ್ ಕದ್ದು ಸಿಕ್ಕಿಬಿದ್ದು ಕ್ರಿಮಿನಲ್ ಕೇಸು ಹೊತ್ತೇ ಮಂತ್ರಿಯಾದರು. ಹಿಂದಿದ್ದ ಕಟ್ಟಾ ನಾಯ್ಡುವನ್ನು ಎತ್ತಂಗಡಿ ಮಾಡಿ ನಿರಾಣಿಯನ್ನು ಸೀರಿ ಕೈಗಾರಿಕಾ ಮಂತ್ರಿ ಹುದ್ದೆಗೆ ತಂದದ್ದು ಮುಖ್ಯಮಂತ್ರಿ ಯಡ್ಡಿ. ಬಹುಶಃ ನಿರಾಣಿಯ 'ಗೋಲ್ ಮಾಲ್ ಪ್ರಾವೀಣ್ಯ' ಕಂಡೇ ಕೈಗಾರಿಕಾ ಮಂತ್ರಿಯಂಥ



ಶಾನಮಂಗಲ ಕೈಗಾರಿಕಾ ಎಸ್ಟೇಟ್

ಸ್ಥಾನಕ್ಕೆ ತಂದಿರಬೇಕು. ಬಂದು ಬಂದಿದ್ದೇ ಕೆಐಎಡಿಬಿಯನ್ನು ಬುಡಲ್ಲಿಂದ ಗೆಬರಬೇಕೆಂಬ ಮಾಸ್ಟರ್ ಪ್ಲಾನ್ ಹೆಣೆಯುವುದರಲ್ಲೇ ನಿರಾಣಿ ಬಿಜಿಯಾದರು. ಅದಕ್ಕೊಂದು ನಿರಾಣಿ ಸಾಹೇಬರ ಎಡಗೈ ಬಲಗೈಯಂತೆ ಇಟ್ಟುಕೊಂಡವರು ಉಮೇಶ ಮತ್ತು ರಮೇಶ ಎಂಬ ಕಟಕ ದಮನಕರು!


ದಿನಬೆಳಗಾದರೆ ಕೆಐಎಡಿಬಿ, ಉದ್ಯೋಗಮಿತ್ರ ಮತ್ತು ಸಣ್ಣ ಕೈಗಾರಿಕಾ ನಿಗಮಕ್ಕೆ ವಕ್ಕರಿಸಿ ಅಲ್ಲಿನ ಅಧಿಕಾರಿಗಳಿಗೆ ಧಮಕಿ ಹಾಕಿ ವಸೂಲಿ ಮಾಡುವುದೇ ಈ ಭಟ್ಟಂಗಿಗಳ ನಿತ್ಯ ಕಾಯಕ. ಈ ಪೈಕಿ ಉಮೇಶ ಮಂತ್ರಿ ನಿರಾಣಿಗೆ ಶಿಫಾರಿಯಂತೆ. ರಮೇಶ ಸಚಿವರ ಓಎಸ್‌ಡಿ ಹುದ್ದೆಯಲ್ಲಿದ್ದು ಸದಾಕಾಲ ಡೀಲು ನಿಮಿತ್ತ ಉಮೇಶನ ಜೊತೆ ಸುತ್ತಾಡುತ್ತಾನೆ. ಇವರಲ್ಲದೇ ನಿರಾಣಿಯ ಸತ್ರಾಧಿಕಾರಿ ನಾಗರಾಜ್ ಜಮಖಂಡಿ ಎಂಬ ಉದಯ ಟೀವಿಯ ಮಾಜಿ ವರದಿಗಾರನೂ ಡೀಲು ಪಾಲಿನಲ್ಲೇ ಬಿಜಿಯಾಗಿರುತ್ತಾನೆ.

ಸದ್ಯ ವಿ.ಪಿ. ಬಳಿಗಾರ್ ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯಾಗಿ ಬಂದಿದ್ದಾರಾದರೂ ನಿರಾಣಿಯ ವಸೂಲಿ ಜಾಲದ ಮುಂದೆ ಉಸಿರೆತ್ತುವಂತಿಲ್ಲ. ಇನ್ನು ಕೆಐಎಡಿಬಿಗೆ ಮುಖ್ಯಾಧಿಕಾರಿಯಾಗಿರುವ ಶ್ಯಾಂಭಟ್ ಮುಂದೆ ಬಂದರೆ ಹಾಯದ ಹಿಂದೆ ಬಂದರೆ ಒದೆಯದ ಪಾಣ್ಯಕೋಟಿ. ಇಂಥವರಿದ್ದೂ ಮಂತ್ರಿ ನಿರಾಣಿಯ ಭ್ರಷ್ಟಾಚಾರವನ್ನು ನಿಯಂತ್ರಿಸಲಾಗುತ್ತಿಲ್ಲ, ಎಲ್ಲೆಲ್ಲಿ ಯಾವ್ಯಾವ ಟೆಂಡರ್‌ನಲ್ಲಿ ದುಡ್ಡು ದೋಚಬಹುದೆಂಬುದನ್ನು ಹೊಂಚು ಹಾಕಿ ಕಾಯುತ್ತಾ ಕೂತ ನಿರಾಣಿ ಸಾಹೇಬರು ಮೊದಲು ಹಾಕಿದ್ದು ಬಿಡದಿ ಶಾನಮಂಗಲದ ಸೂರಾ ಎಂಬತ್ಮೂರು ಎಕರೆಗೆ.

ಅದು ಯಾವುದೋ ಕಾಲಕ್ಕೆ ಹಿಮಾಲಯನ್ ಡ್ರಗ್ ಕಂಪೆನಿಗೆ ಕೈಗಾರಿಕಾ ಉದ್ದೇಶಕ್ಕೊಂದು ಮಂಜೂರಾಗಿದ್ದ ಜಾಗ. ಬಿಡದಿ ಸಮೀಪದ ಶಾನಮಂಗಲ ಗ್ರಾಮದ ನೂರಾರು ರೈತರ ಭೂಮಿ ಕಿತ್ತು ಕೈಗಾರಿಕಾ ಜಮೀನಾಗಿ ಪರಿವರ್ತನೆಗೊಂಡಿದ್ದ ಈ ಭೂಮಿಯ ರೈತರಿಗೆ ಪರಿಹಾರವಾಗಿ ಕೊಟ್ಟಿದ್ದು ಎಕರೆಗೆ ಐದೋ ಆರೋ ಲಕ್ಷ ಮಾತ್ರ. ಹೆಚ್ಚಿನ ಪರಿಹಾರ ಕೊಡುವಂತೆ ಕಳೆದ ಏಳೆಂಟು ವರ್ಷಗಳಿಂದ ರೈತರು ನಡೆಸುತ್ತಿರುವ ಹೋರಾಟ ಕಂಡೇ ಹಿಮಾಲಯನ್ ಡ್ರಗ್ ಕಂಪೆನಿ ತಿರಸ್ಕರಿಸಿದ 183 ಎಕರೆ ಭೂಮಿಯನ್ನು ಎಕರೆಗೆ 60 ಲಕ್ಷದಂತೆ 45 ಮಂದಿ ನಕಲಿ ಕೈಗಾರಿಕೋದ್ಯಮಿಗಳಿಗೆ ಮಂಜೂರು ಮಾಡಿಸಿದ ಮಂತ್ರಿ ನಿರಾಣಿ ತಲಾ ಎಕರೆಗೆ ಹತ್ತು ಲಕ್ಷದಂತೆ ಕಮಿಷನ್ ತಿಂದೇ ಮಂಜೂರಾತಿ ಪತ್ರ ಕೊಟ್ಟಿದ್ದರು.

ಇಷ್ಟಾಗ್ಯೂ ರೈತರ ಹೋರಾಟ ನಿಲ್ಲಲಿಲ್ಲ. ಅದಕ್ಕೆ ನಿರಾಣಿ ಸಾಹೇಬರು ವಿಚಿತ್ರ ಸೂತ್ರವೊಂದನ್ನು ಪತ್ತೆ ಹಚ್ಚಿ ಪ್ರತಿ ಅಲಾಟಿಯೂ (ನಿವೇಶನ ಮಂಜೂರಾದ ವ್ಯಕ್ತಿ) ತಲಾ ಹತ್ತು ಲಕ್ಷದಂತೆ ರೈತರ ಪರಿಹಾರ ನಿಧಿಗೆ ಕೊಡಬೇಕೆಂಬ ಫತ್ವಾ ಹೊರಡಿಸಿದ್ದಾರೆ. ಹಾಗಂತ ಅಲಾಟಿಗೆ ನಷ್ಟವಾಗಬಾರದಲ್ಲ; ಅದಕ್ಕೆ 60 ಲಕ್ಷವಿದ್ದ ಎಕರೆಯ ಬೆಲೆಯನ್ನು 50 ಲಕ್ಷಕ್ಕೆ ಇಳಿಸಿದ್ದಾರೆ. ಹೀಗೆ ಪ್ರತಿ ಅಲಾಟಿಯಿಂದ ಸಂಗ್ರಹಿಸಿದ ಸರಿಸುಮಾರು 18 ಕೋಟಿ ರೂಪಾಯಿಗಳಷ್ಟು ದುಡ್ಡನ್ನು ಭೂಮಿ ಕಳಕೊಂಡ ರೈತರಿಗೆ ಕೊಡಬೇಕಲ್ಲವೇ?

ಆದರೆ ಈತನಕ ಸಂಗ್ರಹಿಸಿದ 18 ಕೋಟಿಯಲ್ಲಿ ನಯಾಪೈಸೆಯನ್ನೂ ರೈತರಿಗೆ ಕೊಟ್ಟಿಲ್ಲ. ಇವತ್ತು ಕೊಡುತ್ತಾರೆ. ನಾಳೆ ಕೊಡುತ್ತಾರೆ ಎಂದು ರೈತರು ಕಾದುಕಾದು ಸುಸ್ತಾದರೇ ಹೊರತು ದುಡ್ಡು ಮಾತ್ರ ಬಿಡುಗಡೆಯಾಗಿಲ್ಲ. ರೈತರೆಲ್ಲ ಒಗ್ಗಟ್ಟಾಗಿ ನಿರಾಣಿ ಸಾಹೇಬರನ್ನು ಕಂಡರೆ ಪಕ್ಕಾ ಡೀಲರ್ ಗತ್ತಿನಲ್ಲಿ ಚೌಕಾಸಿಗಿಳಿದ ನಿರಾಣಿ 'ಯಾವುದಕ್ಕೂ ನಮ್ಮ ಉಮೇಶನ ಹತ್ರ ಮಾತಾಡಿ' ಎಂದಿದ್ದೇ ಜಾಗ ಖಾಲಿ ಮಾಡಿದ್ದಾರೆ. ಛೇಲಾ ಉಮೇಶ್ ಪ್ರತಿ ಎಕರೆಗೆ ಮೂರು ಲಕ್ಷದಂತೆ ಮಂತ್ರಿಗೆ ಕಮಿಷನ್ ಕೊಟ್ಟರಷ್ಟೇ ಹಣ ಬಿಡುಗಡೆಯಾಗುತ್ತೆ ಎಂದು ಹುಳ್ಳಗೆ ಡೀಲು ಮಂಡಿಸುತ್ತಾನೆ.



'ಅಲ್ಲಯ್ಯಾ ಜಮೀನು ನಮ್ದು. ಬೀದಿಗೆ ಬಿದ್ದೋರು ನಾವು. ನಮ್ಮ ಪರಿಹಾರದಲ್ಲಿ ಮಂತ್ರಿಗೆ ಮೂರು ಲಕ್ಷ ಕೊಡು ಅಂದ್ರೆ ನಾವೇನು ಮಣ್ಣು ತಿನ್ನಬೇಕಾ?' ಎಂದು ರೈತರು ಉಗಿದರೆ ಉಮೇಶ-ರಮೇಶ ಸೇರಿಕೊಂಡು ರೈತರಿಗೆ ರೋಪು ಹಾಕುತ್ತಾರೆ. ಕೊನೆಗೆ ರೈತರೆಲ್ಲ ಸೇರಿ ಮಾಗಡಿ ಶಾಸಕ ಬಾಲಕೃಷ್ಣರ ಬಳಿ ದುಃಖ ತೋಡಿಕೊಂಡಿದ್ದಾರೆ. ಸ್ವತಃ ಬಾಲಕೃಷ್ಣರೇ ಮಂತ್ರಿ ನಿರಾಣಿಯನ್ನು ಕಂಡು 'ಅಲ್ರೀ ರೈತರ ಹತ್ರ ಯಾರಾದರೂ ಲಂಚ ತಿಂತಾರೇನ್ರಿ..' ಎಂದರೆ ನಿರಾಣಿ 'ಏನ್ ಗುರೂ... ನೀನೇ ನಿಂತು ರೈತರಿಂದ ಕಾಸು ಕೊಡಿಸು ಗುರೂ...' ಎಂದು ಅಂಗಲಾಚಿದ್ದಾರೆ.

ವಿಧಿಯಿಲ್ಲದೇ ಬಾಲಕೃಷ್ಣ ರೈತರನ್ನೆಲ್ಲ ಸೇರಿಸಿ 'ನೋಡ್ರಪ್ಪಾ... ನಾನೇ ಒಂದು ಟವೆಲ್ಲು ಹಾಸ್ತೀನಿ. ನಿಮ್ಮ ಕೈಲಿ ಏನಾಗುತ್ತೋ ಅದನ್ನು ಭಿಕ್ಷೆ ಅಂತ ತಿಳ್ಕೊಂಡು ಹಾಕಿಬಿಡಿ. ನಾನೇ ಒಯ್ದು ಅದನ್ನು ಮಂತ್ರಿಗೆ ತಲುಪಿಸ್ತೀನಿ' ಎಂದು ರೈತರ ಮುಂದೆ ಗೋಗರೆಯಬೇಕಾಯ್ತು. ಮಂತ್ರಿಯೊಬ್ಬ ರೈತರ ಪರಿಹಾರಕ್ಕೂ ಕಮಿಷನ್ ಕೇಳುತ್ತಾನೆಂದರೆ ಇನ್ನು ಕೆಐಎಡಿಬಿಯ ಗತಿ ಏನಾಗಿರಬೇಡ?

ಸದ್ಯ ಶಾನಮಂಗಲದ ಕೈಗಾರಿಕಾ ಪ್ರದೇಶದ ಒಟ್ಟು 183 ಎಕರೆ ಭೂಮಿಯಿಡೀ ಕಳ್ಳಕಾಕರ ಪಾಲಾಗಿದೆ. ಮದರ್‌ಸನ್ ಎಂಬ ಕಂಪೆನಿಯೇ ನಿಂತು ಪ್ರತಿ ಅಲಾಟಿಯಿಂದ ಎಕರೆಗೆ 10 ಲಕ್ಷದಂತೆ ಸಂಗ್ರಹಿಸಿ ನಿರಾಣಿಯ ಕೈಗಿತ್ತಿದೆ. ರೈತರ ಪ್ರತಿ ಎಕರೆಗೆ 3 ಲಕ್ಷದಂತೆ ಕಮೀಷನ್ ಹಿಡಿದುಕೊಂಡೇ ಉಳಿಕೆ ದುಡ್ಡನ್ನು ಬಿಡುಗಡೆ ಮಾಡುತ್ತಾರಂತೆ ನಿರಾಣಿ. ಹಿಂದಿದ್ದ ಕೈಗಾರಿಕಾ ಮಂತ್ರಿಗಳೆಲ್ಲ 'ಅಲಾಟಿ' ಉದ್ದಿಮೆಪತಿಗಳಿಂದ ಕಮೀಷನ್ ತಿಂದರೆ ನಿರಾಣಿ ಇತ್ತ ಅಲಾಟಿಯಿಂದಲೂ ಅತ್ತ ರೈತನಿಂದಲೂ ಒಟ್ಟೊಟ್ಟಿಗೆ ಡಬ್ಬಲ್ ಕಮಿಷನ್ ಬಾಚುತ್ತಿದ್ದಾರೆ!

ಹೋಗಲಿ, ಪ್ರಾಮಾಣಿಕ ಉದ್ದೇಶಕ್ಕಾದರೂ ಭೂಮಿ ಬಳಕೆಯಾಗಬೇಕಲ್ಲವೇ?

ನಿರಾಣಿಗಿಲ್ಲಿ ಕಮಿಷನ್ ಮುಖ್ಯವೇ ಹೊರತು ಕೈಗಾರಿಕೆಯಲ್ಲ. ಶಾನಮಂಗಲದ 183 ಎಕರೆ ಪೈಕಿ ಬಿಸಿಸಿಐ ಅಂದರೆ ಭಾರತೀಯ ಕ್ರಿಕೆಟ್ ಮಂಡಳಿಗೆ ಮಂಜೂರಾಗಿದ್ದ 32 ಎಕರೆಯನ್ನೂ ಕಿತ್ತ ನಿರಾಣಿ ಅದನ್ನು ಖದೀಮರ ಬಾಯಿಗೆ ಹಾಕಿದ್ದಾರೆ. ಶಾನಮಂಗಲದಲ್ಲಿ ಸುಸಜ್ಜಿತ ರಾಷ್ಟ್ರಮಟ್ಟದ ಕ್ರಿಕೆಟ್ ತರಬೇತಿ ಕೇಂದ್ರಕ್ಕೊಂದು ಬಿಸಿಸಿಐ ಅಧ್ಯಕ್ಷ ಶರದ್ ಪವಾರ್ ಅರ್ಜಿ ಹಾಕಿದ್ದರು. ಅಲ್ಲಿ ಕ್ರಿಕೆಟ್ ಅಕಾಡೆಮಿಯಾಗಲಿ ಎಂದೇ ಕುಮಾರಸ್ವಾಮಿ ಸರ್ಕಾರ 32 ಎಕರೆಯನ್ನು ಮಂಜೂರು ಮಾಡಿತ್ತು. ಆದರೆ ನಿರಾಣಿಗೆ ಕಾಸು ಹುಟ್ಟಬೇಕಲ್ಲ, ಏಕಾಏಕಿ ಬಿಸಿಸಿಐಗೆ ಕೊಟ್ಟಿದ್ದ 32 ಎಕರೆಯನ್ನು ವಾಪಸ್ಸು ಕಿತ್ತಿದ್ದೇ ಎ.ಎಸ್. ಕೆರಿಯರ್ಸ್ ಎಂಬ ನಕಲಿ ಕಂಪೆನಿಗೆ ಕೊಟ್ಟರು. ರೊಚ್ಚಿಗೆದ್ದ ಶರದ್ ಪವಾರ್ ಬಿಜೆಪಿ ಸರ್ಕಾರ ಲಂಚಗುಳಿ ತನಕ್ಕೆ ಛೀಮಾರಿ ಹಾಕಿ ಪತ್ರ ಬರೆದರು. ಈಗ ದೇವನಹಳ್ಳಿ ಬಳಿ ಪರ್ಯಾಯ ಜಮೀನು ಕೊಡುತ್ತೇನೆಂದು ನಿರಾಣಿ ತಿಪ್ಪೆ ಸಾರಿಸುತ್ತಿದ್ದಾರೆ. ಬೇಸತ್ತ ಕ್ರಿಕೆಟ್ ಮಂಡಳಿ ಕ್ರಿಕೆಟ್ ಅಕಾಡೆಮಿಯನ್ನು ಚೆನ್ನೈಗೆ ಸ್ಥಳಾಂತರಿಸಿದೆ.

ಬಿಡದಿ ಕೈಗಾರಿಕಾ ಎಸ್ಟೇಟ್‌ನ ಕರ್ಮಕಾಂಡವೊಂದನ್ನೇ ಲೆಕ್ಕ ಹಾಕಿದರೆ ಅಲಾಟಿಗಳಿಂದ ಎಕರೆಗೆ ಹತ್ತು ಲಕ್ಷ ಮತ್ತು ರೈತರಿಂದ ಎಕರೆಗೆ ಮೂರು ಲಕ್ಷದಂತೆ ಕಿತ್ತ ನಿರಾಣಿ ಈ ಒಂದೇ ಡೀಲಿನಿಂದ ಇಪ್ಪತ್ಮೂರುವರೆ ಕೋಟಿ ರೂಪಾಯಿಗಳಷ್ಟನ್ನು ಜೇಬಿಗಿಳಿಸಿದ್ದಾರೆ.

ಇನ್ನು ಕನಕಪುರ ರಸ್ತೆಯ ಹಾರೋಹಳ್ಳಿ ಕೈಗಾರಿಕಾ ಎಸ್ಟೇಟ್ ಕಬಳಿಕೆಯದ್ದೇ ಮತ್ತೊಂದು ಕತೆ. ಅದು ನಿರಾಣಿಯ ಐದು ಕೋಟಿಯ ಎರಡನೇ ಡೀಲು. ಸಣ್ಣ ಕೈಗಾರಿಕೆಗಳಿಗೆಂದು ಒಂದೆಕರೆ ಎರಡೆಕರೆಯಂತೆ ಮಂಜೂರು ಮಾಡುವ ಅಧಿಕಾರ ಕೆಐಎಡಿಬಿ ಮುಖ್ಯಸ್ಥ ಶ್ಯಾಂಭಟ್ಟರಿಗಿದೆ. ಇದೇ ಆಧಾರದ ಮೇಲೆ ಸರಿಸುಮಾರು ಸಾಚಾ ಕಂಪೆನಿಗಳನ್ನು ಹುಡುಕಿ ಒಂದೋ ಎರಡೋ ಎಕರೆಯಂತೆ ಇಲ್ಲಿಗೆ ಮೂರು ತಿಂಗಳ ಹಿಂದೆಯೇ ಭಟ್ಟರು ಮಂಜೂರು ಮಾಡಿಯಾಗಿತ್ತು.


ಇದು ಗೊತ್ತಾಗಿದ್ದೇ ನಿರಾಣಿ ಇಡೀ ಹಾರೋಹಳ್ಳಿ ಮಂಜೂರಾತಿ ಫೈಲನ್ನು ತರಿಸಿಕೊಂಡು ಗಪ್‌ಚುಪ್ ಆಗಿ ಕುಂತುಬಿಟ್ಟರು. ಕಾದು ಕಾದು ಸುಸ್ತು ಹೊಡೆದ ಅಲಾಟಿಗಳು ಕೊನೆಗೆ ಬೇರೆ ಗತಿಯಿಲ್ಲದೇ ಎಕರೆಗೆ ಆರು ಲಕ್ಷದಂತೆ ಡೀಲು ಕುದುರಿಸಬೇಕಾಯ್ತು. ರೊಕ್ಕ ಪೂರ್ತಿ ಸಂದಾಯವಾದ ನಂತರವೇ ನಿರಾಣಿ ಮಂಜೂರಾತಿ ಕೊಟ್ಟರು.

ಇದು ನಿರಾಣಿಯ ಕೈಗಾರಿಕಾಭಿವೃದ್ಧಿಗೆ ಕೆಲ ಸ್ಯಾಂಪಲ್ಲುಗಳಷ್ಟೇ. ಕ್ರಿಕೆಟ್ ಮಂಡಳಿಯಂಥ ಪ್ರತಿಷ್ಠಿತ ಸಂಸ್ಥೆಯನ್ನೇ ವಂಚಿಸಿ ನಕಲಿ ಕಂಪೆನಿಗೆ 32 ಎಕರೆ ಕಿತ್ತುಕೊಡುತ್ತಾರೆಂದರೆ, ಕಮಿಷನ್ ಗಿಟ್ಟುತ್ತದೆಯೆಂದರೆ ಮುದಿ ನೆಲಗಳ್ಳನಿಗೂ ಕೆಐಎಡಿಬಿಯ ಸೈಟು ದಕ್ಕುತ್ತದೆಯೆಂದರೆ; ಇನ್ನಾವ ಪುರುಷಾರ್ಥಕ್ಕೆ ರೈತ ತನ್ನ ಭೂಮಿ ಬಿಟ್ಟು ಕೊಡಬೇಕು?

ಬೀದಿಪಾಲಾದ ರೈತನನ್ನೂ ಬಿಡದೇ ಸುಲಿಯುವ ಕೈಗಾರಿಕಾ ಮಂತ್ರಿಗೆ ಸುಲಿಗೆಯೆಂಬುದೇ ಕೈಗಾರಿಕೆಯಾಗಿ ಬಿಟ್ಟರೆ ಪ್ರಾಮಾಣಿಕ ಕೈಗಾರಿಕೋದ್ಯಮಿಗಳು ಕರ್ನಾಟಕದತ್ತ ಸುಳಿಯುವುದುಂಟೇ?

● ರಾ.ಸೋಮನಾಥ್

ಕಳ್ಳನಿಗಷ್ಟೇ ಕೆಐಎಡಿಬಿಯಲ್ಲಿ ಜಾಗ?




ಮಂತ್ರಿಯಾದವನೇ ಮೂರು ಕಾಸಿನವನಾದರೆ ಇನ್ನು ಕೆಐಎಡಿಬಿಯ ಬಕಾಸುರರು ಯಾವ ಮಟ್ಟಕ್ಕಿಳಿಯಬೇಡ?

ಸದ್ಯ ಕೆಐಎಡಿಬಿಗೆ ಇಬ್ಬರು ಸೆಕ್ರೆಟರಿಗಳಿದ್ದಾರೆ. ಒಬ್ಬ ನಾಗರಾಜ್ ನಾಯಕ್ ಮತ್ತೊಬ್ಬ ಬಿ.ವಿ.ಕುಮಾರ್. ದಿನ ಬೆಳಗ್ಗೆಯಾದರೆ ಅಲಾಟಿಗಳನ್ನು ಅಟಕಾಯಿಸಿಕೊಂಡು 'ಮಿನಿಸ್ಟರ್ ಸಾಹೇಬರಿಗೆ ಕಮಿಷನ್ ಕೊಟ್ಟೇ ಇಲ್ಲವಲ್ರೀ...' ಎಂದು ಪೀಡಿಸುವುದೇ ಇವರಿಬ್ಬರ ನಿತ್ಯ ಕಾಯಕವಾಗಿಬಿಟ್ಟಿದೆ. ಉದ್ಯೋಗ ಮಿತ್ರಕ್ಕೆ ಎಂ.ಡಿ.ಯಾಗಿ ಬಂದ ಶಿವಸ್ವಾಮಿ ಏನಿದ್ದರೂ ರಬ್ಬರ್ ಸ್ಟ್ಯಾಂಪ್ ಮಾತ್ರ. ನೈಜ ಕಂಪೆನಿ ಯಾವುದು, ನಕಲಿ ಕಂಪೆನಿ ಯಾವುದು, ಯಾರಿಗೆ ಎಷ್ಟು ಭೂಮಿ ಬೇಕು ಇತ್ಯಾದಿ ಪ್ರತಿಯೊಂದಕ್ಕೂ ನಿರಾಣಿ ಭಟ್ಟಂಗಿಗಳಾದ ಉಮೇಶ-ರಮೇಶರೇ ಕೈಯಾಡಿಸಿ ಕುಲಗೆಡಿಸುತ್ತಾರಾದ್ದರಿಂದ ಶಿವಸ್ವಾಮಿಗೆ ಮಂತ್ರಿ ವಿರುದ್ಧ ಶಾಪ ಹಾಕುವುದೊಂದೇ ಕೆಲಸ.

ಕೆಐಎಡಿಬಿಯ ಚೀಫ್ ಡೆವಲಪ್‌ಮೆಂಟ್ ಆಫೀಸರ್ ಹುದ್ದೆಗೆ ಬಂದ ಟಿ.ಆರ್.ಸ್ವಾಮಿ ಎಂಬ ದಲಿತ ಅಧಿಕಾರಿ ತನ್ನ ಕರ್ಮಕ್ಕಾಗಿ ತಲೆತಲೆ ಚಚ್ಚಿಕೊಳ್ಳುತ್ತಿದ್ದಾರೆ. ವರ್ಷಂಪ್ರತಿ ಮುನ್ನೂರು ಕೋಟಿಯ ಕಾಮಗಾರಿ ಟೆಂಡರ್‌ಗಳನ್ನೆಲ್ಲ ತನ್ನ ಚೇಲಾಗಳಿಗೆ ಕೊಡಬೇಕೆಂದು ನಿರಾಣಿ ಫತ್ವಾ ಹೊಡೆಸಿದ್ದಾರೆ. ಮಂತ್ರಿಯ ಏಜೆಂಟರಿಗೆ ಕಾಮಗಾರಿ ಟೆಂಡರ್ ಕೊಟ್ಟು ಬಿಟ್ಟರೆ ಕಳಪೆ ಕಾಮಗಾರಿಯ ಪಾಪವನ್ನು ಸ್ವಾಮಿ ಹೊರಬೇಕು. ಕೆಐಎಡಿಬಿಯ ಕಂಟ್ರೋಲರ್ ಆಫ್ ಫೈನಾನ್ಸ್ ಹುದ್ದೆಯಲ್ಲಿರುವ ಮೊಸಳಗಿ ಬ್ಯಾಂಕಿನಿಂದ ಬ್ಯಾಂಕಿಗೆ ಠೇವಣಿ ವರ್ಗಾಯಿಸಿ ಬಡ್ಡಿಯ ಕಮಿಷನ್‌ನಲ್ಲೇ ಮಂತ್ರಿಯ ಜೇಬು ತುಂಬಿಸಬೇಕು. ಇನ್ನು ಮೊದಲೇ ಲಂಚ ಕೊಟ್ಟು ಭೂಸ್ವಾಧೀನಾಧಿಕಾರಿ ಚಿಕ್ಕಬೆಟ್ಟಯ್ಯನ ಜಾಗ ಹಿಡಿದ ರಾಮಕೃಷ್ಣಪ್ಪನದು ಎಂಥ ಫಜೀತಿಯೆಂದರೆ ಪರಿಹಾರ ಕಮಿಷನ್‌ಗಾಗಿ ಶ್ಯಾಂಭಟ್ಟರ ಎದುರೇ ಸ್ಪೆಷಲ್ ಡಿಸಿ ಹಿರೇಮಠ್‌ನ ಮೇಲೆ ಕುಸ್ತಿಗೆ ಬೀಳುತ್ತಾರೆ.

ಇಂಥ ತಿಂಡಿಪೋತರ ಹಿಂಡುಕಟ್ಟಿಕೊಂಡು ಮುಖ್ಯಾಧಿಕಾರಿ ಶ್ಯಾಂಭಟ್ಟರಾಗಲಿ, ಪ್ರಿನ್ಸಿಪಲ್ ಸೆಕ್ರಟರಿ ಬಳಿಗಾರರಾಗಲಿ ಯಾವ ಕಾಯ್ದೆಯನ್ನು ತಾನೇ ಜಾರಿಗೊಳಿಸಲು ಸಾಧ್ಯ?

ಮಂತ್ರಿಯೇ ಬಕಾಸುರನಾಗಿರುವಾಗ ಆತನ ಹೊಟ್ಟೆ ತುಂಬಿಸುವುದು ಅಧಿಕಾರಿಗಳ ಕರ್ಮವಲ್ಲವೇ?



ವನ್ಯಜೀವಿಗಳ ಹಂತಕ ಶಿರೂರು ಸ್ವಾಮಿಗೆ ಕೃಷ್ಣಪೂಜೆಯ ಅಧಿಕಾರ!

ಉಡುಪಿಯ ಅಷ್ಟಮಠಗಳ ಪೈಕಿ ಒಂದಾದ ಶಿರೂರು ಮಠದ ಸರ್ವಾಧಿಕಾರಿಯಾದ ಲಕ್ಷ್ಮೀವರ ಒಬ್ಬ ಕ್ರಿಮಿನಲ್. ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಎರಡು-ಮೂರು ಪ್ರಕರಣಗಳು ಈ ಸ್ವಾಮಿ ವಿರುದ್ಧ ದಾಖಲಾಗಿವೆ. ನ್ಯಾಯಾಲಯದಲ್ಲೂ ವಿಚಾರಣೆಯಲ್ಲಿವೆ. ಕ್ರಿಮಿನಲ್‌ಗಳ ಜತೆ ಗಳಸ್ಯ-ಕಂಠಸ್ಯ ಸಂಬಂಧ ಹೊಂದಿರುವ ಕಾರಣಕ್ಕಾಗಿಯೇ ಈ ಸ್ವಾಮೀಜಿಗೆ ಪರ್ಯಾಯವೇರುವ ಮೊದಲು ವಿದೇಶದಿಂದ ಒಂದು ಫೋನ್ ಮೂಲಕ ಬೆದರಿಕೆ ಕರೆಯೂ ಬಂತು. ಈ ಸ್ವಾಮೀಜಿಗೆ ಗೊತ್ತಿಲ್ಲದೇ ಇರುವುದೇನೂ ಇಲ್ಲ. ಪಿಸ್ತೂಲ್ ತೋರಿಸಿ ಬೆದರಿಸಲೂ ಗೊತ್ತು. ಡ್ರಮ್ ಬಾರಿಸಲೂ ಗೊತ್ತು. ಕೊನೆಗೆ ಮಕ್ಕಳನ್ನು ಮಾಡಲೂ ಗೊತ್ತು!

ಶ್ರೀರಾಮ ದಿವಾಣ

ಗುಡ್ಡದಲ್ಲಿ ಸಿಕ್ಕಿದ ನವಿಲೊಂದನ್ನು ಕಾನೂನಿನ ತಿಳಿವಳಿಕೆಯಿಲ್ಲದೆ ಮನೆಗೆ ತಂದು ಸಾಕಿದ ಬಜಪೆಯ ಬಡ ರೈತನೊಬ್ಬನ ಮೇಲೆ ಮಂಗಳೂರಿನ ಅರಣ್ಯ ಇಲಾಖಾ ಅಧಿಕಾರಿಗಳು ಕೇಸು ಜಡಿದಿದ್ದಾರೆ. ಕಾನೂನಿನ ಅರಿವು ಇದ್ದರೂ, ದುರಹಂಕಾರದಿಂದ, ಮದದಿಂದ ಮಠದೊಳಗೆ ಅಕ್ರಮವಾಗಿ ಗೂಡಿನೊಳಗೆ ಬಂಧಿಸಿ ನವಿಲು ಸಾಕಿದ ಉಡುಪಿಯ ಪರ್ಯಾಯ ಶಿರೂರು ಮಠದ ಲಕ್ಷ್ಮೀವರ ತೀರ್ಥ ಸ್ವಾಮೀಜಿಯನ್ನು ಉಡುಪಿಯ ಅರಣ್ಯ ಇಲಾಖೆಯ ಅಧಿಕಾರಿಗಳು ಮೊಕದ್ದಮೆ ದಾಖಲಿಸದೆ ರಕ್ಷಿಸಿದ್ದಾರೆ.

ಕಾನೂನು ಸರ್ವರಿಗೂ ಸಮಾನ. ಹೀಗಿರುವುದು ಸಂವಿಧಾನದ ಪುಸ್ತಕದಲ್ಲಿ ಶಾಲಾ-ಕಾಲೇಜುಗಳ ಪಠ್ಯ ಪುಸ್ತಕದಲ್ಲಿ ಮತ್ತು ಕಾನೂನನ್ನು ಪರಿಪಾಲಿಸಬೇಕಾದ ಸರ್ಕಾರಿ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಭಾಷಣಗಳಲ್ಲಿ ಮಾತ್ರ ಎನ್ನುವುದನ್ನು ಉಡುಪಿಯಲ್ಲಿ ಅರಣ್ಯ ಇಲಾಖಾಧಿಕಾರಿಗಳು ನಿರಂತರವಾಗಿ ಸಾಕ್ಷಿ ಆಧಾರಗಳ ಸಹಿತ ನಿರೂಪಿಸುವ ಪ್ರಯತ್ನ ನಡೆಸುತ್ತಿದ್ದಾರೆ.

ಶಿರೂರು ಸ್ವಾಮಿ ಮಾಡಿದ್ದೇನು?

ಉಡುಪಿಯ ಅಷ್ಟಮಠಗಳ ಪೈಕಿ ಒಂದಾದ ಶಿರೂರು ಮಠದ ಸರ್ವಾಧಿಕಾರಿಯಾದ ಲಕ್ಷ್ಮೀವರ ಒಬ್ಬ ಕ್ರಿಮಿನಲ್. ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಎರಡು-ಮೂರು ಪ್ರಕರಣಗಳು ಈ ಸ್ವಾಮಿ ವಿರುದ್ಧ ದಾಖಲಾಗಿವೆ. ನ್ಯಾಯಾಲಯದಲ್ಲೂ ವಿಚಾರಣೆಯಲ್ಲಿವೆ.



ಸ್ವಲ್ಪವೂ ಮುಗ್ಧನಲ್ಲದ, ಅಮಾಯಕನೂ ಅಲ್ಲದ ಲಕ್ಷ್ಮೀವರನಿಗೆ ಕ್ರಿಮಿನಲ್‌ಗಳೆಂದರೆ ಭಾರೀ ಪ್ರೀತಿ. ಹಾಗಾಗಿ ಹಲವಾರು ಮಂದಿ ಕ್ರಿಮಿನಲ್‌ಗಳಿಗೆ ಆಶ್ರಯ ಮತ್ತು ಆತಿಥ್ಯ ನೀಡಿದ ಕುಖ್ಯಾತಿ ಈತನದು.

ಕ್ರಿಮಿನಲ್‌ಗಳ ಜತೆ ಗಳಸ್ಯ-ಕಂಠಸ್ಯ ಸಂಬಂಧ ಹೊಂದಿರುವ ಕಾರಣಕ್ಕಾಗಿಯೇ ಈ ಸ್ವಾಮೀಜಿಗೆ ಪರ್ಯಾಯವೇರುವ ಮೊದಲು ವಿದೇಶದಿಂದ ಒಂದು ಬೆದರಿಕೆಯ ಫೋನ್ ಕರೆಯೂ ಬಂತು. ಈ ಸ್ವಾಮೀಜಿಗೆ ಗೊತ್ತಿಲ್ಲದೇ ಇರುವುದೇನೂ ಇಲ್ಲ, ಪಿಸ್ತೂಲ್ ತೋರಿಸಿ ಬೆದರಿಸಲೂ ಗೊತ್ತು, ಡ್ರಮ್ ಬಾರಿಸಲೂ ಗೊತ್ತು, ಕೊನೆಗೆ ಮಕ್ಕಳನ್ನು ಮಾಡಲೂ ಗೊತ್ತು!

ಇಂತಹವನಿಗೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಕೆಲವು ಪ್ರಾಣಿ-ಪಕ್ಷಿಗಳನ್ನು ಅಕ್ರಮವಾಗಿ ಬಂಧನದಲ್ಲಿರಿಸಿ ಸಾಕಬಾರದೆಂಬ ಕನಿಷ್ಠ ಜ್ಞಾನ ಇಲ್ಲದಿರಲು ಸಾಧ್ಯವೇ?

ಇದೆ. ಖಂಡಿತಾ ಇದೆ. ಹಾಗಿದ್ದೂ ಕಾಯ್ದೆಯನ್ನು ಪದೇಪದೇ ಉಲ್ಲಂಘಿಸುವುದೆಂದರೆ, ಇದು ದರ್ಪದ ಪ್ರದರ್ಶನವಲ್ಲದೆ ಮತ್ತೇನೂ ಅಲ್ಲ, ಸರ್ಕಾರಿ ಅಧಿಕಾರಿಗಳ ಮೇಲಿನ ಅಸಡ್ಡೆ, ಕಾನೂನು ಏನು ಮಹಾ? ಎಂಬ ನಿರ್ಲಕ್ಷ್ಯತನ ಮತ್ತು ನನಗೇನಾದೀತು? ನಾನೇನು ಮಾಡಿದರೂ ನಡೆದೀತು ಎಂಬ ದುರಹಂಕಾರದ ಪರಮಾವಧಿಯ ರೂಪವಲ್ಲದೆ ಮತ್ತೇನೂ ಅಲ್ಲ. ಈ ಕಾನೂನು ಭಂಜಕ ಸ್ವಾಮೀಜಿಯ ಜತೆ ನಾವೇನೂ ಕಡಿಮೆ ಇಲ್ಲ ಎಂಬಂತೆ ಸಾಥ್ ನೀಡುತ್ತಿರುವ ಉಡುಪಿ ಜಿಲ್ಲೆಯಲ್ಲಿರುವ ಅರಣ್ಯಾಧಿಕಾರಿಗಳ ಕೊಡುಗೆಯೇನೂ ಕಡಿಮೆಯಿಲ್ಲ.

ಮೊದಲು ಕಡಲಾಮೆ....

ಕಳೆದ ವರ್ಷದ ಆರಂಭದಲ್ಲಿ ಮೀನುಗಾರರಿಂದ ಪಡೆದ ಕಡಲಾಮೆಯನ್ನು ಮಠದೊಳಗೆ ಅಕ್ರಮವಾಗಿ ಸಾಕತೊಡಗಿದ್ದನು.

ಮಠದೊಳಗೆ ಸಣ್ಣದಾದ ನೀರಿನ ತೊಟ್ಟಿಯಲ್ಲಿ ಅತ್ತಿತ್ತ ಚಲಿಸಲು ಸಾಧ್ಯವಾಗದೆ ಚಡಪಡಿಸುತ್ತಿತ್ತು ಈ ಕಡಲಾಮೆ. ಸ್ವಾಮೀಜಿಯ ಗಿಂಡಿಮಾಣಿಗೂ ಕಡಲಾಮೆ ಅನುಭವಿಸುತ್ತಿದ್ದ ಈ ಹಿಂಸೆಯನ್ನು ನೋಡಲಾಗಲಿಲ್ಲ, ಆತ ಕೊನೆಗೆ ನೊಂದುಕೊಂಡು, ಅಷ್ಟೇ ಹೆದರಿಕೊಂಡು ಕಡಲಾಮೆಯನ್ನು ಮಧ್ವ ಸರೋವರಕ್ಕೆ ಬಿಡುವಂತೆ ಸಲಹೆ ನೀಡಿದ್ದ, ಅಂತಿಮವಾಗಿ ಲಕ್ಷ್ಮೀವರ ಸ್ವಾಮೀ ಕಡಲಾಮೆಯನ್ನು ಕೃಷ್ಣ ದೇಗುಲದ ಹಿಂಭಾಗದಲ್ಲಿರುವ ಸರೋವರಕ್ಕೆ ಬಿಟ್ಟುಬಿಟ್ಟಿದ್ದಾನೆ.



ಉಪ್ಪು ನೀರಿನಲ್ಲಿದ್ದು ಅಭ್ಯಾಸವಾಗಿದ್ದ ಕಡಲಾಮೆ ಸರೋವರದಲ್ಲಿ ಪಾಪ ಹೇಗಿರಲು ಸಾಧ್ಯ? ಆದರೂ, ಇದನ್ಯಾರೂ ಅರ್ಥಮಾಡಿಕೊಳ್ಳಲಿಲ್ಲ, ಮಠದೊಳಗಿನ ತೊಟ್ಟಿಯಲ್ಲಿದ್ದ ಕಡಲಾಮೆಯನ್ನು ಶಿರೂರು ಮಠದ ವಿಚಿತ್ರ ವ್ಯಕ್ತಿತ್ವದ ಶ್ರೀಶ್ರೀಶ್ರೀ ಲಕ್ಷ್ಮೀವರ ತೀರ್ಥ ಶ್ರೀಪಾದಂಗಳವರು ಮಧ್ವ ಸರೋವರದಲ್ಲಿ ಬಿಟ್ಟಿದ್ದು ಪತ್ರಿಕೆಗಳಿಗೆ ಒಂದು ಮಹಾ ವರದಿಯಾಯಿತು. ಈ ವರದಿ ಓದಿದ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಇರಿಸುಮುರಿಸಾಯಿತು. ಕಡಲಾಮೆ ಸಾಕಿದ್ದು ಸ್ವಾಮೀಜಿಗಳು... ಕೇಸು ದಾಖಲಿಸುವುದಾದರೂ ಹೇಗೆ? ಸ್ವಾಮೀಜಿಗಳು ಪ್ರಸ್ನಾತೀತರೂ, ತಮ್ಮ ಮಾರ್ಗದರ್ಶಕರೂ ಆಗಿದ್ದರು ತಾನೇ? ಕೊನೆಗೆ ಮನಸ್ಸಿಲ್ಲದ ಮನಸ್ಸಿನಿಂದ, ನಿರ್ವಾಹವೇ ಇಲ್ಲದೆ ರಥಬೀದಿಗೆ ಕಾಲಿಟ್ಟ ಅರಣ್ಯ ಇಲಾಖೆಯ ಮಹಾನ್ ಅಧಿಕಾರಿಗಳು, ಕ್ರಿಮಿನಲ್ ಸ್ವಾಮಿಗೆ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಿ, ಸ್ವಾಮೀಜಿಯ ಮಾರ್ಗದರ್ಶನದಲ್ಲಿ ಕಡಲಾಮೆಯನ್ನು ಸರೋವರದಿಂದ ಮೇಲಕ್ಕೆತ್ತಿ ಭಾರೀ ಸಾಧನೆ ಪ್ರದರ್ಶಿಸಿದ್ದರು.

ಹೀಗೆ ಮೇಲಕ್ಕೆತ್ತಿದ್ದ ಕಡಲಾಮೆಯನ್ನು ಶಿರೂರು ಸ್ವಾಮಿಯ ಕೈಗೆ ಕೊಟ್ಟು ಅವರ 'ಅಮೃತಹಸ್ತ'ದಿಂದಲೇ ಮಲ್ಪೆ ಬೀಚ್‌ನಲ್ಲಿ ಕಡಲಿಗೆ ಬಿಟ್ಟು ಕೃತಾರ್ಥರಾದರು ಅರಣ್ಯಾಧಿಕಾರಿಗಳು! ಈ ದೃಶ್ಯ ಪತ್ರಿಕೆಗಳಲ್ಲೂ ಪ್ರಕಟವಾಯಿತು.

ಬಳಿಕ ಜಿಂಕೆ.......

2009 ರ ಜುಲೈ ತಿಂಗಳಲ್ಲಿ ಬ್ರಹ್ಮಾವರ ಸಮೀಪದ ಬಾಳೆಕುದ್ರು ಮಠಕ್ಕೆ ಯಾರೋ ಭಕ್ತರು ಜಿಂಕೆಯೊಂದನ್ನು ತಂದೊಪ್ಪಿಸಿದ್ದರು. ಬಾಳೆಕುದ್ರು ಮಠದ ಸ್ವಾಮೀಜಿ ಇದನ್ನು ಸಾಕತೊಡಗಿದ್ದರು. ಮಠಕ್ಕೆ ಬಂದ ಭಕ್ತರು ಕುತೂಹಲದಿಂದ ಜಿಂಕೆಯ ಪಕ್ಕ ನಿಂತು ಮೈದಡವುವ ಕೆಲಸ ಮಾಡುತ್ತಿದ್ದಂತೆಯೇ ಜಿಂಕೆ ಕಾಲಿನಿಂದ ತುಳಿದು ಗಾಯಗೊಳಿಸುತ್ತಿತ್ತು.

ಮಠಕ್ಕೆ ಬಂದ ಭಕ್ತರು ಗಾಯಗೊಂಡು ಬೇಸರದಲ್ಲಿ ಮರಳುವುದನ್ನು ನೋಡಿದ ಬಾಳೆಕುದ್ರು ಸ್ವಾಮಿ ಕೊನೆಗೆ ಈ ಜಿಂಕೆಯನ್ನು ಹವ್ಯಾಸೀ ಕಾನೂನು ಭಂಜಕನಾದ ಶಿರೂರು ಸ್ವಾಮೀಜಿಗೆ ಹಸ್ತಾಂತರಿಸಿಬಿಟ್ಟಿದ್ದರು.

ಕಂದುಬಣ್ಣದ, ಬಿಳಿ ಚುಕ್ಕೆಗಳಿರುವ, ಕೋಡುಗಳಿರುವ ಗಂಡು ಜಿಂಕೆಯನ್ನು 2009 ರ ಜುಲೈ ತಿಂಗಳಿಂದ ಶಿರೂರು ಸ್ವಾಮಿ ಮಠದೊಳಗೆ ಸಾಕತೊಡಗಿದ.

ಜಿಂಕೆಯ ಸಹಜ ಸ್ವಭಾವವಾದ ಹಾಯುವುದನ್ನು ನಿಯಂತ್ರಿಸಲು ಅದರ ಕಾಲುಗಳಿಗೆ, ಕುತ್ತಿಗೆಗೆ ಎರಡೆರಡು ಹಗ್ಗದಿಂದ ಕಟ್ಟಿ ಹಾಕಿದ ಸ್ವಾಮಿ ಜಿಂಕೆಯನ್ನು ಮೂರು ತಿಂಗಳ ಕಾಲ ಹಿಂಸಿಸುತ್ತಾ ಪಳಗಿಸಲು ಹರಸಾಹಸಪಟ್ಟರು. ವಿಷಯ 2009 ರ ಅಕ್ಟೋಬರ್ 6 ರಂದು ಪತ್ರಿಕೆಗಳ ಮೂಲಕ ಬಹಿರಂಗಕ್ಕೆ ಬಂದಿತು. ಕುಂದಾಪುರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಓ. ಪಾಲಯ್ಯರಿಗೆ ದೂರು ಕೂಡಾ ಹೋಯ್ತು.

ಶಿರೂರು ಮಠಾಧೀಶರ ವಿರುದ್ಧ ಬಂದ ದೂರಿನ ಆಧಾರದಲ್ಲಿ ಕ್ರಮ ಕೈಗೊಳ್ಳುವಂತೆ ದೂರು ಬಂದ ದಿನವೇ ಡಿಸಿಎಫ್ ಪಾಲಯ್ಯರು ಉಡುಪಿ ವಲಯ ಅರಣ್ಯಾಧಿಕಾರಿ ಸಂಜೀವ ಗಾಣಿಗನಿಗೆ ಆದೇಶಿಸಿದರು.

ಗಿಂಬಳ ಪ್ರಿಯ

ಸಂಜೀವ ಗಾಣಿಗನಿಗೆ ಹಾಲು ಕುಡಿದಷ್ಟೇ ಸಂತೋಷ. ಸಂಬಳಕ್ಕಿಂತ ಹೆಚ್ಚು ಗಿಂಬಳವನ್ನೇ ಬಯಸುವ, ಗಿಂಬಳದಿಂದಲೇ ಬದುಕುವ ಸಂಜೀವ ಶಿರೂರು ಮಠದೊಳಗೆ ನುಗ್ಗಿ, ಉದ್ದಂಡ ಅಡ್ಡ ಬಿದ್ದು ಶಿರೂರು ಸ್ವಾಮಿ ಕೊಟ್ಟಿದ್ದನ್ನು ಸ್ವೀಕರಿಸಿ ಮರಳಿದ್ದಾನೆ. ಬಳಿಕ ದಾಖಲೆಗಾಗಿ ಒಂದು ಹಾಸ್ಯಾಸ್ಪದ ಸ್ಥಳ ಮಹಜರು ಸಿದ್ಧಪಡಿಸಿ, ಅದನ್ನೇ ಡಿಸಿಎಫ್‌ಗೆ ಕಳುಹಿಸಿ ನಿಟ್ಟುಸಿರುಬಿಟ್ಟಿದ್ದಾನೆ. ಜಿಂಕೆ ಶಿರೂರು ಮಠದೊಳಗೆ ಕಟ್ಟಿ ಹಾಕಿಕೊಂಡು ಇದ್ದುದಕ್ಕೆ ಪತ್ರಿಕೆಗಳಲ್ಲಿ ಪ್ರಕಟವಾದ ಫೋಟೋಗಳೇ ಸಾಕ್ಷಿ. ಮಠದಲ್ಲಿ ಕಟ್ಟಿ ಹಾಕಲ್ಪಟ್ಟ ಸ್ಥಿತಿಯಲ್ಲಿದ್ದ ಜಿಂಕೆಯ ಫೋಟೋ ಜಯಕಿರಣ, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ವಾರ್ತಾಭಾರತಿ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು, ಆದರೂ ಇದು ಅರಣ್ಯಾಧಿಕಾರಿ ಸಂಜೀವ ಗಾಣಿಗನ ಕಣ್ಣಿಗೆ ಬೀಳಲಿಲ್ಲ, ಈತನ ಮಹಜರು ವರದಿಯೇ ಬೇರೆ...

"ಸಿಬ್ಬಂದಿಯ ವರನ್ನು ಕೂಡಿಕೊಂಡು ಶಿರೂರು ಮಠಕ್ಕೆ ಹೋಗಿ ಸಂಚರಿಸಿ ನೋಡಿದಾಗ ಅಲ್ಲಿ ಒಂದು ಜಿಂಕೆ ಶಿರೂರು ಮಠದ ಆವರಣದಲ್ಲಿ ಓಡಾಡುತ್ತಿರುವುದು ನೋಡಿದಾಗ ಅದು ಗಂಡು ಜಿಂಕೆ ಆಗಿರುವುದು ಕಂಡುಬಂತು. ಅದು ಯಾವುದೇ ಬಂಧನದಲ್ಲಿರದೇ ಮಠದ ಆವರಣದಲ್ಲಿ ತಿರುಗಾಡುತ್ತಿರುವುದು ಕಂಡುಬಂತು. ಸದ್ರಿ ಮಠದ ಸಿಬ್ಬಂದಿಯವರಲ್ಲಿ ವಿಚಾರಿಸಿದಾಗ ಸದ್ರಿ ಜಿಂಕೆಯು ಎಲ್ಲಿಂದ ಬಂತೆಂದು ನಮಗೆ ತಿಳಿದಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ."

"ಸದ್ರಿ ಜಿಂಕೆ ಕಾಡುಪ್ರಾಣಿ ಆಗಿರುವುದರಿಂದ ಅದು, ಮಠದ ಆವರಣದಲ್ಲಿ ಅಡ್ಡಾಡುವುದು ಸರಿ ಇಲ್ಲದೇ ಇರುವುದರಿಂದ, ಅದನ್ನು ಅದರ ಸೂಕ್ತ ಪ್ರದೇಶವಾದ ಕಾಡಿಗೆ ಬಿಡುವುದೆಂದು ಸ್ಥಳದಲ್ಲಿ ಸಾಕ್ಷಿದಾರರ ಸಮಕ್ಷಮ ತೀರ್ಮಾನಿಸಲಾಯಿತು." ಓಡಾಡುತ್ತಿದ್ದ ಜಿಂಕೆಯನ್ನು ಸಂಜೀವ ಗಾಣಿಗ ನಿಧಾನವಾಗಿ ಮೆಟಡೋರಿಗೆ ಇರಿಸಿದ್ದಾನಂತೆ. ಆರಂಭದಲ್ಲಿ ಹೀಗೆ ಮಹಜರು ದಾಖಲಿಸಿಕೊಂಡ ಸಂಜೀವ ಗಾಣಿಗನೆಂಬ ಮಹಾಭ್ರಷ್ಟ ಉಡುಪಿವಲಯ ಅರಣ್ಯ ಅಧಿಕಾರಿ, ಅಂತಿಮವಾಗಿ ಮಹಜರಿನಲ್ಲಿ ಹೀಗೆ ಬರೆದಿದ್ದಾನೆ: "ಪೆರ್ಡೂರು ಘಟಕಕ್ಕೆ ಸಂಬಂಧಪಟ್ಟ ಡೋರಿ ಮೀಸಲು ಅರಣ್ಯ ಪ್ರದೇಶದ ಒಳಗಡೆ ನಮ್ಮ ಸಿಬ್ಬಂದಿಯವರ ಸಹಾಯದಿಂದ ಜಿಂಕೆಗೆ ಕಟ್ಟಿದ ಹಗ್ಗವನ್ನು ನಿಧಾನವಾಗಿ ಸಡಿಲಿಸಿದಾಗ ಜಿಂಕೆ ಮೆಟಡೋರಿನಿಂದ ಕೆಳಗಡೆ ನೆಗೆದು ಕಾಡಿಗೆ ಓಡಿಹೋಗಿ ಕಣ್ಮರೆಯಾಯಿತು." ಮೆಟಡೋರಿಗೆ ನಿಧಾನವಾಗಿ ಇರಿಸುವಾಗ ಜಿಂಕೆಗೆ ಹಗ್ಗ ಕಟ್ಟಿದ ಸಂಜೀವ ಗಾಣಿಗ; ಮೆಟಡೋರಿನಿಂದ ಬಿಡುವಾಗ ಕಟ್ಟಿದ ಹಗ್ಗವನ್ನು ಬಿಡಿಸಿದ್ದಾರಂತೆ!

ಸತ್ಯ ಸತ್ಯವೇ ತಾನೇ? ಶಿರೂರು ಸ್ವಾಮಿ ಕಟ್ಟಿದ ಹಗ್ಗವನ್ನೇ ಸಂಜೀವ ಗಾಣಿಗ ಅರಣ್ಯದಲ್ಲಿ ನಿಧಾನವಾಗಿ ಸಡಿಲಿಸಿದ್ದಾನೆ. ಹೀಗೆ ಸುಳ್ಳು ಮಹಜರು ಬರೆದು ಶಿರೂರು ಸ್ವಾಮಿಯ ವಿರುದ್ಧ ಮೊಕದ್ದಮೆ ದಾಖಲಿಸದೆ, ಲಂಚ ತಿಂದು ರಕ್ಷಿಸಿದ ಅರಣ್ಯಾಧಿಕಾರಿ ಸಂಜೀವನ ಸಾಧನೆ ಇಷ್ಟಕ್ಕೆ ನಿಲ್ಲುವುದಿಲ್ಲ....

ನವಿಲು ಪುರಾಣ

ಕಡಲಾಮೆ ಸಾಕಿದ ಧೈರ್ಯ, ಜಿಂಕೆ ಸಾಕಿಯೂ ಬಚಾವಾದ ದರ್ಪದಲ್ಲಿ ಶಿರೂರು ಸ್ವಾಮಿ ಮತ್ತೆ ರಾಷ್ಟ್ರಪಕ್ಷಿ ನವಿಲನ್ನು ಮಠದ ಗೂಡಿನೊಳಗೆ ಕೂಡಿ ಹಾಕಿ ಸಾಕತೊಡಗಿದ್ದಾನೆ.

ಸಾಕಲಾರಂಭಿಸಿದ ತಿಂಗಳ ಬಳಿಕ ಇದು ಸಾಯುವ ಸ್ಥಿತಿಗೆ ತಲುಪಿದೆ. ಅಷ್ಟರಲ್ಲಿಯೇ ಇನ್ನೊಂದೆರಡು ಗೂಡಿನಲ್ಲಿದ್ದ ಅಪರೂಪದ ಕೆಲವು ಹಕ್ಕಿಗಳು ಇಹಲೋಕ ತ್ಯಜಿಸಿದ್ದವು. ಇವುಗಳನ್ನೆಲ್ಲ ಗಮನಿಸಿದ ಶಿರೂರು ಸ್ವಾಮಿಗೆ ಆಪ್ತರಾದರೂ, ಪಕ್ಷಿಪ್ರಿಯರಾದ ವ್ಯಕ್ತಿಯೊಬ್ಬರು ನವಿಲನ್ನು ಉಳಿಸುವ



ತಪ್ಪಿದ ಜೈಲು

ಜಿಂಕೆ, ಕಡಲಾಮೆ ಮತ್ತು ನವಿಲು ಹೀಗೆ ಕನಿಷ್ಠ ಮೂರು ಪ್ರಕರಣಗಳಲ್ಲಿ ಮೂರು ಸಲವಾದರೂ ಶಿರೂರು ಸ್ವಾಮಿ ಜೈಲಿಗೆ ಹೋಗಿಬರಬೇಕಾಗಿತ್ತು.

ಅರಣ್ಯಾಧಿಕಾರಿಗಳ ಹೇಡಿತನ ಮತ್ತು ಭ್ರಷ್ಟತನದಿಂದಾಗಿ ಶಿರೂರು ಸ್ವಾಮಿ ಜೈಲು ಪಾಲಾಗುವುದು ಮೂರು ಸಲವೂ ತಪ್ಪಿಹೋಯಿತು.

ರಾಷ್ಟ್ರಪಕ್ಷಿ ನವಿಲನ್ನು ಸಾಕುವುದು 'ವನ್ಯಜೀವಿ ಸಂರಕ್ಷಣಾ ಕಾಯ್ದೆ' ಪ್ರಕಾರ ಶಿಕ್ಷಾರ್ಹ ಅಪರಾಧ. ಶಿರೂರು ಸ್ವಾಮಿ ನವಿಲು ಸಾಕುತ್ತಿರುವ ಬಗ್ಗೆ ದೂರು ನೀಡಿದ್ದು ಜನವರಿ 7 ರಂದು. ಅರಣ್ಯಾಧಿಕಾರಿಗಳು ಕಾನೂನನ್ನು ನಿಷ್ಪಕ್ಷಪಾತವಾಗಿ ಜಾರಿಗೊಳಿಸುತ್ತಿದ್ದರೆ, ಶಿರೂರು ಸ್ವಾಮಿ ನ್ಯಾಯಾಂಗ ಬಂಧನಕ್ಕೆ ಹೋಗಬೇಕಾಗುತ್ತಿತ್ತು, ಜೈಲಿನಲ್ಲಿಯೇ ಪರ್ಯಾಯ ಪೀಠವೇರುವ ಪರ್ಯಾಯ ಮಹೋತ್ಸವವನ್ನು ಆಚರಿಸಬೇಕಾಗಿ ಬರುತ್ತಿತ್ತು!

ಶಿರೂರು ಸ್ವಾಮಿಗೂ, ಅರಣ್ಯಾಧಿಕಾರಿಗಳಾದ ಸಂಜೀವ ಗಾಣಿಗ, ನೀಲಯ್ಯ ಹಾಗೂ ಪಾಲಯ್ಯರಿಗೂ ಜೈಹೋ.....!

ಸದುದ್ದೇಶದಿಂದ ಈ ವಿಷಯವನ್ನು ವಿಷಯವನ್ನು ಬಹಿರಂಗಪಡಿಸಿದ್ದರು.

ಜನವರಿ 7 ರಂದು, ಶಿರೂರು ಮಠದಲ್ಲಿ ಗೂಡಿನೊಳಗೆ ಕೂಡಿ ಸಾಕಲಾದ ನವಿಲು ಜೀವನ್ಮರಣ ಸ್ಥಿತಿಯಲ್ಲಿರುವ ಬಗ್ಗೆ ಡಿಸಿಎಫ್‌ಗೆ ದೂರು ನೀಡಲಾಯಿತು. ದೂರು ಕೊಡುವ ಮೊದಲು ಗೂಡಿನಲ್ಲಿ ನವಿಲು ಇರುವುದನ್ನು ವಿಡಿಯೋ ಶೂಟಿಂಗ್ ಮಾಡಲಾಯಿತು. ಫೋಟೋ ತೆಗೆಯಲಾಗಿತ್ತು.

ಮಧ್ಯಾಹ್ನ 12 ಗಂಟೆಗೆ ನವಿಲು ಮಠದೊಳಗೆ, ಗೂಡಿನಲ್ಲಿರುವುದನ್ನು ನೋಡಿಕೊಂಡು ಸಾಕ್ಷ್ಯಾಧಾರಗಳನ್ನು ಸಿದ್ಧಪಡಿಸಿಕೊಂಡು ಡಿಸಿಎಫ್ ಡಿ. ಪಾಲಯ್ಯರಿಗೆ ದೂರು ನೀಡಲಾಗಿತ್ತು. ಡಿಸಿಎಫ್ ಪಾಲಯ್ಯರು ಮತ್ತೆ ಉಡುಪಿ ವಲಯ ಅರಣ್ಯಾಧಿಕಾರಿ ಸಂಜೀವ ಗಾಣಿಗನಿಗೆ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿ, ಪ್ರಕರಣ ಹಳ್ಳ ಹಿಡಿಯಲು ಕಾರಣಕರ್ತರಾದರು.

ಋಣ ತೀರಿಸಿದ ಗಾಣಿಗ

ಜಿಂಕೆ ಪ್ರಕರಣದಲ್ಲಿ ಶಿರೂರು ಸ್ವಾಮೀಜಿ ನೀಡಿದ ಅಮೇಧ್ಯ ತಿಂದಿದ್ದ ಸಂಜೀವ ಗಾಣಿಗ ನವಿಲಿನ ಪ್ರಕರಣದಲ್ಲೂ ಮತ್ತೊಮ್ಮೆ ಎಂಜಲು ತಿಂದು ಋಣ ತೀರಿಸಿಬಿಟ್ಟ. ಈ ಸಲ ಸಂಜೀವ ಗಾಣಿಗ ಬುದ್ಧಿವಂತಿಕೆ ಪ್ರದರ್ಶಿಸಿದ. ಡಿಸಿಎಫ್ ಪಾಲಯ್ಯರಿಂದ ಆದೇಶ ಬಂದ ಕೂಡಲೇ, ಸಂಜೀವ ಗಾಣಿಗ ಶಿರೂರು ಸ್ವಾಮಿಯನ್ನು ಸಂಪರ್ಕಿಸಿ ನವಿಲನ್ನು ಬೇರೆಡೆಗೆ ಸಾಗಿಸುವಂತೆ ಸೂಚಿಸಿದ್ದಾನೆ.

ಶಿರೂರು ಸ್ವಾಮಿ ಮಠದೊಳಗೆ ಗೂಡಿನಲ್ಲಿದ್ದ ನವಿಲನ್ನು ಬೇರೆಡೆಗೆ ಸ್ಥಳಾಂತರಿಸಿದ ಬಳಿಕ, ತಾನು ನೇರವಾಗಿ ಮಠಕ್ಕೆ ಹೋಗದೆ, ವನಪಾಲಕರು ಹಾಗೂ ಇಲಾಖಾ ಸಿಬ್ಬಂದಿಗಳನ್ನು ಮಠಕ್ಕೆ ಕಳುಹಿಸಿ ಕೊಟ್ಟು 'ಜಾಣ್ಮೆ' ಪ್ರದರ್ಶಿಸಿದ್ದಾನೆ ಸಂಜೀವ ಗಾಣಿಗ.

ವನಪಾಲಕರು ಮಠಕ್ಕೆ ಹೋದಾಗ ಅಲ್ಲಿ ನವಿಲು ಇರಲಿಲ್ಲವಂತೆ. 12 ಗಂಟೆಗೆ ಮಠದೊಳಗೆ ಗೂಡಲ್ಲಿದ್ದ ನವಿಲು ಸಂಜೆ 4 ಗಂಟೆಗೆ ಇರಲಿಲ್ಲ. ಈ ನಾಪತ್ತೆ ಪ್ರಕರಣಕ್ಕೆ ಸಂಜೀವ ಗಾಣಿಗನೇ ಕಾರಣವೆಂಬುದು ದೂರುದಾರರ ದೂರು.

ಈ ಸಂಬಂಧವಾಗಿ ಸಂಜೀವ ಗಾಣಿಗನ ಸೂಚನೆ ಮತ್ತು ಮಾರ್ಗದರ್ಶನದ ಪ್ರಕಾರ ವನಪಾಲಕರು ಸಿದ್ಧಪಡಿಸಿದ ಸ್ಥಳ ಮಹಜರು ವಾಸ್ತವಾಂಶಗಳನ್ನು ಜಾಹೀರುಪಡಿಸಿದೆ. "ಸದ್ರಿ ಶಿರೂರು ಮಠದಲ್ಲಿ ಲಭ್ಯವಿದ್ಧ ಸಿಬ್ಬಂದಿಯವರಲ್ಲಿ ಸದ್ರಿ ನವಿಲಿನ ಬಗ್ಗೆ ವಿಚಾರಿಸಿದಾಗ ಇಲ್ಲಿ ಯಾವುದೇ ನವಿಲನ್ನು ಸಾಕಿರುವುದಿಲ್ಲ, ಇತ್ತೀಚಿನ ದಿನಗಳಲ್ಲಿ ನವಿಲು ತುಂಬಾ ಜಾಸ್ತಿ ಆಗಿರುವುದರಿಂದ ಕೆಲವು ಬಾರಿ ನವಿಲು ಶಿರೂರು ಮಠದ ಆವರಣಕ್ಕೆ ಆಗಾಗ ಬಂದುಹೋಗುತ್ತದೆ. ಅದಕ್ಕೆ, ಜನರು ನವಿಲು ಸಾಕಿರುತ್ತಾರೆ ಎಂದು ತಪ್ಪಾಗಿ ಅರ್ಥೈಸಿಕೊಂಡಿರಬಹುದೆಂದು ಸ್ಥಳ ತನಿಖೆಯ ಸಮಯ ದೃಢವಾಯಿತು!"

ರಥಬೀದಿಯಲ್ಲೇ ಇರುವ ಉಳಿದ ಏಳು ಮಠಗಳ ಆವರಣಕ್ಕೂ ಬಾರದ ನವಿಲು ಶಿರೂರು ಮಠಕ್ಕೆ ಮಾತ್ರ ಬರಲು ಕಾರಣವೇನು ಎಂಬ ಬಗ್ಗೆಯಾಗಲೀ, ಶಿರೂರು ಸ್ವಾಮಿಯ ಆಪ್ತ ಜನರೇ ಮಠದೊಳಗೆ ಗೂಡಿನಲ್ಲಿದ್ದ ನವಿಲು ನೋಡಿ ಮಾಹಿತಿ ನೀಡಿಧವರು ತಪ್ಪಾಗಿ ಅರ್ಥೈಸಲು ಹೇಗೆ ಸಾಧ್ಯ ಎಂಬ ಕುರಿತಾಗಲೀ ಮಹಜರಿನಲ್ಲಿ ಏನೂ ಇಲ್ಲ.

ಮತ್ತದೇ ಜಿಂಕೆ, ನವಿಲು

ಅರಣ್ಯ ಅಧಿಕಾರಿ ಸಂಜೀವ ಗಾಣಿಗ ಪೆರ್ಡೂರು ಸಮೀಪದ ಡೋರಿ ಮೇಯಿಸಲು ಅರಣ್ಯದಲ್ಲಿ ಬಿಟ್ಟಿದ್ದಾನೆ ಎನ್ನಲಾಗುವ ಜಿಂಕೆ ಮತ್ತು ಉಡುಪಿ ಅರಣ್ಯ ಸಿಬ್ಬಂದಿಗಳು ಶಿರೂರು ಮಠಕ್ಕೆ ಹೋಗಿ ನೋಡಿದಾಗ ಕಾಣದ ರಾಷ್ಟ್ರಪಕ್ಷಿ ನವಿಲು ಇಂದಿಗೂ ಶಿರೂರು ಮಠದಲ್ಲೇ ಇವೆ. ಇದಕ್ಕಿಂತ ಬೇರೆ ದುರಂತ ಬೇಕಾ? ಉಡುಪಿ ಜಿಲ್ಲೆಯ ಅರಣ್ಯ ಇಲಾಖಾ ಅಧಿಕಾರಿಗಳ ಅದಕ್ಷತೆ, ಕರ್ತವ್ಯಲೋಪಗಳಿಗೆ, ಲಂಚಗುಳಿತನಕ್ಕೆ ಬೇರೆ ಉದಾಹರಣೆಗೆ ಬೇಕೇ? ಅಕ್ರಮವಾಗಿ ಜಿಂಕೆ ಸಾಕಿದ್ದರೂ ಅರಣ್ಯಾಧಿಕಾರಿ ಕ್ರಮ ಕೈಗೊಳ್ಳದ ಬಗ್ಗೆ ಡಿಸಿಎಫ್ ಪಾಲಯ್ಯರಿಗೆ ದೂರು ನೀಡಲಾಗಿತ್ತು (8.12.2009). ಈ ದೂರಿನ ಆಧಾರದಲ್ಲಿ ಡಿಸಿಎಫ್ 14.12.09 ರಂದು ತನಿಖೆಗೆ ಆದೇಶಿಸಿದ್ದರು. ಆದರೆ ತನಿಖೆ ನಡೆಸಬೇಕಾದ ಉಡುಪಿ ಸಂಚಾರಿ ದಳದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನೀಲಯ್ಯ ನಿಷ್ಪಕ್ಷಪಾತವಾಗಿ ತನಿಖೆ ನಡೆಸುವ ಬದಲು ಸಂಜೀವ ಗಾಣಿಗನನ್ನು ರಕ್ಷಿಸಲು ಹರಸಾಹಸ ಮಾಡುತ್ತಿದ್ದಾರೆ. ತನಿಖೆಗೆ ಆದೇಶಿಸಿ ಒಂದೂವರೆ ತಿಂಗಳಾದರೂ ಇನ್ನೂ ತನಿಖೆ ಆರಂಭವಾಗಿಲ್ಲ. ಇದು ಉಡುಪಿ ಅರಣ್ಯಾಧಿಕಾರಿಗಳ ದಕ್ಷತೆ!

ಇದು ಜಿಂಕೆ ಪ್ರಕರಣದ ತನಿಖೆಯ ಗತಿ. ಇನ್ನು ನವಿಲಿನ ಪ್ರಕರಣದ ತನಿಖೆಯ ಗತಿ ಏನಾಗಲಿದೆ ಎಂದು ಯಾರು ಬೇಕಾದರೂ ಊಹಿಸಬಹುದು.

ನವಿಲು ಶಿರೂರು ಮಠದಲ್ಲಿ ಗೂಡಿನಲ್ಲಿತ್ತು ಎನ್ನುವುದು ಖುದ್ದು ಡಿಸಿಎಫ್ ಪಾಲಯ್ಯರಿಗೇ ಗೊತ್ತಿದೆ.

ನವಿಲಿನ ಬಗ್ಗೆ ಅವರೇ ಸ್ವತಃ ಶಿರೂರು ಸ್ವಾಮಿಯಲ್ಲಿ ಮೊಬೈಲ್‌ನಲ್ಲಿ ಮಾತನಾಡಿದ್ದಾರೆ. ಈ ಮಾತುಕತೆಯ ಸಂದರ್ಭದಲ್ಲಿ ಶಿರೂರು ಸ್ವಾಮಿಗಳೂ ನವಿಲನ್ನು ತಾನೇ ಸ್ವತಃ ಕಾಡಿಗೆ ಬಿಡುವುದಾಗಿ ಮೌಖಿಕವಾಗಿ ಪಾಲಯ್ಯರಲ್ಲಿ ಒಪ್ಪಿಕೊಂಡರಂತೆ. ಇದನ್ನು ನಂಬಿದ ಡಿಸಿಎಫ್ ಪಾಲಯ್ಯ ಹೀಗೆಂದು ನೇರವಾಗಿಯೇ ಪತ್ರಕರ್ತರಲ್ಲಿ ಹೇಳಿಕೊಂಡಿದ್ದಾರೆ. ಪತ್ರಿಕೆಗಳಲ್ಲಿ ವರದಿಯೂ ಆಗಿದೆ. ಉಡುಪಿ ವಲಯ ಅರಣ್ಯ ಇಲಾಖೆಯ ಜನರು ಮಠಕ್ಕೆ ಹೋದಾಗ ನವಿಲು ಇರಲಿಲ್ಲ ಎನ್ನುವುದು ಇಲಾಖೆ ಸಿದ್ಧಪಡಿಸಿದ ಸ್ಥಳ ಮಹಜರು ವರದಿ. ಡಿಸಿಎಫ್ ಪಾಲಯ್ಯರ ಪ್ರಕಾರ ಶಿರೂರು ಸ್ವಾಮಿಯೇ ಸ್ವತಃ ನವಿಲನ್ನು ಮಣಿಪಾಲದ ಬಳಿಯ ಕಾಡಿಗೆ ಬಿಟ್ಟಿದ್ದಾರೆ.

ಮಣಿಪಾಲ ಬಳಿಯ ಕಾಡು ಕುಂದೇಲ್ ಕಾಡು. ಈ ಕಾಡು ಶಿರೂರು ಮಠದ್ದೇ ಎನ್ನುವುದು ಬಹಿರಂಗ ಸತ್ಯ. ಇದನ್ನೆಲ್ಲ ನೋಡಿದ ಉಡುಪಿ ಜನ ಅರಣ್ಯ ಇಲಾಖಾಧಿಕಾರಿಗಳು ನಡೆಸುತ್ತಿರುವ ಹಗಲು ಪ್ರಹಸನಕ್ಕೆ ಶಹಬ್ಬಾಸ್ ಎನ್ನದೇ ಇರಲು ಸಾಧ್ಯವೇ?

ಶಿರೂರು ಮಠದೊಳಗೆ, ಗೂಡಿನಲ್ಲಿದ್ದ ಪ್ರಾಣಿ-ಪಕ್ಷಿಗಳು ಸತ್ತದ್ದು ಒಂದೆರಡಲ್ಲ, ಕಳೆದ ಒಂದು ವರ್ಷದ ಅವಧಿಯಲ್ಲೇ ಎರಡು ಕಾಡುಬೆಕ್ಕು, ಒಂದು ಡಜನ್ ಅಪರೂಪದ ಪಕ್ಷಿಗಳು ಮಠದಲ್ಲೇ ಗೂಡೊಳಗೆ ಪ್ರಾಣಬಿಟ್ಟಿವೆ.

ಇನ್ನೆಷ್ಟು ಪ್ರಾಣಿ-ಪಕ್ಷಿ ಸಾಯಲಿಕ್ಕಿವೆಯೋ? ಅರಣ್ಯ ಇಲಾಖೆಯ ಅಧಿಕಾರಿಗಳಿಗೇ ಗೊತ್ತು!

ಜನ ವಿರೋಧಿ ಸ್ವಾಮಿ

ಪ್ರಾಣಿ, ಪಕ್ಷಿ ಹಿಂಸಕನಾದ ಶಿರೂರು ಮಠದ ಲಕ್ಷ್ಮೀವರ ಸ್ವಾಮಿ ಜನ ವಿರೋಧಿಯೂ ಆಗಿದ್ದಾನೆ ಎನ್ನುವುದು ಈಗಾಗಲೇ ಸಾಬೀತಾಗಿದೆ.

ಕೃಷ್ಣ ವಿಗ್ರಹದ ಪೂಜಾ ಹಕ್ಕನ್ನು ಮುಂದಿನ ಎರಡು ವರ್ಷದ ಮಟ್ಟಿಗೆ ಪಡೆದುಕೊಂಡು ಪರ್ಯಾಯ ಮಠಾಧೀಶ ಎನ್ನಿಸಿಕೊಂಡಿರುವ ಶಿರೂರು ಸ್ವಾಮಿ ಪರ್ಯಾಯ ಪೀಠವೇರಿದ ಬಳಿಕ ಮೊತ್ತಮೊದಲು ಮಾಡಿದ ಕೆಲಸವೆಂದರೆ, ಜಿಲ್ಲಾಡಳಿತದ ಮೂಲಕ ಉಡುಪಿಯ ಜೀವನಾಡಿಯಾದ ರಥಬೀದಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆಲ್ಲಾ ಗೇಟ್ ಅಳವಡಿಸಿದ್ದು.

ಈಗ ರಥಬೀದಿ ವಾಹನ ಮುಕ್ತವಾಗಿದೆ. ಇದರಿಂದಾಗಿ ಇಲ್ಲಿನ ವ್ಯಾಪಾರಿಗಳಿಗೆ, ಬಾಡಿಗೆ ವಾಹನಗಳ ಚಾಲಕರಿಗೆ, ಈ ಪರಿಸರದ ಕಾಯಂ ನಿವಾಸಿಗಳಿಗೆ, ಇವರೆಲ್ಲರ ಕುಟುಂಬಕ್ಕೆ ಸಮಸ್ಯೆಯಾಗಿದೆ. ಮುಂದೆ ವಾಣಿಜ್ಯ ಮುಕ್ತವೂ ಆಗಬೇಕಂತೆ. ಅಂತಿಮವಾಗಿ ಜನಮುಕ್ತವಲಯವಾದರೂ ಆಶ್ಚರ್ಯವಿಲ್ಲ. ಡಿಸಿ, ಎಸ್‌ಪಿ ಇಬ್ಬರೂ ನಿಷ್ಕ್ರಿಯರಾದ ಕಾರಣ, ಇಲ್ಲಿಗೆ ಕ್ರಿಮಿನಲ್ ಸ್ವಾಮಿಯೇ ಎಲ್ಲವೂ! ಇದು ಅಪಾಯಕಾರಿಯಷ್ಟೇ ಅಲ್ಲ ಭಯಾನಕವೂ ಆಗಲಿದೆ. ●



ಮೌಸ್ ಪ್ಯಾಡ್ ಆದ ವಿ.ಕ. ಭಟ್ಟ!

ನಂ.1 ಚಡ್ಡಿ ಪತ್ರಿಕೆ 'ವಿಜಯ ಕರ್ನಾಟಕ'ದ ಸಂಪಾದಕ ವಿಶ್ವೇಶ್ವರ ಭಟ್ಟ ಈಗ ಕಂಪ್ಯೂಟರ್‌ನ 'ಮೌಸ್ ಪ್ಯಾಡ್' ಆಗಿದ್ದಾರೆ!

ಇದು ಹೇಗೆ ಸಾಧ್ಯ ಎಂದು ತಲೆಕೆರೆದುಕೊಳ್ಳಬೇಡಿ. ಇದನ್ನು 'ಪ್ರಗತಿಪರ' ಪತ್ರಕರ್ತರೊಬ್ಬರು ಸಾಧ್ಯವಾಗಿಸಿದ್ದಾರೆ!

ಜೀವಂತವಾಗಿರುವ ಭಟ್ಟರ ಫೋಟೋ ತೆಗೆದು, ಅದನ್ನು ಮೌಸ್ ಪ್ಯಾಡ್ ಮೇಲೆ ಅಚ್ಚಾಕಿಸಿ, ಅದನ್ನೀಗ ನಾಲ್ಕು ಕಾಸಿಗೆ ಮಾರುತ್ತಿರುವ ಮಹಾತ್ಮ ಕೂಡ ಪತ್ರಕರ್ತರೇ. ಆದರೆ ಆಗಲೇ ಹೇಳಿದಂತೆ ಭಟ್ಟರದ್ದು ಚಡ್ಡಿ ಪತ್ರಿಕೋದ್ಯಮವಾದರೆ ಇವರು ಒಂದಾನೊಂದು ಕಾಲದಲ್ಲಿ 'ಪ್ರಗತಿಪರ' ಬ್ರಾಂಡ್‌ಗೆ ಸೇರಿದ್ದವರು! 'ಮೀಡಿಯ ಮಿರ್ಚಿ' ಎಂಬ ತಮ್ಮ ಅಂಕಣದ ಮೂಲಕ ಮಾಧ್ಯಮ ಲೋಕಕ್ಕೆ - ಅಲ್ಲಲ್ಲಾ ವಿಜಯ ಕರ್ನಾಟಕವನ್ನು ಬಿಟ್ಟು ಮತ್ತೆಲ್ಲಾ ಪತ್ರಿಕೆಗಳಿಗೆ - ಬುದ್ಧಿಮಾತು ಹೇಳುವ ಜಿ.ಎನ್. ಮೋಹನ್ ಎಂಬ 'ಕಾಮ್ರೆಡ್' ಈ ಕೆಲಸ ಮಾಡಿದ್ದಾರೆ. ತಮ್ಮ 'ಮೇ ಫ್ಲವರ್ ಮೀಡಿಯಾ ಹೌಸ್' ಮೂಲಕ ವಿಕ ಭಟ್ಟನ ಈ 'ಪ್ಯಾಡ್'ನ್ನು ರೂಪಿಸಿ ಮಾರಾಟ ಮಾಡುತ್ತಿದ್ದಾರೆ. ಪಾಪ, ವಿಶ್ವೇಶ್ವರ ಭಟ್ಟರನ್ನು ಬಿಟ್ಟರೆ ಬೇರೆ ಗಣ್ಯರು, ಜನಪ್ರಿಯ ವ್ಯಕ್ತಿಗಳು ಈಗ ಅರೆ ಚಡ್ಡಿ ತೊಟ್ಟಿರುವ ಈ 'ಮಾಜಿ ಕಮ್ಯುನಿಸ್ಟ್' ವ್ಯಕ್ತಿಗೆ ಸಿಕ್ಕಲಿಲ್ಲವಂತೆ!

ಈಗಾಗಲೇ ಚಡ್ಡಿ ಸರ್ಕಾರದ ಬ್ರೋಷರು, ಬುಕ್‌ಲೆಟ್ ಮಾಡಿಕೊಂಡು ಹೊಸ 'ನೆಲೆ' ಕಂಡುಕೊಂಡಿರುವ ಕಾಮ್ರೆಡ್ ಮೋಹನ್ ನಾಲ್ಕೈದು ರೂಪಾಯಿಗಳಿಗೆ ವಿಕ ಭಟ್ಟನ ಲೆವೆಲ್‌ಗೆ ಇಳಿದಿರುವುದು ದೊಡ್ಡ ದುರಂತ. ಇತ್ತೀಚಿನವರೆಗೂ ತಾವು ನಂಬಿದ್ದ ಸಿದ್ಧಾಂತಕ್ಕೆ ದ್ರೋಹ ಬಗೆದಿದ್ದರೂ ಪರವಾಗಿಲ್ಲ, ಸದ್ಯ ರಾಜಕಾರಣಿಗಳ ರೀತಿಯಲ್ಲಿ ನೈತಿಕ ಭ್ರಷ್ಟರಾಗಿ ಬದುಕು ಸಾಗಿಸುತ್ತಿದ್ದರೂ ಪರವಾಗಿಲ್ಲ, 'ಹಳೇ ಪೇಪರ್, ಹಳೇ ಕಬ್ಬಿಣ ತರ ಹೋಯಿ' ಎಂದು ಸುಮ್ಮನಾಗಬಹುದಿತ್ತು. ಆದರೆ ಮೋಹನ್ ಯಾರೂ ಕ್ಷಮಿಸಲಾಗದಂತಹ ಇನ್ನೊಂದು ಪಾಪದ ಕೃತ್ಯವನ್ನು ಎಸಗಿದ್ದಾರೆ.

ಅವರು ಭಟ್ಟನ ಈ 'ಪ್ಯಾಡ್'ನ್ನು ಬಿಡುಗಡೆ ಮಾಡಿಸಿದ್ದು ಯಾರ ಕೈಯಲ್ಲಿ ಗೊತ್ತೇ? ಖ್ಯಾತ ಪತ್ರಕರ್ತ, ಜನಪರ ಕಾಳಜಿಗಳ, ಎಡಪಂಥೀಯ ಚಿಂತಕ ಪಿ. ಸಾಯಿನಾಥ್ ಅವರಿಂದ! ಎಲ್ಲಿಯ ಭಟ್ಟ, ಎಲ್ಲಿಯ ಸಾಯಿನಾಥ್, ಎಲ್ಲಿ ಈ ಮೋಹನ್ ಎಂಬ ಸಿಪಿಎಂ ಪಕ್ಷದ ನಾಯಕ ಜಿ.ಎನ್.ನಾಗರಾಜ ಅವರ ಸಹೋದರ!

ಭಾರತೀಯ ಕ್ಲಿನಿಕಲ್ ಸೈಕಾಲಜಿಸ್ಟ್ ಸಂಸ್ಥೆಯು ಏರ್ಪಡಿಸಿದ್ದ ವಾರ್ಷಿಕ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಲೆಂದು ಬೆಂಗಳೂರಿಗೆ ಬಂದಿದ್ದ ಪಿ.ಸಾಯಿನಾಥ್‌ರನ್ನು ಈ 'ಕಾಮ್ರೆಡ್' ಅದ್ಯಾವ ರೀತಿಯಲ್ಲಿ ತಲೆ ತಿಂದರೋ ಗೊತ್ತಿಲ್ಲ. ಪತ್ರಕರ್ತರು ಮತ್ತು ಮಾಧ್ಯಮ ಪ್ರಾಧ್ಯಾಪಕರೊಂದಿಗೆ ಸಮಕಾಲೀನ ವಿಷಯಗಳ ಕುರಿತು ಚರ್ಚೆ ಇದೆ ಬನ್ನಿ ಎಂದು ತಮ್ಮ ಮೇ ಫ್ಲವರ್ ಮೀಡಿಯಾ ಹೌಸ್‌ಗೆ ಸಾಯಿನಾಥರನ್ನ ಕರೆಸಿಕೊಂಡು, ಅಲ್ಲಿ ಮೋಹನ್ ಅವರಿಂದ ಮಾಡಿಸಿದ್ದು ಈ ಮೌಸ್ ಪ್ಯಾಡ್ ಬಿಡುಗಡೆಯನ್ನು. ಬೆರಳೆಣಿಕೆಯಷ್ಟು 'ಪತ್ರಕರ್ತರ'ರ ಸಮ್ಮುಖದಲ್ಲಿ ಈ ಕಾರ್ಯಕ್ರಮ ನಡೆದಿದೆ. ಗ್ರಾಮೀಣ ಜನರ ಬದುಕು ಹಸನಾಗಬೇಕೆಂದು ಹಗಲಿರುಳು ಶ್ರಮಿಸುತ್ತಿರುವ ಸಾಯಿನಾಥ್‌ಗೆ ವಿಶ್ವೇಶ್ವರ ಭಟ್ಟರ ಬಗ್ಗೆ ಹೆಚ್ಚು ಗೊತ್ತಿರಲಿಕ್ಕಿಲ್ಲ. ಗೊತ್ತಿದ್ದರೆ ಖಂಡಿತವಾಗಿಯೂ ಈ ಕೋಮುವಾದಿ ಪತ್ರಕರ್ತನೊಂದಿಗೆ ಮುಖಾ-ಮುಖಿಯಾಗಲು ಅವಕಾಶ ಕೂಡಾ ನೀಡುತ್ತಿರಲಿಲ್ಲ. ಆದರೆ ವಿ.ಕ.ಭಟ್ಟರ ಆಳ-ಅಗಲ ಎಲ್ಲ ಗೊತ್ತಿರುವ, ಪ್ರಗತಿಪರ ಮುಖವಾಡ ತೊಟ್ಟ ಮೋಹನ್ ಸಾಯಿನಾಥರ ದಿಕ್ಕು ತಪ್ಪಿಸಿದ್ದಾರೆ. ಅವರಿಂದ ಈ ಹೇಸಿಗೆ ಕೆಲಸ ಮಾಡಿಸಿದ್ದಾರೆ. ಛೀ ಮೋಹನ್! ನಿಮಗೇಕೆ ಈ ಗತಿ ಬಂತು?!

● ನೀರದ ಬೆಂಗಳೂರು

ಭಟ್ಟಗೆ ಡಾಕ್ಟರೇಟ್!

ವಿಜಯ ಕರ್ನಾಟಕ ಪತ್ರಿಕೆಯ ಮೂಲಕ ರಾಷ್ಟ್ರ ದ್ರೋಹಿ ಹಿಂದೂತ್ವವಾದಿ ಅಜೆಂಡಾಗಳನ್ನು ರಾಜ್ಯದಾದ್ಯಂತ ತಲುಪಿಸುತ್ತಿರುವ ಸಂಪಾದಕ ವಿಶ್ವೇಶ್ವರ ಭಟ್ಟಗೆ ಗೌರವ ಡಾಕ್ಟರೇಟ್ ನೀಡಲು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯ ನಿರ್ಧರಿಸಿದೆ. ಈ ಮೂಲಕ ವಿ.ವಿ. ತನ್ನ ಘನತೆಗೆ ತಾನೇ ಮಸಿ ಬಳಿದುಕೊಳ್ಳಲು ಹೊರಟಿದೆ. ಭಟ್ಟನ ತಲೆಯಲ್ಲಿ ಕೋಮು ದ್ವೇಷ ಬಿಟ್ಟು ಬೇರೊಂದು ಯೋಚನೆ ಇಲ್ಲ. ಚೆನ್ನಾಗಿ ಬರೆಯುವ ತಾಕತ್ತೂ ಇಲ್ಲ. ಜನಪರವಾಗಿ ಚಿಂತಿಸುವ ಶಕ್ತಿಯಂತೂ ಇಲ್ಲವೇ ಇಲ್ಲ. ವಿಕವನ್ನು ತನ್ನ ವಿವಿಧ ರೀತಿಯ 'ಚಡ್ಡಿ' ಅಜೆಂಡಾಗಳಿಗೆ ಬಳಸುತ್ತಿರುವ ಈ ಭಟ್ಟ ಅದು ಹೇಗೆ ಅಪ್ರತಿಮ ಪತ್ರಕರ್ತನಾಗಿ ಕರ್ನಾಟಕ ವಿವಿಯವರಿಗೆ ಕಂಡು ಬಂದನೋ ಯಾರಿಗೂ ಗೊತ್ತಿಲ್ಲ.

'ಸಮಾಜ ಒಡೆಯುವ ಸಿದ್ಧಾಂತವನ್ನೇ ಪ್ರತಿಪಾದಿಸುವುದು ಈ ಡಾಕ್ಟರೇಟ್ ಪಡೆಯಲು ಮಾನದಂಡವೇ?' ಎಂಬ ಪ್ರಶ್ನೆಗೆ ವಿವಿಯ ಆಡಳಿತ ಮಂಡಳಿಯೇ ಉತ್ತರಿಸಬೇಕು. ●

ಬಳ್ಳಾರಿ ಡೆಡ್ಲಿ ಸೋಮನ ಇತರೆ ಕಟ್ಟಡಗಳೆಷ್ಟು ಸೇಫು?









ಇಪ್ಪತ್ತೆಂಟು ಬಡವರನ್ನು ಬಲಿ ತೆಗೆದುಕೊಂಡಿರುವ ಸೋಮಶೇಖರನ ಕಟ್ಟಡದ ಅವಶೇಷಗಳಿಂದ ಹೆಣಗಳಿನ್ನೂ ಹೊರಬರುತ್ತಲೇ ಇವೆ. ಅದರ ನಡುವೆಯೇ ಕಟ್ಟಡ ಕುಸಿದು ಬಿದ್ದ ಒಂಬತ್ತು ದಿನಗಳ ನಂತರ ಕಾರ್ಮಿಕನೊಬ್ಬ ಬದುಕಿ ಮೇಲೆದ್ದು ಬಂದಿದ್ದಾನೆ. ಈ ಮಧ್ಯೆ ರೆಡ್ಡಿ ಸೋದರರ ಕೃಷ್ಣದೇವರಾಯನ ಪಟ್ಟಾಭಿಷೇಕವೆಂಬ ಭರ್ಜರಿ ಉತ್ಸವದ ಗದ್ದಲದಲ್ಲಿ ಮೃತರ ಕುಟುಂಬಗಳ ಸಂಕಟ ಗೋಳುಗಳೆಲ್ಲಾ ಅರಣ್ಯರೋದನವಾಗಿ ಹೋಗಿದೆ.

ನೆಪಮಾತ್ರಕ್ಕೆ ಕಟ್ಟಡದ ಮಾಲೀಕ ಸೋಮಶೇಖರನನ್ನು ಅರೆಸ್ಟು ಮಾಡಿ ದೇವರಾಜ್ ಹಾಗೂ ಫಿರೋಜ್ ಎಂಬ ನಗರಪಾಲಿಕೆ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿರುವ ಸರ್ಕಾರ ಮತ್ತೆ ಭಿನ್ನಮತದ ಜಗಳದಲ್ಲಿ ಮುಳುಗಿಹೋಗಿದೆ. ಇಂತಹ ಅರಾಜಕ ವಾತಾವರಣದಲ್ಲಿ ಕೇಳಬೇಕಾದ ಪ್ರಶ್ನೆಯನ್ನು ಯಾರೂ ಕೇಳುತ್ತಿಲ್ಲ. ಅಂತಹ ಪ್ರಶ್ನೆಗಳಿಗೆ ಉತ್ತರ ಹೇಳಬೇಕಾದವರು ಯಾರೆಂಬುದೂ ಜನರಿಗೆ ಗೊತ್ತಾಗುತ್ತಿಲ್ಲ.



ಮಹಮ್ಮದ್



ದೇವರಾಜ್

ಇದು ಬಳ್ಳಾರಿ ನಗರದ ಇವತ್ತಿನ ವಾಸ್ತವ ಸ್ಥಿತಿಗತಿ.

1983ರ ಸೆಪ್ಟೆಂಬರ್ 12ರಂದು ಬೆಂಗಳೂರಿನ ಸುಬೇದಾರ್ ಛತ್ರಂ ರಸ್ತೆಯಲ್ಲಿ ಕುಸಿದು ಬಿದ್ದ ಗಂಗಾರಾಂ ಬಿಲ್ಡಿಂಗ್ ದುರಂತದಲ್ಲಿ ನೂರಿಪ್ಪತ್ತು ಜನ ಸತ್ತಿದ್ದರು. ಆದಾಗಿ ಹದಿನೇಳು ವರ್ಷದ ನಂತರ ಅಂತಹದ್ದೇ ಇನ್ನೊಂದು ದುರಂತ ಈಗ ಬಳ್ಳಾರಿಯಲ್ಲಿ ಆಗಿದೆ. ಆತಂಕದ ಸಂಗತಿ ಏನೆಂದರೆ ಈ ಇಂಜಿನಿಯರ್ ಸೋಮಶೇಖರ್ ಅಲಿಯಾಸ್ ಬಳ್ಳಾರಿಯ ಡೆಡ್ಲಿ ಸೋಮ ಕಟ್ಟುತ್ತಿದ್ದುದು ಇದೊಂದೇ ಕಟ್ಟಡ ಅಲ್ಲ. ಗಾಂಧಿನಗರದ 2ನೇ ಕ್ರಾಸಿನಲ್ಲಿ ಈಗ ಕುಸಿದು ಬಿದ್ದಿರುವ ಬಿಲ್ಡಿಂಗ್‌ನ ಜೊತೆ ಜೊತೆಗೆ ಇದೇ ಸೋಮಶೇಖರ್ ಬೆಳಗಲ್ ರೋಡಿನಲ್ಲಿ, ಕಂಟೋನ್‌ಮೆಂಟ್‌ನಲ್ಲಿ, ಸುಧಾ ಕ್ರಾಸ್ ಮತ್ತಿತರೆಡೆಯೂ ಅಪಾರ್ಟ್‌ಮೆಂಟ್ ಕಟ್ಟಡಗಳನ್ನು ಕಟ್ಟುತ್ತಿದ್ದ. ಅಷ್ಟು ಸಾಲದೆಂಬಂತೆ ಪಾಳೇಗಾರ ಸಚಿವ ಜನಾರ್ದನ ರೆಡ್ಡಿಗಾಗಿ ಸ್ಟಾರ್ ಹೋಟೆಲ್ ಒಂದರ ನಿರ್ಮಾಣವೂ ಇದೇ ಡೆಡ್ಲಿ ಸೋಮನ ಉಸ್ತುವಾರಿಯಲ್ಲಿ ನಡೆಯುತ್ತಿದೆ.

ಪ್ರಶ್ನೆ ಏನೆಂದರೆ ಕ್ರಿಮಿನಲ್ ಬುದ್ಧಿಯ ಇಂಜಿನಿಯರ್ ಸೋಮಶೇಖರ್ ತನ್ನ ಸ್ವಂತ ಬಿಲ್ಡಿಂಗ್ ಅನ್ನೇ ನೆಟ್ಟಗೆ ಕಟ್ಟದವನು ಇನ್ನು ಬೇರೆಯವರ ಅಪಾರ್ಟ್‌ಮೆಂಟ್ ಕಟ್ಟಡಗಳನ್ನು ಅದು ಹೇಗೆ ಕಟ್ಟಿರಬಹುದು ಎಂಬುದೇ ಆಗಿವೆ. ಬಳ್ಳಾರಿಯೊಳಗೆ ವರ್ಲ್ಡ್ ಫೇಮಸ್ ಕಂಟ್ರ್ಯಾಕ್ಟರ್ ಆಗಿದ್ದ ಸೋಮಶೇಖರನ ಕೆಲಸ ಹೇಗೆಂದರೆ ಒಂದು ಬಿಲ್ಡಿಂಗ್‌ನ ಡಿಸೈನ್‌ನಿಂದ ಹಿಡಿದು ನಿರ್ಮಾಣದ ತನಕ ತಾನೇ ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದ. ಅವನ 'ಪ್ರೀಮಿಯರ್ ಕನ್‌ಸ್ಟ್ರಕ್ಷನ್ ಕಂಪನಿ, ಬಳ್ಳಾರಿಯ ಜನರಿಗೆ ಚಿರಪರಿಚಿತ ನಿರ್ಮಾಣ ಸಂಸ್ಥೆಯಾಗಿತ್ತು. ಈಗ ಗಾಂಧಿನಗರದಲ್ಲಿ ಬಿದ್ದ ಬಿಲ್ಡಿಂಗ್‌ನ ಜೊತೆಗೇ ಸೋಮಶೇಖರನ ಪ್ರೀಮಿಯರ್ ಸಂಸ್ಥೆಯ ಮಾನಮರ್ಯಾದೆಗಳೂ ಕುಸಿದು ಬಿದ್ದಿದೆ.

ಬಿಲ್ಡಿಂಗ್ ಯಾಕೆ ಬಿತ್ತು

ಕಳಪೆ ಕಾಮಗಾರಿಯಿಂದಾಗಿ ಈ ಬಿಲ್ಡಿಂಗ್ ಬಿದ್ದಿದೆ ಎಂಬುದು ಮೇಲ್ನೋಟಕ್ಕೇ ಕಾಣುತ್ತಿರುವ ಸತ್ಯ ಹೌದು... ಆದರೆ ಬಳ್ಳಾರಿ ನಗರಪಾಲಿಕೆ ಸಿಬ್ಬಂದಿಗಳೇ ಹೇಳುತ್ತಿರುವ ಸತ್ಯಗಳು ಇನ್ನೂ ಹಲವಿದೆ. ಗಾಂಧಿನಗರ ಸೇರಿದಂತೆ ಬಳ್ಳಾರಿಯ ಅನೇಕ ಬಡಾವಣೆಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳ ವಜನ್ ತಾಳಿಕೊಳ್ಳುವಂತ ಗುಣ ಅಲ್ಲಿನ ಮಣ್ಣಿಗಿಲ್ಲ. ಬಳ್ಳಾರಿ ಸೀಮೆ ಬರದ ನಾಡೆಂದು ಹೆಸರಾಗಿದ್ದರೂ, ಅಲ್ಲಿ ಉರಿ ಬಿಸಿಲಿನ ಅಟ್ಟಹಾಸವಿದ್ದರೂ ನಗರದ ಅನೇಕ ಕಡೆ ನಾಲ್ಕಾರು ಅಡಿ ಅಗೆದರೂ ಜೌಗು ನೀರು ಚಿಮ್ಮುತ್ತದೆ. ಆರು ತಿಂಗಳ ಹಿಂದೆ ಸುರಿದ ಕುಂಭದ್ರೋಣ ಮಳೆಯು ತಂದ ಪ್ರವಾಹದ ನೀರು ಇಡೀ ಪ್ರಾಂತ್ಯವನ್ನು ನೆನೆಸಿ ಮುದ್ದೆ ಮಾಡಿತ್ತು. ಇದಲ್ಲದೆ ಬಳ್ಳಾರಿಗೆ ಸಮೀಪದಲ್ಲಿರುವ ಅಲ್ಲಿಪುರ ಡ್ಯಾಂ ಹಾಗೂ ಮೋಕಾ ಡ್ಯಾಂಗಳಲ್ಲಿ ನಿರಂತರ ನೀರಿನ ಸಂಗ್ರಹವಿದ್ದು ಇದೆಲ್ಲದರಿಂದಾಗಿಯೂ ಬಳ್ಳಾರಿ ನಗರದ ಜೌಗು ಪ್ರದೇಶಗಳಲ್ಲಿ ನೀರಿನ ಒಳಹರಿವು ಹೆಚ್ಚಾಗಿತ್ತು. ಈ ಸೋಮಶೇಖರ ಸೆಲ್ಲಾರ್, ನೆಲಮಹಡಿ ಹಾಗೂ ನಾಲ್ಕು ಅಂತಸ್ತುಗಳ ನಿರ್ಮಾಣಕ್ಕೆ ಅನುಮತಿ ಪಡೆದಿದ್ದ. ಕಟ್ಟಿರುವುದು ಅಷ್ಟೇ ಅಂತಸ್ತುಗಳನ್ನು ಮಾತ್ರ. ಆದರೆ ಇಂಥ ಬೃಹತ್ ಕಟ್ಟಡಕ್ಕೆ ಅನುಮತಿ ನೀಡುವಾಗ ನಗರಪಾಲಿಕೆಯ ಮೂರ್ಖರು ಅಲ್ಲಿನ ಮಣ್ಣಿನ ಗುಣವನ್ನಾಗಲಿ, ಜವುಗು ಪ್ರದೇಶವೆಂಬ ರಿಸ್ಕಿನ ಅಂಶಗಳನ್ನಾಗಲಿ ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ.

25 ಟನ್ ಗ್ರಾನೈಟ್ ಬಂದಿತ್ತು

ಆರಂತಸ್ತಿನ ಈ ಕಟ್ಟಡದ ಸ್ಕೆಲಿಟನ್ ಕುಸಿದು ಬಿದ್ದ ಜನವರಿ 28 ಕ್ಕೆ ಕೇವಲ ಎರಡು ದಿನ ಹಿಂದಷ್ಟೇ ಆ ಕಟ್ಟಡದೊಳಕ್ಕೆ 25 ಟನ್‌ನಷ್ಟು ಗ್ರಾನೈಟ್ ಕಲ್ಲುಗಳನ್ನು ತಂದಿಳಿಸಲಾಗಿತ್ತು. ಬಹುತೇಕ ಅದರ ಭಾರದಿಂದಲೇ ತಳಹದಿಯ ಕೆಳಗಿನ ಸಡಿಲ ಮಣ್ಣು ಇನ್ನಷ್ಟು ಸಡಿಲವಾಗಿ ಕೊನೆಗೆ ಕಟ್ಟಡ ಕುಸಿದಿದೆ. ಇದಂತೂ ಸೋಮಶೇಖರ ಮಾಡಿರುವ ಮುಠ್ಠಾಳ ಕೆಲಸ. ಬಳ್ಳಾರಿ ನಗರಪಾಲಿಕೆಯ ಉಚ್ಚ ಆಫೀಸರ್‌ಗಳ್ಯಾರೂ ಇಂತಹ ಅಪಾಯದ ಸಾಧ್ಯತೆ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಇನ್ನು ಕಮೀಷನರ್ ತಿಮ್ಮಪ್ಪನಂತೂ ಕಾಸು ಕೊಟ್ಟರೆ ತನ್ನದೇ ಡೆತ್ ಸರ್ಟಿಫಿಕೇಟ್‌ಗೂ ಸೈನ್ ಹಾಕಿಕೊಡಬಲ್ಲ ಭಂಡ ಭ್ರಷ್ಟ. ಹೀಗೆ ಹೇಳುವವರು ಕೇಳುವವರು ಯಾರೂ ಇರದ ಕಡೆ ಇಂಥ ಅನಾಹುತಗಳು ನಡೆಯದೆ ಮತ್ತಿನ್ನೇನಾಗಲು ಸಾಧ್ಯ?

ಈ ದುರಂತದ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ಬಿಂಬಿಸಲು ನಗರಪಾಲಿಕೆಯ ಇಂಜಿನಿಯರ್‌ಗಳಾದ ದೇವರಾಜ್ ಹಾಗೂ ಫಿರೋಜ್‌ರನ್ನು ಸರ್ಕಾರ ಸಸ್ಪೆಂಡ್ ಮಾಡಿದೆ. ಆದರೆ ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೊಟ್ಟವರು ಇವರಲ್ಲ. ಬಿದ್ದ ಕಟ್ಟಡ ಖಾಸಗಿಯವರದ್ದಾದರಿಂದ ಗುಣಮಟ್ಟದ ಉಸ್ತುವಾರಿ ಇವರದ್ದಾಗಿರಲಿಲ್ಲ. ಇದೊಂದು ರೀತಿ 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವ' ನೀತಿ.

ಶ್ರೀನಿವಾಸ ರೆಡ್ಡಿ ಲಿಂಕ್

ರೆಡ್ಡಿ ಬ್ರದರ್ಸ್ ಮಾಲೀಕತ್ವದ ಓಬಳಾಪುರಂ ಮೈನಿಂಗ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಬಿ.ವಿ. ಶ್ರೀನಿವಾಸ ರೆಡ್ಡಿಯೆಂಬ ಘಟವನೂ ಈ ಕುಸಿದ ಕಟ್ಟಡದ ಜಂಟಿ ಪಾಲುದಾರನಾಗಿದ್ದಾನೆಂಬ ಗಾಳಿಸುದ್ದಿ ಬಳ್ಳಾರಿಯಲ್ಲಿ ಕೇಳಿಬರುತ್ತಿದೆ. ಈ ರೆಡ್ಡಿಗಳು ಹೊಸಪೇಟೆಯಲ್ಲಿ ಕಟ್ಟಿಸುತ್ತಿರುವ ಹೋಟೆಲ್ ಒಂದರ ನಿರ್ಮಾಣವನ್ನು ಇದೇ ಸೋಮಶೇಖರ ಮಾಡುತ್ತಾ ಒಂದು ಕೋಟಿ ರೂಪಾಯಿ ನುಂಗಿದ್ದ. ಆ ಬಾಬ್ತು ಹಣ ವಸೂಲಿಗೆ ನಿಂತ ರೆಡ್ಡಿಗಳು ಕೊನೆಗೆ ಈಗ ಕುಸಿದ ಕಟ್ಟಡದ ಮಾಲೀಕತ್ವ ಕೇಳಿದ್ದರೆನ್ನಲಾಗಿದೆ. ಹಾಗಾಗಿಯೇ ಶ್ರೀನಿವಾಸ ರೆಡ್ಡಿಯನ್ನು ಅಘೋಷಿತ ಪಾಲುದಾರಿಕೆಗೆ ಮುಂದು ಮಾಡಿದ್ದರು.



ತಿಮ್ಮಪ್ಪ



ಸವರಾಜ್

ಬಳ್ಳಾರಿಯ ರಾವ್ ಬಹಾದೂರ್ ಮಹಾಬಲೇಶ್ವರ ಇಂಜಿನಿಯರಿಂಗ್ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಎಚ್‌ಓಡಿ ಆಗಿದ್ದ ಸೋಮಶೇಖರ್ ಒಳ್ಳೇ ಕಾಮಗಾರಿ, ಕಳಪೆ ಕಾಮಗಾರಿ, ಅಸಲಿ ದಾಖಲೆ, ಫೋರ್ಜರಿ ರಿಪೋರ್ಟ್... ಹೀಗೆ ಬ್ಲಾಕ್ ಅಂಡ್ ವೈಟ್ ರೀತಿಯಲ್ಲಿ ವ್ಯವಹರಿಸುತ್ತಿದ್ದ ಆಸಾಮಿ.

ಇವರೆಲ್ಲರ ಲಾಭ ಬಡುಕುತನ ಬೇಜವಾಬ್ದಾರಿತನದಿಂದ ಮೂವತ್ತು ಜನ ಬಲಿಯಾಗಿದ್ದಾರೆ. ಹಾಗಾಗಿ ಶಿಕ್ಷೆ ಕೇವಲ ಸೋಮಶೇಖರನಿಗೆ ಮಾತ್ರವಲ್ಲ ಅನುಮತಿ ಕೊಟ್ಟ ಪಾಲಿಕೆ ಅಧಿಕಾರಿಗಳಿಗೂ ಆಗಬೇಕು.

● ವರದಿಗಾರ

ಗಾಯಗೊಂಡವರನ್ನು ಸಾಯಿಸಿದ ರೆಡ್ಡಿ ಬ್ರದರ್ಸ್



ಕಟ್ಟಡ ಕುಸಿದ ದಿನವೇ ಬೆಂಗಳೂರಿನ ಎರಡು ದೊಡ್ಡ ನಿರ್ಮಾಣ ಕಂಪನಿಯವರು ಬಳ್ಳಾರಿ ಡಿಸಿಗೆ ಫೋನ್ ಮಾಡಿ 'ಸಾರಿಗೆ ಖರ್ಚು ಒಂದು ಕೊಡಿ, ನಮ್ಮಲ್ಲಿರುವ ಕಾಂಬಿ ಕಟರ್ ಮಿಷನ್ ಕಳಿಸಿ ಅವಶೇಷ ತೆಗೆಸಿ ಅದರಡಿ ಸಿಕ್ಕಿರುವ ಜನರನ್ನು ಉಳಿಸುತ್ತೇವೆ' ಎಂದಿದ್ದರು. ಜಿಲ್ಲಾಧಿಕಾರಿ ರೆಡ್ಡಿಗಳಿಗೆ ಈ ವಿಷಯ ಮುಟ್ಟಿಸಿದಾಗ ಅವರು ನೋ ಅಂದಿದ್ದಾರೆ. ಕಾರಣ ಏನು ಗೊತ್ತೆ?

ಅದು ಕೊಪ್ಪಳ ಸಂಸದ ಸಣ್ಣ ಫಕೀರಪ್ಪನ ಅಳಿಯನ ಕಂಪನಿ ಎಂದು!

ರೆಡ್ಡಿಗಳಿಗೂ ಫಕೀರಪ್ಪನಿಗೂ ಈಗ ಸಂಬಂಧ ಹಳಸಿರುವ ಕಾರಣ ಫಕೀರಪ್ಪನ ಕಡೆಯವರಿಂದ ಪರಿಹಾರ ಕಾರ್ಯ ನಡೆಯಕೂಡದೆಂದು ರೆಡ್ಡಿಗಳು ತೀರ್ಮಾನಿಸಿ ಕೊನೆಗೆ ಬಿನ್ನಾಸ್ ಕಂಪನಿಯ ಕಾಂಬಿ ಕಟರ್ ಬಳ್ಳಾರಿಗೆ ಬರುವಷ್ಟರಲ್ಲಿ ಏಳು ದಿನ ಕಳೆದೇಹೋಗಿತ್ತು. ಅದರಿಂದಾಗಿ ಬದುಕುಳಿಯುವ ಛಾನ್ಸ್ ಇದ್ದವರು ಕಟ್ಟಡದಡಿಯೇ ಜೀವ ಬಿಟ್ಟಿದ್ದಾರೆ. ರೆಡ್ಡಿಗಳ ಸಮಾಜಸೇವೆಯ ವೈಖರಿ ಇದು.

ವಿಷಲಿಂಬೆ



ವಾಲಿ ಕರ್ನಾಟಕದ ಬಿಜೆಪಿ ಸರ್ಕಾರದ ಅತ್ಯಂತ ಮಂತ್ರಿ ಯಾರು?

ಪ್ರಶ್ನೆಗೆ ಬಿಜೆಪಿ ಆಂತರಿಕ ವಲಯದಲ್ಲೇ ಕೇಳಿ ಬರುವ ಹೆಸರು ಯಾರದ್ದು ಗೊತ್ತೇ?

ಅರವಿಂದ ಲಿಂಬಾವಳಿ!


ಜ್ಹಾ ನಾಯ್ಡು, ಅಶೋಕ್‌ರಂತಹ ಹುಟ್ಟಾ ...ನುರನ್ನೇ ಓವರ್‌ಟೇಕ್ ಮಾಡಿ ಈ ಅಪಕೀರ್ತಿ ...ತ್ತಿರುವ ಲಿಂಬಾವಳಿ ಸಾಹೇಬರು ಹೆಸರಿಗೆ ಉನ್ನತ ... ಸಚಿವರಾಗಿದ್ದರೂ ಅವರ ದಂಧೆಯ ಜಗತ್ತು ...ವಾಗಿದೆ.

...ಂಬಾವಳಿಯ ಗ್ರಾನೈಟ್, ಮ್ಯಾಂಗನೀಸ್, ... ಅದಿರು ರಫ್ತು ವ್ಯವಹಾರಗಳ ಬೇನಾಮಿ ... ಚಿತ್ರದುರ್ಗ, ತುಮಕೂರಿನಿಂದ ಶುರುವಾಗಿ ...ಛತ್ತೀಸ್‌ಗಡ ...ದೆ. ಅಲ್ಲಿಂದ ... ಮುಂದೆ ...ಬಂಗಾಳಕೊಲ್ಲಿ ...ೋನೇಷಿಯಾ, ...ಷಿಯಾವರೆಗೂ ...ತಿದೆ.

...ವಲ ...ದು ವರ್ಷಗಳ ... ಎಬಿವಿಪಿ ...ಟನೆಗಾಗಿ ...ತಿಕೊಂಡಿದ್ದ ...ಕ್ತ ...ವಳಿಯ ಹತ್ತಿರ ... ಸಣ್ಣ ಸೈಕಲ್ಲೂ ಇರಲಿಲ್ಲ, ಆದರೆ ಇವತ್ತು ... ಲಿಂಬಾವಳಿ ಅನಾಮತ್ತು ಒಂದು ಸಾವಿರ ... ರೂಪಾಯಿ ತೂಗುತ್ತಿದ್ದಾರೆ. ದೇಶಪ್ರೇಮ, ...ೂ ಧರ್ಮದ ಬಗ್ಗೆ ಭಾಷಣ ಕುಟ್ಟಿಕೊಂಡೇ ...ಲ್ ಎಸ್ಟೇಟ್ ದಂಧೆ, ಗಣಿ ದಂಧೆ, ವರ್ಗ ... ಮಾಡಿಕೊಂಡು ಅದ್ಯಾವ ಪರಿ ಬಲಿತು ...ದ್ದಾರೆಂದರೆ ಈಗ ಬಿಜೆಪಿ ಪಕ್ಷಕ್ಕೇ ಧಮಕಿ ...ತ್ತಿದ್ದಾರೆ. ರಾಜ್ಯ ಬಿಜೆಪಿ ಅಧ್ಯಕ್ಷಗಿರಿ ...ಯಿಸಲು ಇನ್ನಿಲ್ಲದ ಸರ್ಕಸ್ ಮಾಡಿದ ...ವಳಿಗೆ ಅದು ಗಿಟ್ಟಲಿಲ್ಲ, ಹಾಗಾಗಿ ಈಗ ...ಯೊಳಗೆ ದಲಿತ ಶಾಸಕರಿಗೆ ಅವಕಾಶ ...ಲ್ಲವೆಂದು ಬಂಡಾಯದ ಕೂಗು ಹಾಕುತ್ತಿದ್ದಾರೆ. ...ವಾಗಿನಿಂದಲೂ ಸಂಘಪರಿವಾರದಲ್ಲೇ ಇರುವ ...ವಳಿ ಬೋವಿ ಜನಾಂಗಕ್ಕೆ ಸೇರಿದ್ದರೂ ಎಂದೂ ...ರ ಬಗ್ಗೆ ಮಾತಾಡಿದವರಲ್ಲ, ಆದರೆ ಈಗ ...ನೇ 'ದಲಿತ' ಪ್ರಶ್ನೆ ಎತ್ತಿರುವ ಹಿಂದೆ ಈತನ ...-ಲಾಭ ಎರಡೂ ಇದೆ.

ಗಡ್ಕರಿ ಮಾತಿಗೆ ಬೆಲೆಯಿಲ್ಲ

ಮೊನ್ನೆ ಜನವರಿ 28ರಂದು ಈಶ್ವರಪ್ಪ ರಾಜ್ಯ ಬಿಜೆಪಿಯ ಅಧ್ಯಕ್ಷರಾದ ಸಮಾರಂಭಕ್ಕೆ ಬೆಂಗಳೂರಿಗೆ ಬಂದಿದ್ದ ರಾಷ್ಟ್ರಾಧ್ಯಕ್ಷ ಪೈಲ್ವಾನ್ ಗಡ್ಕರಿ 'ಭಿನ್ನಮತ ಸಹಿಸುವುದಿಲ್ಲ' ಎಂದು ವಾರ್ನಿಂಗ್ ಕೊಟ್ಟ ಒಂದೇ ಗಂಟೆಯಲ್ಲಿ ಲಿಂಬಾವಳಿ 12 ಶಾಸಕರ ಭಿನ್ನಮತದ ರಹಸ್ಯ ಸಭೆ ನಡೆಸಿದರು. ಹೆಚ್‌ಎಎಲ್‌ನ ಅವರ ಮನೆಯಲ್ಲೇ ನಡೆದ ಈ ಸಭೆಗೆ ಗೋವಿಂದ ಕಾರಜೋಳ, ಆನೇಕಲ್ ನಾರಾಯಣಸ್ವಾಮಿ, ನೆಲಮಂಗಲ ನಾಗರಾಜ್ ಇನ್ನಿತರ ಬಿಜೆಪಿ ಶಾಸಕರು ಬಂದುಹೋಗಿದ್ದಾರೆ. ಯಡ್ಡಿಗೆ ಈಶ್ವರಪ್ಪ ಬಿಜೆಪಿ ಪ್ರೆಸಿಡೆಂಟಾಗುವುದು ಬೇಕಿರಲಿಲ್ಲ, ಲಿಂಬಾವಳಿ ಆಗಲಿ ಎಂದಿತ್ತು. ಆದರೆ ರಾಜ್ಯ ಆರೆಸ್ಸೆಸ್ ನಾಯಕರಿಗೆ ಲಿಂಬಾವಳಿಯ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಗೊತ್ತಿದ್ದರಿಂದ ಬೇಡ ಎಂದುಬಿಟ್ಟರು. ಇದರಿಂದ ನಿರಾಶರಾದ ಲಿಂಬಾವಳಿ ಕೊನೆಗೆ ಈಶ್ವರಪ್ಪನ ಕೈಲಿದ್ದ ಇಂಧನ ಹಾಗೂ ವಿದ್ಯುತ್ ಖಾತೆಯನ್ನಾದರೂ ಲಪಟಾಯಿಸಲು ಈಗ ಲಾಬಿ ಶುರು ಮಾಡಿದ್ದಾರೆ. ಈ ಪ್ರಯತ್ನದ ಹಿಂದೆ ಇರುವುದು ಜನಸೇವೆಯ ಉದ್ದೇಶವಲ್ಲ, ಬದಲಾಗಿ ತನ್ನ ಬ್ಯುಸಿನೆಸ್ ಬೆಳೆಸಿಕೊಳ್ಳುವ ದಂಧೆಕೋರತನ ಮಾತ್ರ. ಇದಕ್ಕೆ ಸಾಕ್ಷಿಯಾಗಿರುವುದು ಮಾತಾ ಮಿನರಲ್ಸ್ ಹಾಗೂ ಮಾತಾ ಎಕ್ಸ್‌ಪೋರ್ಟ್ಸ್ ಎಂಬ ಖದೀಮ ಕಂಪೆನಿ.



ಲಿಂಬಾವಳಿಯ ಪರೋಕ್ಷ ಪಾಲುದಾರಿಕೆಯಿರುವ ಕಂಪೆನಿ ಇದು.

ಯಾರು ಈ ಪ್ರದೀಪ್ ಒಡೆಯರ್

ಆರ್‌ಪಿಸಿ ಲೇಔಟ್‌ನಲ್ಲಿ ಕಾರ್ಪೊರೇಟ್ ಕಚೇರಿ ಹೊಂದಿರುವ ಮಾತಾ ಎಕ್ಸ್‌ಪೋರ್ಟ್ ಕಂಪೆನಿ ಸ್ಥಾಪನೆಯಾದ್ದು 1996ರಲ್ಲಿ, ಕಬ್ಬಿಣದ ಅದಿರು, ಗ್ರಾನೈಟ್, ಮ್ಯಾಂಗನೀಸ್, ಬಾಕ್ಸೈಟ್ ಗಣಿಗಾರಿಕೆ ನಡೆಸುವ ಈ ಕಂಪೆನಿಯ ವಾರ್ಷಿಕ ಟರ್ನ್ ಓವರ್ 200 ಕೋಟಿಗಿಂತ ಜಾಸ್ತಿ ಇದೆ. ಅದೇರೀತಿ 2001ರಲ್ಲಿ ಹುಟ್ಟಿಕೊಂಡ ಮಾತಾ ಮಿನರಲ್ಸ್‌ನದ್ದೂ ಇದೇ ಗಣಿಗಾರಿಕೆಯ ದಂಧೆ. ತುಮಕೂರು, ಚಿತ್ರದುರ್ಗದಲ್ಲಿ ಮೈನ್ಸ್ ಹೊಂದಿರುವ ಈ ಕಂಪೆನಿಗಳಲ್ಲಿ ಲಿಂಬಾವಳಿಯ ಬೇನಾಮಿ ಪಾಲುದಾರನಾಗಿ ಪ್ರದೀಪ್ ಒಡೆಯರ್ ಇದ್ದಾನೆ. ಇವರಿಬ್ಬರೂ ಎಂಥ ಬಕಾಸುರರೆಂದರೆ ತಮ್ಮ ಮೈನ್ಸ್ ದಂಧೆಯನ್ನೂ ಈಗ ಛತ್ತೀಸ್‌ಗಡ ರಾಜ್ಯಕ್ಕೂ ವಿಸ್ತರಿಸಿದ್ದಾರೆ.

ದೂರದ ಮಲೇಷಿಯಾದಲ್ಲಿ ಕೆಎಸ್‌ಜಿ ರಿಸೋರ್ಸ್ ಎಂಬ ಕಂಪೆನಿಯ ಜೊತೆ ಸೇರಿ ನಾನೂರು ಕೋಟಿ ಬಂಡವಾಳದ ಹೊಸ ಗಣಿ ಕಂಪೆನಿ ಹುಟ್ಟುಹಾಕಿದ್ದಾರೆ.

ಕರ್ನಾಟಕದ ಲಿಂಬಾವಳಿ ಲೂಟಿಮಾಡುತ್ತಿರುವ ದುಡ್ಡು ಹೀಗೆ ಛತ್ತೀಸ್‌ಗಡ ಹಾಗೂ ಮಲೇಷಿಯಾದತ್ತ ಹರಿದುಹೋಗುತ್ತಿದೆ. ತೀರಾ ಇತ್ತೀಚೆಗೆ ಹಿರಿಯೂರಿನ ಹತ್ತಿರ ಒಂದೇ ಒಂದು ಮೈನ್ಸ್ ಲೀಸ್ ಮಾರಿಕೊಂಡ ಲಿಂಬಾವಳಿ ಮೂವತ್ತು ಕೋಟಿ ನುಂಗಿದ್ದಾನೆ,.

ರಿಯಲ್ ಎಸ್ಟೇಟ್ ಡೀಲುಗಳು

ದೇವನಹಳ್ಳಿ, ಯಲಹಂಕ, ಬಾಗಲೂರು ಹಾಗೂ ಹೆಸರುಘಟ್ಟ ಏರಿಯಾಗಳಲ್ಲಿ ಲಿಂಬಾವಳಿ ನಡೆಸುತ್ತಿರುವ ಭೂಕಬಳಿಕೆ ಹಾಗೂ ಲ್ಯಾಂಡ್ ಡೀಲ್‌ಗಳ ಭರಾಟೆ ನೋಡಿ ಸಾಕ್ಷಾತ್ ಬಿಜೆಪಿಗಳೇ ಶಾಕ್ ಆಗಿದ್ದಾರೆ. ದೇವನಹಳ್ಳಿ ಬಿಜೆಪಿ ಲೀಡರ್ ನಾಗೇಶನ ಮೂಲಕ ನೂರು ಎಕರೆ ಸರ್ಕಾರಿ ಗೋಮಾಳವನ್ನು ಲಿಂಬಾವಳಿ ಕಬಳಿಸಿದ್ದಾನೆ. ಹೆಸರುಘಟ್ಟ ಬಳಿ ಒಂಬೈನೂರು ಎಕರೆ ಜಮೀನನ್ನೂ ಆಂಧ್ರದ ವೈಎಸ್‌ಆರ್ ಮಗ ಜಗನ್‌ಗೆ ಧಾರೆ ಎರೆದುಕೊಡಲು ಇದೇ ಲಿಂಬಾವಳಿ ಪ್ಲಾನ್ ಮಾಡಿ ಸಿಕ್ಕಿ ಬಿದ್ದಿದ್ದ. ಗಾಂಧಿನಗರದಲ್ಲಿರುವ ಕಾಮತ್ ಯಾತ್ರಿ ನಿವಾಸ ಕಟ್ಟಡದ ಮಾಲೀಕ ಸತೀಶ್ ರೆಡ್ಡಿಯ ಗೆಳೆಕಾರನಾಗಿರುವ ಲಿಂಬಾವಳಿ ಈ ರೆಡ್ಡಿಯನ್ನು ಮಹದೇವಪುರ ಬಿಜೆಪಿ ಅಧ್ಯಕ್ಷನನ್ನಾಗಿ ಮಾಡಿದ್ದಾನೆ. ಕಳೆದ ಅಸೆಂಬ್ಲಿ ಎಲೆಕ್ಷನ್ ನಡೆಯುವಾಗ ಮಾರತಹಳ್ಳಿ ರಿಂಗ್‌ರೋಡಿನ ಈಸ್ಟ್ ಜೋನ್ ರೆಸಾರ್ಟ್‌ನೊಳಗೆ ಪಾರ್ಟಿ ಆಫೀಸ್ ತೆರೆದು ಒಟ್ಟು ಹದಿನೆಂಟು ಕೋಟಿ ರೂಪಾಯಿ ಖರ್ಚು ಮಾಡಿ ಎಲೆಕ್ಷನ್ ಗೆದ್ದಿದ್ದರು. ಇದೇ ಸತೀಶ್ ರೆಡ್ಡಿ ಜೊತೆಗೆ ಲಿಂಬಾವಳಿಗಿರುವ ರಿಯಲ್ ಎಸ್ಟೇಟ್ ಡೀಲ್‌ಗಳ ಬಗ್ಗೆ ತನಿಖೆಯಾದರೆ ಅದೇ ದೊಡ್ಡ ಹಗರಣವಾದೀತು.

ಇಲಾಖೆಯಲ್ಲೂ ಲೂಟಿ

ಡಿಗ್ರಿ ಕಾಲೇಜು ಉಪನ್ಯಾಸಕರಿಗೆ ಯುಜಿಸಿ ಸಂಬಳ ಕೊಡಲು ಕೆಲಕಾಲ ಸತಾಯಿಸಿದ್ದ ಲಿಂಬಾವಳಿ ಈಗ ಇನ್ನೊಂದು ಡೀಲಿಗೆ ಕೈಹಾಕಿದ್ದಾರೆ. ಇತ್ತೀಚೆಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಡಿಗ್ರಿ ಕಾಲೇಜುಗಳಿಗೆ ನೇಮಕವಾಗಿರುವ ಎರಡೂವರೆ ಸಾವಿರ ಉಪನ್ಯಾಸಕರಿಂದ ಹಫ್ತಾ ವಸೂಲಿ ಪ್ರಯತ್ನದ ಡೀಲ್ ಇದು. ಈ ಲೆಕ್ಚರರ್‌ಗಳು ನೇಮಕವಾದ ಎರಡು ವರ್ಷದೊಳಗೆ SLET ಅಥವಾ NET ಅಥವಾ Ph.d ಮಾಡಬೇಕೆಂದು ಇಲ್ಲದಿದ್ದರೆ ಕೆಲಸ ಹೋಗುವುದಾಗಿ ಲಿಂಬಾವಳಿ ಸಾಹೇಬರು ಧಮಕಿ ಕೊಡುತ್ತಿದ್ದಾರೆ. ಯುಜಿಸಿ ನಿಯಮ ಹಾಗೆ ಹೇಳುತ್ತಿಲ್ಲವಾದರೂ ಈ ರೀತಿಯ ಸರ್ಕ್ಯುಲರ್ ಹೊರಡಿಸಲಾಗಿದೆ. ಜೊತೆಗೆ ತಲಾ ಮೂವತ್ತು ಸಾವಿರ ವಸೂಲಿ ಮಾಡಿಕೊಟ್ಟರೆ ಆದೇಶ ಹಿಂದಕ್ಕೆ ಪಡೆಯುವುದಾಗಿಯೂ ಮೌಖಿಕ ಆದೇಶ ನೀಡುತ್ತಿದ್ದಾರೆ ಲಿಂಬಾವಳಿ. ಕರೆಕ್ಟಾಗಿ ವಸೂಲಾದರೆ ಏಳೂವರೆ ಕೋಟಿ ರೂಪಾಯಿಗಳ ಡೀಲ್ ಇದು. ಈ ಕಾರ್ಯಕ್ಕೆ ಲಿಂಬಾವಳಿ ಈಗ ತನ್ನ ಆಪ್ತ ಸಹಾಯಕರಾದ ಆನಂದ, ಮಾಲತೇಶ ಭಟ್ಟ ಹಾಗೂ ಕೆಜಿಸಿಬಿ ಸಂಘಟನೆಯ ಅಧ್ಯಕ್ಷ ಪ್ರಕಾಶನೆಂಬ ಘಡವನನ್ನು ಛೂಬಿಟ್ಟಿದ್ದಾನೆ.

ಬಿಜೆಪಿ ಸರ್ಕಾರದ ಮಾನಮರ್ಯಾದೆಗಳನ್ನು ಒಟ್ಟೊಟ್ಟಿ ಶಾಸಕ-ಸಚಿವನೂ ತರೇವಾರಿ ಹರಾಜಾಕುತ್ತಿದ್ದಾರೆ. ಆದರೆ ಬಕಾಸುರ ಲಿಂಬಾವಳಿ ಪಕ್ಷದ ಮಾನ, ಸರ್ಕಾರದ [illegible] ಮಾರಿಕೊಳ್ಳುತ್ತಿದ್ದಾನೆ.

ಚಿಲ್ಲರೆ ಕಾಸೂ ಬಿಡಲ್ಲ

ಜಯದೇವ-ನರಹರಿ ಹಾಗೂ ಲಿಂಬಾವಳಿ ಎಂಬ ನರಿ

ಈ ಬಿಜೆಪಿಯೊಳಗೆ ಸದಾ ಎರಡು ಗುಂಪುಗಳಿರುತ್ತವೆ. ಒಂದು ಮೂಲ ಬಿಜೆಪಿಗಳದ್ದು. ಅಂದರೆ ...ಸ್ಸೆಸ್, ಎಬಿವಿಪಿ ಹಿನ್ನೆಲೆಯಿಂದ ಬಂದಿರುವ ಕಮಿಟೆಡ್ ಕಾರ್ಯಕರ್ತರ ಗುಂಪು ಅದು. ಇನ್ನೊಂದು ಪಕ್ಷದ ...ಂತಗಳ ಗೊಡವೆಯಿರದ ಹೊರಗಿನವರ ಗುಂಪು.

...ಅರವಿಂದ ಲಿಂಬಾವಳಿ ಮೊದಲ ಗುಂಪಿಗೆ ಅಂದರೆ ಪಕ್ಷ ಸಂಘಟನೆಯಿಂದ ಬಂದಿರುವ ವ್ಯಕ್ತಿ. ಹತ್ತಾರು ... ಎಬಿವಿಪಿ ನಾಯಕನಾಗಿ ನಂತರ ಸಂಘಟನಾ ಕಾರ್ಯದರ್ಶಿಯಾಗಿ ಆಮೇಲೆ ಬಿಜೆಪಿಯ ನ್ಯಾಷನಲ್ ...ಕ್ಯೂಟಿವ್ ಕಮಿಟಿಗೂ ಮೆಂಬರ್ ಆದವನು. ಇಂಥವರ ಬಾಯಲ್ಲೇ ದೇಶ ಪ್ರೇಮ, ಭಾರತ್ ಮಾತಾಕೀ ಜೈ, ...ದೂಧರ್ಮದ ಮಾತುಗಳು ಜಾಸ್ತಿ ಕೇಳಿಬರುತ್ತಿರುತ್ತವೆ. ಈ ಕಾರಣದಿಂದಾಗಿಯೇ ರಾಜ್ಯ ಆರೆಸ್ಸೆಸ್ ಮುಖಂಡರಾಗಿರುವ ...ಯದೇವ ಹಾಗೂ ನರಹರಿಯವರನ್ನು ಕೇಳಬೇಕಾದ ಪ್ರಶ್ನೆ ಏನೆಂದರೆ


...ಕೇವಲ ಹತ್ತು ವರ್ಷಗಳ ಹಿಂದೆ ಕೈಲಿ ಬಿಡಿಗಾಸೂ ಇರದಿದ್ದ ಅರವಿಂದ ಲಿಂಬಾವಳಿ ಇವತ್ತು ಅನಾಮತ್ತು ...ನು ಸಾವಿರ ಕೋಟಿ ರೂಪಾಯಿ ವ್ಯವಹಾರ ನಡೆಸುವ ಮಟ್ಟಕ್ಕೆ ಬೆಳೆದಿದ್ದಾನೆಂದರೆ ಆ ದುಡ್ಡು ಯಾರಪ್ಪನ ...? ಸೊತ್ತು?


ಇದಕ್ಕೆ ಉತ್ತರ ಕಂಡುಕೊಳ್ಳುವ ತಾಕತ್ತು ಜಯದೇವ್‌ಗೆ ಇದೆಯಾ?

ಪಶ್ಚಿಮ ಶಿಕ್ಷಕರ ಕ್ಷೇತ್ರ ಕದನ:

ಆರೆಸ್ಸೆಸ್ V/s ಬಿಜೆಪಿ ಟಿಕೆಟ್ ಟ್ರ್ಯಾಕ್ಟೀಸ್!

ಈಗ ಮಾಸ್ತರ್ ಮಂದಿ ರಾಜಕೀಯ ರಗಳೆ ಕಾಲ. ವಿಧಾನ ಪರಿಷತ್ತಿಗೆ ಮಾಸ್ತರ್‌ಗಳ ಮುಖಂಡನ ಆಯ್ಕೆಗೆ ಇಲೆಕ್ಷನ್ ಇದೇ ಜೂನ್‌ನಲ್ಲಿ ಜರುಗಲಿದೆ. ಹಾಗೆ ನೋಡಿದರೆ ಪದವೀಧರ, ಶಿಕ್ಷಕರ ಕ್ಷೇತ್ರಗಳ ಎಮ್ಮೆಲ್ಸಿಗಿರಿ ಇದೆಯಲ್ಲ ಅದು ನ್ಯಾಷನಲ್ ವೇಸ್ಟೇ ಸರಿ! ಈ ಶಿಕ್ಷಕರ ಹೆಸರಲ್ಲಿ ಎಮ್ಮೆಲ್ಸಿಯಾದವರು ಶಿಕ್ಷಕರಿಗೆ, ಶಿಕ್ಷಣ ರಂಗಕ್ಕೆ ಉದ್ಧಾರ ಮಾಡಿದ್ದಕ್ಕಿಂತ ಸ್ವಜೀರ್ಣೋದ್ಧಾರ ಸಕತ್ತಾಗಿ ಸಾಧಿಸಿದ್ದೇ ಹೆಚ್ಚು.


ಸಂಕೂರು


ಕುಬೇರಪ್ಪ

ಈ ಮಾಸ್ತರ್ಸ್ ಎಮ್ಮೆಲ್ಸಿಗಳು ಶಿಕ್ಷಕ ಸಮುದಾಯದಲ್ಲಿ ಬುರ್ನಾಸ್ ರಾಜಕೀಯ ಸಂಸ್ಕೃತಿ ಬೆಳೆಸಿದರೇ ಹೊರತು ಗಂಭೀರ ಚಿಂತನೆ, ಅಕಾಡೆಮಿಕ್ ಪರಿಸರ ಸೃಷ್ಟಿಗೆ ಶ್ರಮಿಸಲೇ ಇಲ್ಲ. ಈ ನಿಷ್ಪ್ರಯೋಜಕ ಶಾಸಕ ಸ್ಥಾನದ ಬದಲಿಗೆ ಅನ್ನದಾತರಾದ ರೈತರ ಕ್ಷೇತ್ರ; ಬೆವರಿನ ವರ್ಗದ ಕಾರ್ಮಿಕರ ಕ್ಷೇತ್ರ ರಚಿಸಿ ಅದರ ಪ್ರತಿನಿಧಿಗೆ ಎಮ್ಮೆಲ್ಸಿ ಸ್ಥಾನ ಕೊಟ್ಟಿದ್ದರೆ ಅದೆಷ್ಟೋ ಅರ್ಥಪೂರ್ಣವಾಗುತ್ತಿತ್ತು.....

ಒಟ್ಟಿನಲ್ಲೀಗ ಶಿಕ್ಷಕರ ಶಾಸಕನ ಆಯ್ಕೆಯ ರುಟೀನ್ "ಕರ್ಮ" ಎದುರಾಗಿದೆ. ಅಂತೆಯೇ ಪಶ್ಚಿಮ ಶಿಕ್ಷಕರ ಅಖಾಡ ಹದಗೊಳ್ಳುತ್ತಿದೆ. ಇದು ಅಂತಿಂಥ ಕ್ಷೇತ್ರವಲ್ಲ! ಸತತ ಐದು ಬಾರಿ ವಿಧಾನ ಪರಿಷತ್ ಮೆಂಬರ್ ಆಗಿ, ಕುಮಾರಸ್ವಾಮಿಯ 'ಕೋಜಾ' ಸರ್ಕಾರದಲ್ಲೊಮ್ಮೆ ಶಿಕ್ಷಣ ಮಂತ್ರಿಯೂ ಆಗಿ ಮೆರೆದ ಬಸವರಾಜ್ ಹೊರಟ್ಟಿಯ ಕ್ಷೇತ್ರವಿದು. ಅಂಥ ಹೊರಟ್ಟಿಯಂಥ ಹೊರಟ್ಟಿಯೇ ಈ ಬಾರಿ ಗೆಲ್ಲಲು ಏಳು ಕೆರೆಯ ನೀರು ಕುಡಿಯಬೇಕಾಗಿ ಬಂದಿದೆ. ಹೀಗಾಗಿ ಈ ಕ್ಷೇತ್ರ ಕುತೂಹಲದ ಕಣವಾಗಿದೆ.

ಉತ್ತರ ಕನ್ನಡ, ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಗಳನ್ನೊಳಗೊಂಡ ಈ ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ಈ ಬಾರಿ ಹೊರಟ್ಟಿಯನ್ನು ಮಣಿಸಿ ಮನೆಗೆ ಕಳಿಸಲು ಬಿಜೆಪಿಯ ಲಿಂಗಾಯತ ಮುಖಂಡರೇ ಪಣ ತೊಟ್ಟಿದ್ದಾರೆ. ಕಾಂಗ್ರೆಸ್‌ನ ಅತಿರಥ ಎಚ್.ಕೆ. ಪಾಟೀಲ್ ಜತೆ 'ಮಿಲಾಪಿ' ಕುಸ್ತಿ ಆಡುತ್ತ ಸಲೀಸಾಗಿ ವಿಧಾನಪರಿಷತ್ತಿಗೆ ಗೆಲ್ಲುತ್ತ ಬಂದಿದ್ದ ಹೊರಟ್ಟಿಯನ್ನು ಸೋಲಿಸಿ ತಾಕತ್ತು ತೋರಿಸಲು ಮಂತ್ರಿ ಬಸು ಬೊಮ್ಮಾಯಿ ಮತ್ತು ಸಂಸದ ಕಂ ಮಿನಿಸ್ಟರ್ ಉದಾಸಿ ಮಗ ಶಿವಕುಮಾರ್ ಉದಾಸಿ ಸ್ಕೆಚ್ ಹಾಕಿಕೊಂಡು ಅಡ್ಡಾಡುತ್ತಿದ್ದಾರೆ.

ಬಸು-ಶಿವು ಜೋಡಿ ಸಂಕನೂರ್ ಎಂಬ ಹೊರಟ್ಟಿಯ ಮಾಜಿ ಗೆಣೆಗಾರನನ್ನು ಬಿಜೆಪಿ ಕ್ಯಾಂಡಿಡೇಟ್ ಮಾಡಿಕೊಂಡಿದೆ. ಜೆಡಿಎಸ್‌ನ ಹೊರಟ್ಟಿಯ ಇಲೆಕ್ಷನ್ ಗೆಲ್ಲುವ ಕುತಂತ್ರದ ರಹಸ್ಯವೆಲ್ಲ ಸಂಕನೂರ್‌ಗೆ ಗೊತ್ತಿರುವುದರಿಂದ ಆತನೇ ಫಿಟ್ ಕ್ಯಾಂಡಿಡೇಟ್ ಎಂಬುದು ಬಸು-ಶಿವುಗಳ ವಾದ. ಸಿಎಂ ಯಡ್ಡಿ ಬಣದ ಈ ಠಕ್ಕ-ಠಿಕ್ಕರು ಸಂಘಪರಿವಾರದ ಸರದಾರರ ತಲೆಗೇ ಎಣ್ಣೆ ತಿಕ್ಕಿ ಸಂಕನೂರ್‌ಗೆ ಟಿಕೆಟ್ ಕೊಡಿಸಿದ್ದಾರೆ. ಸಚಿವ ಶೆಟ್ಟರ್ ವಿರುದ್ಧದ ಶಿವು-ಬಸು ಬಡಿದಾಟದ ಇನ್ನೊಂದು ಆಯಾಮವಿದು.

ಸಂಕನೂರ್‌ನನ್ನು ಅಭ್ಯರ್ಥಿ ಎಂದು ಬಿಜೆಪಿ ಘೋಷಿಸಿರುವುದು-ಇದರ ಹಿಂದೆ ಬಸು-ಶಿವು ಕರಾಮತ್ತು ಅಡಗಿರುವುದೆಲ್ಲಿ ಒರಿಜಿನಲ್ ಚೆಡ್ಡಿಗಳ ಕೆರಳಿಸಿಬಿಟ್ಟಿದೆ. ಸಂಘಪರಿವಾರದ್ದೇನಿದ್ದರೂ ರಾಣೆಬೆನ್ನೂರು ಕಾಲೇಜಿನ ಪ್ರಿನ್ಸಿಪಾಲ್ ಡಾ. ಆರ್.ಎಂ. ಕುಬೇರಪ್ಪನೇ ಇಲೆಕ್ಷನ್ ಕುದುರೆ. ಕಳೆದ ಬಾರಿ ಹೊರಟ್ಟಿಗೆ ಟಫ್ ಸ್ಪರ್ಧೆಯೊಡ್ಡಿದ್ದ ಕುಬೇರಪ್ಪ ಚೆಡ್ಡಿ ದೀಕ್ಷೆ ಪಡೆದಿರುವ ರೆಡ್ಡಿ ಲಿಂಗಾಯತ ಪುಢಾರಿ. ಹೀಗಾಗಿ ಆತನೆಂದರೆ ಅನಾಹುತಕಾರಿ ಚೆಡ್ಡಿ-ಮಾಜಿ ಎಮ್ಮೆಲ್ಸಿ ಬಾಲಕೃಷ್ಣ ಭಟ್‌ಗೆ ಮಮಕಾರ ಜಾಸ್ತಿ.

ಸುರತ್ಕಲ್-ಮಂಗಳೂರು ಪ್ರದೇಶದ ಕೋಮುಕಲಹದಲ್ಲಿ ತೆರೆಮರೆಯಲ್ಲಿ ನಿಂತು ಕಡ್ಡಿಯಾಡಿಸಿ ಕೀರ್ತಿಶಾಲಿಯಾಗಿರುವ ಸದ್ರಿ ಬಾಲಕೃಷ್ಣ ಭಟ್ಟನ ಹಿಡಿತದಲ್ಲಿ ರಾಜ್ಯ ಸೆಕೆಂಡರಿ ಶಿಕ್ಷಕರ ಸಂಘ ಸಿಕ್ಕಿಕೊಂಡು ಒದ್ದಾಡುತ್ತಿದೆ. ಈ ಸಂಘದ ಮಾಸ್ತರರಿಗೆಲ್ಲ ಕೋಮುವಾದ ಬೋಧಿಸಿ ಬ್ರೈನ್‌ವಾಶ್ ಮಾಡುವ ಭಟ್ಟ ಕುಬೇರಪ್ಪನಿಗೆ ಬೆಂಬಲ ಘೋಷಿಸಿಬಿಟ್ಟಿದ್ದಾನೆ. ಈ ಭಟ್ಟ ಮಂಗಳೂರು ಏರಿಯಾದ ಶಾಸಕನಾಗಿದ್ದಾಗಲೂ ಮಾಡಿದ್ದು ಬರೀ ಇಂಥ ಕಮ್ಯುನಲ್ ಕಿತಾಪತಿಯೇ ವಿನಃ ಶಿಕ್ಷಣ ಕ್ಷೇತ್ರದ ಕೆಲಸವಲ್ಲ.

ಓಟು ಖರೀದಿ ಕರಾಮತ್ತು!!

ಸ್ವಯಂಘೋಷಿತ ಸಂಭಾವಿತರ ಪಾರ್ಟಿ ಹುಟ್ಟುಹಾಕಿದ ಜನಪ್ರತಿನಿಧಿಗಳ ಖರೀದಿ ಸಂಸ್ಕೃತಿ ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೂ ವ್ಯಾಪಿಸಿಬಿಟ್ಟಿದೆ. ಜೆಡಿಎಸ್ ಹೊರಟ್ಟಿ, ಬಿಜೆಪಿಯ ಸಂಕನೂರು ಮತ್ತು ಸಂಘ ಪರಿವಾರದ ಕುಬೇರಪ್ಪರ ಟೀಮುಗಳು ಮಾಸ್ತರರ ರೇಟು ಅಂದಾಜಿಸುತ್ತಿದ್ದಾರೆ! ಮಠಮಾನ್ಯಗಳ ಕಟ್ಟಿಕೊಂಡು ಪ್ರಚಾರ ಶುರು ಹಚ್ಚಿಕೊಂಡಿರುವ ಹೊರಟ್ಟಿ ಆಗರ್ಭ ಶ್ರೀಮಂತ ಅಭ್ಯರ್ಥಿ. 30 ವರ್ಷ ಶಾಸಕರಾಗಿ 40 ತಿಂಗಳು ಮಂತ್ರಿಯಾಗಿ ಕೊಳ್ಳೆ ಹೊಡೆದ ಕೊಪ್ಪರಿಗಟ್ಟಲೆ ಕಾಸು ಹೊರಟ್ಟಿ ಬಳಿಯಿದೆ.


ಬಿಜೆಪಿಯ ಸಂಕನೂರು ಗಾಡ್‌ಫಾದರ್‌ಗಳ ಕೃಪೆಯಿಂದ ಹೊರಟ್ಟಿಗೆ ಸರಿಸಮನಾಗಿ ತೂಗುವ ತಾಕತ್ತುವಂತನಾಗಿದ್ದಾರೆ. ಸಂಕನೂರ್ ಬಾಸ್‌ಗಳಾದ ಮಂತ್ರಿ ಬಸು-ಸಂಸದ ಶಿವುಗಳಿಗೆ ಆಡಳಿತ ಪಕ್ಷದ ಟ್ರಂಪ್‌ಕಾರ್ಡ್ ಎಸೆದು ಕೋಟಿ ಕೂಡಿಸುವ ಕಲೆ ಕರಗತವಾಗಿದೆ. ಸಂಘಪರಿವಾರ ಮನಸ್ಸು ಮಾಡಿದರೆ ಬಿಜೆಪಿ ದಂಗೆಗಾರ ಕುಬೇರಪ್ಪನಿಗೂ ಸಂಪನ್ಮೂಲದ ಕೊರತೆಯಾಗದು. ಹೊರಟ್ಟಿ ಈಗಾಗಲೇ ಮಾಸ್ತರರಿಗೆ ಉಂಗುರ, ಕಂಪ್ಯೂಟರ್, ಸೀರೆ, ಪತ್ರಕರ್ತರಿಗೆ ಬಂಗಾರದ ಪೆನ್ ಹಂಚುತ್ತಿರುವ ಸುದ್ದಿಗಳು ಹಬ್ಬಿದೆ.

ಮತದಾರರ ಕುಲಗೆಡಿಸಿ ಸುಖ ಪಡುವ ಬುರ್ನಾಸ್ ಬುದ್ಧಿಯ ಬಿಜೆಪಿಯ ಇಲೆಕ್ಷನ ಮ್ಯಾನೇಜರ್‌ಗಳು ಮಾಸ್ತರರಿಗೆ ಕ್ಯಾಷ್-ಲ್ಯಾಪ್‌ಟಾಪು ಕೊಡುವ ತಯಾರಿಯಲ್ಲಿದ್ದಾರೆ. ಸಂಘಪರಿವಾರದ ಕುಬೇರಪ್ಪ ಮಾತ್ರ ಕಾಸು ಬಿಚ್ಚುವ ಸ್ಕೆಚ್ ಹಾಕಿಲ್ಲ. ಬಿಜೆಪಿಯ ಅಧಿಕೃತ ಹುರಿಯಾಳು ತಾನೇ ಆಗಬಹುದೆಂಬ ಸಣ್ಣ ಆಸೆಯೇ ಇದಕ್ಕೆ ಕಾರಣ.

ಈಗ ಹೇಳಿ; ಶಿಕ್ಷಕರಂಥ ಪ್ರಬುದ್ಧರನ್ನೇ ಕುಲಗೆಡಿಸುವ ಈ ಅಭ್ಯರ್ಥಿಗಳು ಎಮ್ಮೆಲ್ಸಿಯಾಗಲು ಯೋಗ್ಯರಾ? ಅಥವಾ ವೃತ್ತಿಯ ಪಾವಿತ್ರ್ಯ ಮರೆತು ಮತ ಮಾರಿಕೊಳ್ಳುವವರು ಶಿಕ್ಷಕರಾಗಲು ಅರ್ಹರಾ? ಅದಕ್ಕೇ ಹೇಳಿದ್ದು ಈ ದಂಡ-ಪಿಂಡ ಶಿಕ್ಷಕರ ಎಮ್ಮೆಲ್ಸಿಗಿರಿ ರದ್ದು ಮಾಡಿ ಬೆವರಿನ ವರ್ಗದ ರೈತರ ಕಾರ್ಮಿಕ ಕಾನ್‌ಸ್ಟಿಟ್ಯೂಯೆನ್ಸಿ ರಚಿಸುವುದು ಬೆಟರ್ ಎಂದು!

ಯಾವಾಗ ಬಿಜೆಪಿ ಸಂಕನೂರ್‌ನೇ ಅಧಿಕೃತ ಅಭ್ಯರ್ಥಿಯೆಂದು ಡಿಕ್ಲೇರ್ ಮಾಡಿತೋ, ಆಗ ಭಟ್ಟನ ಬಡಬಡಿಕೆ ಜೋರಾಗಿದೆ. ಬೆಂಗಳೂರಿನ ಕೇಶವ ಶಿಲ್ಪ, ಅಲ್ಲಿಂದ ಬಿಜೆಪಿ ರಾಷ್ಟ್ರಾಧ್ಯಕ್ಷ ಗಡ್ಕರಿವರೆಗೂ ಈತ "ಇದು ಸಂಘಪರಿವಾರದ ವಿರುದ್ಧ ಕಾರಸ್ಥಾನ" ಎಂದು ಕಂಪ್ಲೇಂಟೂ ಕೊಟ್ಟರು ಭಟ್ಟರು. ಆದರೆ ಸಂಕನೂರ್ ಗಾಡ್‌ಫಾದರ್‌ಗಳ ಹಿಂದೆ ಸಾಕ್ಷಾತ್ ಸಿಎಂ ಸಾಹೇಬರೇ ಇದ್ದದ್ದರಿಂದ ಭಟ್ಟ ಬೋರಲಾಗಿ ಬಿದ್ದುಬಿಟ್ಟರು. ಹಾಗಂತ ಭಟ್ಟರೇನೂ ಸುಮ್ಮನೇ ಕೂರಲಿಲ್ಲ. ತಮ್ಮ ಆರೆಸೆಸ್ ಶೈಲಿಯ ಶಿಕ್ಷಕರ ಬೈಠಕ್ ಹಾವೇರಿಯಲ್ಲಿ ನಡೆಸಿ ಬಂಡಾಯ ಬಾವುಟ ಹಾರಿಸಿಬಿಟ್ಟರು.


ಬಸವರಾ... ...ರಟ್ಟಿ


ಎಚ್ಕೆ ಪಾ...

ತನ್ನ ಅಧ್ಯಕ್ಷತೆಯಲ್ಲಿರುವ ಸೆಕೆಂಡರಿ ಶಿಕ್ಷಕರ ಸಂಘದ ಸಭೆ ಹಾವೇರಿಯಲ್ಲಿ ನಡೆಸಿದ ಭಟ್, ಇದಕ್ಕೆ "ಶಿಕ್ಷಕರ ಸಂಕಲ್ಪ ದಿನ" ಎಂದು ಹೆಸರಿಟ್ಟಿದ್ದರು. ಹಿಂದೂತ್ವದ ಒಣ ವೀರಾವೇಶದ ಭಾಷಣ ಬಿಗಿದ ಭಟ್ ಬಿಜೆಪಿ ನಿಷ್ಠಾವಂತ ಚೆಡ್ಡಿ ಕುಬೇರಪ್ಪನಿಗೆ ಟಿಕೆಟ್ ವಂಚಿಸಿರುವುದು ಇಡೀ ಜಗತ್ತಿಗೇ ಆದ ಅನ್ಯಾಯವೆಂಬಂತೆ ಗೋಳಾಡಿದರು. ಸೆಕೆಂಡರಿ ಶಿಕ್ಷಕ ಸಂಘದ ಮಾಸ್ತರ್-ಮಾಸ್ತರ್ಣಿಯರಿಗೆಲ್ಲ ಚೆಡ್ಡಿ ತೊಡಿಸಿ ಕೈಲಿ ಆರೆಸೆಸ್ ಲಾಠಿ ಕೊಟ್ಟದು ಭ್ರಮೆಯಲ್ಲೇ ಭಟ್ ಓಲಾಡಿದರು.

'ಸೆಕೆಂಡರಿ ಶಿಕ್ಷಕರ ಸಂಘದ ಮತ್ತು ಸಂಘಪರಿವಾರದ ಅಭ್ಯರ್ಥಿ ಕುಬೇರಪ್ಪ' ಎಂದು ಘೋಷಿಸಿಬಿಟ್ಟರು ಭಟ್ರು. ಅಷ್ಟೇ ಅಲ್ಲ ಈ ಬಂಡಾಯವಿದೆಯಲ್ಲ ಭಾರತದ ಬಿಜೆಪಿ ಸಂಘಪರಿವಾರದ ಇತಿಹಾಸದಲ್ಲೇ ಮೊದಲನೇಯದಂತೆ! ಬಿಜೆಪಿ ಕುಬೇರಪ್ಪನಿಗೆ ಟಿಕೆಟ್ ಕೊಟ್ಟರೆ ಎಲ್ಲ ಓಕೆ ಕೊಡದಿದ್ದರೆ ಇಡೀ ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಬಿಜೆಪಿ ವಿರುದ್ಧ ಸಂಘಪರಿವಾರ ಅಭ್ಯರ್ಥಿ ಹೂಡಲಿದೆ" ಎಂದು ಬಾಲಕೃಷ್ಣ ಭಟ್ ಬೊಬ್ಬೆ ಹೊಡೆದದ್ದೇ ಹೊಡೆದದ್ದು! ಶಿಕ್ಷಕರು ಕಣ್ಣು-ಬಾಯಿ ಬಿಟ್ಟುಕೊಂಡು ಭಟ್ಟರ ಭಾಷಣ ಕೇಳಿದ್ದೇ ಕೇಳಿದ್ದು.

ಒಂದಂತೂ ಖರೆ. ಶಿವು ಉದಾಸಿ-ಬಸು ಬೊಮ್ಮಾಯಿಗಳ ಕುದುರೆಗಿಂತ ಸಂಘಪರಿವಾರದ ಕುಬೇರಪ್ಪನೇ ಬಲಶಾಲಿ. ಈತನಿಗೆ ಸೆಕೆಂಡರಿ ಶಿಕ್ಷಕರ ಸಂಘ ಮತ್ತು ವಿಶ್ವವಿದ್ಯಾಲಯದ ಮಾಸ್ತರ್‌ಗಳ ಬೆಂಬಲ ಸಿಕ್ಕಿದೆ. ಉತ್ತರ ಕನ್ನಡ ಉಪದ್ವ್ಯಾಪಿ ಸಂಸದ ಅನಂತ್ಕುಮಾರ್‌ನ ಅಭಯವಿದೆ. ಹಾಗೆಯೇ ಹಾವೇರಿ ಜಿಲ್ಲೆಯೊಂದನ್ನು ಬಿಟ್ಟರೆ ಉಳಿದೆಡೆಯೂ ಸಂಕನೂರು ಸೊರಗಿದ್ದಾರೆ. ಬಿಜೆಪಿಯ ಬಹುತೇಕ ಸಂಸದ-ಶಾಸಕ-ಮಂತ್ರಿಗಳ ಬಲವಿದ್ದರೂ ಸಂಕನೂರ್‌ಗೆ ಶಿಕ್ಷಕರ ಬಲವೇಕೋ ಸಿಗುತ್ತಿಲ್ಲ. ಕಳೆದ ಬಾರಿ ಸೋತ ಸಿಂಪಥಿ ಮತ್ತು ಸಂಘಪರಿವಾರದ ನೆಟ್‌ವರ್ಕ್ ಸಿಕ್ಕಿರುವ ತಾನೇ ಧನ್ಯನೆಂದು ಕುಬೇರಪ್ಪ ಬೀಗುತ್ತಿದ್ದಾರೆ.

ಸದ್ಯಕ್ಕೆ ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ ತ್ರಿಕೋನ ಕಾಳಗ ಏರ್ಪಡುವ ಸೂಚನೆಗಳು ಗೋಚರಿಸುತ್ತಿದೆ. ಜೆಡಿಎಸ್‌ನ ಬಸವರಾಜ್ ಹೊರಟ್ಟಿಗೆ ಕಾಂಗ್ರೆಸ್ ಬೆಂಬಲ ಸಿಗುವ ಸಾಧ್ಯತೆಯಿದೆ. ಬಿಜೆಪಿಯ ಸಂಕನೂರು ಮತ್ತು ಬಂಡಾಯಗಾರ ಕುಬೇರಪ್ಪರ ಕಚ್ಚಾಟ ಹೊರಟ್ಟಿಯ ರೊಟ್ಟಿ ತುಪ್ಪದತ್ತ ಜಾರಿಸುತ್ತಿದೆ.

● ವರದಿಗಾರ

ಜೋಕ್ಸ್

ಇತಿಹಾಸ ಟೀಚರ್: ಧೃತರಾಷ್ಟ್ರನಿಗೆ ನೂರು ಮಕ್ಕಳು. ಆದರೆ ಪಾಂಡುಗೆ ಕೇವಲ ಐವರು ಮಕ್ಕಳು ಯಾಕೆ?

ವಿದ್ಯಾರ್ಥಿ: ಸಾರ್, ಕಣ್ಣಿದ್ದವರಿಗೆ ಬೇರೆ ಕೆಲಸಗಳೂ ಇರುತ್ತೆ ಅದಕ್ಕೆ....

* * * * * * * *

ಮುಷರಫ್: ಬೆಳಗ್ಗೆ ಎಂಟು ಗಂಟೆಗೆ ಶ್ವೇತಭವನದಲ್ಲಿ ಬಾಂಬ್ ಸ್ಫೋಟ ಆಗಿವರ ಬಗ್ಗೆ ನಾನು ಅನುಕಂಪ ವ್ಯಕ್ತಪಡಿಸುತ್ತೇನೆ.

ಒಬಾಮಾ: ಆದರೆ ಇಲ್ಲಿ ಅಂತಹ ಸ್ಫೋಟವೇನು ಸಂಭವಿಸಿಲ್ಲವಲ್ಲ?

ಮುಷರಫ್: ಅಂದಹಾಗೆ, ಈಗ ಅಲ್ಲಿ ಗಂಟೆ ಎಷ್ಟು?

ಒಬಾಮಾ: ಬೆಳಗ್ಗೆ ಏಳು ಗಂಟೆ.

ಮುಷರಫ್: ಸಾರಿ ಆಮೇಲೆ ಫೋನ್ ಮಾಡುತ್ತೇನೆ...

ತನ್ನ ಸುಂದರ ಪತ್ನಿಯನ್ನು ಮುಖ್ಯಮಂತ್ರಿ ತರಾಟೆಗೆ ತೆಗೆದುಕೊಳ್ಳುತ್ತಿದ್ದ.

ಮುಖ್ಯಮಂತ್ರಿ: ನಿಜ ಹೇಳು, ನೀನು ನನಗೆಷ್ಟು ಬಾರಿ ಮೋಸ ಮಾಡಿದ?

ಹೆಂಡತಿ: ಮೂರು ಬಾರಿ ಅಷ್ಟೆ!

ಮು.ಮ.: ಯಾವಾಗ ಮತ್ತು ಯಾರೊಂದಿಗೆ?

[illegible]: ನಿಮಗೆ ಹೃದಯದ ಆಪರೇಷನ್ ಆಯಿತಲ್ಲಾ, ಆಗ ವೈದ್ಯರೊಂದಿಗೆ ಮೊದಲನೆ ಬಾರಿ...

[illegible]: ಎರಡನೆ ಬಾರಿ?

[illegible] ...ನಲ್ಲಿ ಬಂಧಿ ಆಗಿದ್ದರಲ್ಲಾ, ಆಗ ಜಡ್ಜನೊಂದಿಗೆ...

[illegible] ಬಾರಿ?

[illegible] ಸರ್ಕಾರ ಸ್ಥಾಪಿಸಬೇಕು ಅಂತ ಹೋರಾಡುತ್ತಿದ್ದಲ್ಲ, ಆಗ ನಿಮಗೆ 78 ಶಾಸಕರ ಕೊರತೆ [illegible]...!

▶▶ ಕಾರ್ಟೂನ್ ಕಾರ್ನರ್





ಮೈಲಾರದ ಕಾರಣಿಕ!

...ಂತಹ ಅಗಾಧ ಜನಸ್ತೋಮವನ್ನು ಒಂದೇ ಜಾಗದಲ್ಲಿ ಈವರೆಗೆ ...ಕಂಡಿರಲಿಲ್ಲ. ಪೊಲೀಸರ ಅಂಕೆಯಿಲ್ಲದೆ ಕಾರಣಿಕದ ಸಂದೇಶಕ್ಕಾಗಿ ...ತ್ತಿದ್ದ ಆ ಜನಸಾಗರ ನೋಡಿ ದಿಗ್ಭ್ರಾಂತನಾಗಿ ಅಕ್ಕಪಕ್ಕದವರನ್ನು "ಇಲ್ಲಿ ...ವ ಜನಸಂಖ್ಯೆ ಅಂದಾಜು ಎಷ್ಟಿರಬಹುದು?" ಎಂದೆ. ಕೆಲವರು ಆರು ...ಎಂದರು, ಕೆಲವರು ಏಳು ಲಕ್ಷಕ್ಕೂ ಮೀರಿದ ಜನ ಸೇರಿದ್ದಾರೆ ಎಂದರು. ...ಳಗೊಳದ ಮಹಾಮಸ್ತಕಾಭಿಷೇಕದಲ್ಲೂ ನಾನಿಷ್ಟು ಜನರನ್ನು ನೋಡಿರಲಿಲ್ಲ. ...ಮೈಲಾರ ಜಾತ್ರೆಯ ಜನಸ್ತೋಮ.

...ತಗಲಿ ತಾಲ್ಲೂಕಿನ ಗುತ್ತಲ ಸಮೀಪದ ಮೈಲಾರದಲ್ಲಿ ನಡೆಯುವ ಈ ...ಲ್ಲಿ ಜನ ತುಂಗಭದ್ರಾ ನದಿಯಲ್ಲಿ ಮುಳುಗುತ್ತಾರೆ. ತುಂಗಭದ್ರೆಗೆ ...ರೆಯದೇ ಆದ ವೈಭೋಗವಿದೆ. ಭದ್ರಾ ನದಿಯ ಟೀ ಕಷಾಯದಂತಹ ...ಎಲ್ಲಿ ಹೋಯ್ತು ಎನ್ನುವಂತಾಗುತ್ತದೆ. ಹಾಗೆ ನೋಡಿದರೆ ತುಂಗಭದ್ರೆ ...ಶಾಲವಾಗಿ ಹರಿಯುತ್ತಾಳೆ. ಮೈಲಾರದ ಜಾತ್ರೆಗಾಗಿ ಭದ್ರಾ ಡ್ಯಾಂನಿಂದ ...ಬಿಡುತ್ತಾರಂತೆ. ಈ ಬಾರಿ ಬಿಟ್ಟಂತೆ ಕಾಣಲಿಲ್ಲ, ಏಕೆಂದರೆ ಪ್ರವಾಹದ ...ಳು ಇನ್ನು ಬತ್ತಿರಲಿಲ್ಲ, ನದಿ ತಟದಲ್ಲಿ ಜನ ಇರುವೆಗಳಂತೆ ಮುತ್ತಿದ್ದರು.

...ದೆ ಮೈಲಾರದ ಕಾರಣಿಕದ ಸಂದೇಶವನ್ನು ಮದರಾಸಿನ ಗ್ಯಾಜೆಟಿಯರ್ ...ಮುತ್ತಿತ್ತೆಂದು ಎಂ.ಪಿ. ಪ್ರಕಾಶ್ ಹೇಳಿದ್ದರು. ದೇಶದ ವರ್ಷ ಭವಿಷ್ಯವೇ ...ರಣಿಕದಲ್ಲಿ ಅಡಕವಾಗಿದೆ ಎಂದು ಭಾವಿಸಿರುವ ಭಕ್ತಾದಿಗಳು ಆ ... ಬರುವ ವೇಳೆ ಉಸಿರು ಬಿಗಿಹಿಡಿದು ನಿಂತಿರುತ್ತಾರೆ. ಐದಾರು ಲಕ್ಷ ...ಶಬ್ದವಾಗಿರುವ ಕ್ಷಣವೇ ಭಯ ಹುಟ್ಟಿಸುವಂತದ್ದು. ಮೂರ್‍ನಾಲ್ಕು ದಿನ ...ಉಪವಾಸವಿದ್ದು ಕಾರಣಿಕ ಹೇಳಲು ತಯಾರಾದ ಗೊರವಪ್ಪ ಬಿಲ್ಲಿನಂತಹ ...ರಿ ಒಂದೇ ಒಂದು ವಾಕ್ಯ ನುಡಿದು ಅಲ್ಲಿಂದ ಅನಾಮತ್ತು ಬೀಳುತ್ತಾನೆ. ...ರಿ ಆತನ ಬಾಯಿಂದ ಬಂದ ಮಾತು "ಮುತ್ತಿನ ರಾಶಿ ಕಷ್ಟಪಟ್ಟತಲೇ ..."

... ಮಾತಿನ ತಲೆಬುಡ ನನಗರ್ಥವಾಗಲಿಲ್ಲ, ಆದರೆ ಭಕ್ತಾಧಿಗಳು ಅರ್ಥ ...ಮಾಡಿಕೊಂಡಿದ್ದರು. ದವಸ ಧಾನ್ಯಗಳ ಬೆಲೆ ಮುಗಿಲು ಮುಟ್ಟಿರುವುದರಿಂದ ... ಇನ್ನೂ ತುಟ್ಟಿಯಾಗುವ ಕಡು ಕಷ್ಟದ ಅರಿವಾಗಿತ್ತು, ಆದರೂ ...ಐ ವರ್ಷದಿಂದ ಈ ಕಾರಣಿಕ ಕೇಳಲು ಬರುವ ಭಕ್ತರು ಎಚ್ಚೆತ್ತುಕೊಂಡ ...ದರಣೆ ಸಿಕ್ಕಲಾರವು. ಬದಲಿಗೆ ಬಂದದ್ದನ್ನು ಅನುಭವಿಸಲು ಸಿದ್ಧರಾದವರಂತೆ ...ಹೊರಡತೊಡಗಿದರು.

...ಗೆ ನೋಡಿದರೆ ಜನಪ್ರತಿನಿಧಿಗಳಿಗೂ ಈ ಜನಸ್ತೋಮಕ್ಕೂ ಸಂಬಂಧವೇ ...ಲ್ಲ. ಬಳ್ಳಾರಿ ಕಡೆಯ ದಿಢೀರ್ ರಾಜಕಾರಣಿಗಳ ಫ್ಲೆಕ್ಸ್ ಬಿಟ್ಟರೆ ಅವರ ...ಲಿಲ್ಲ. ಈ ಹಿಂದೆ ಎಂ.ಪಿ. ಪ್ರಕಾಶ್ ಮಂತ್ರಿಯಾಗಿದ್ದಾಗ ಈ ಕಾರಣಿಕದಲ್ಲಿ ...ಹಿಸಿ ನೀರು ನಿಡಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದರಂತೆ.

...ತಿವರ್ಷ ಆರು ಲಕ್ಷ ಜನ ಒಂದೆಡೆ ಸೇರುವುದು ಕರ್ನಾಟಕದಲ್ಲಿ ... ಅಪರೂಪದ ಘಟನೆಯಾಗಬೇಕಿತ್ತು, ಆದರೆ ಮಾಧ್ಯಮದವರೆಲ್ಲಾ ..., ಸುಬ್ರಹ್ಮಣ್ಯ, ಧರ್ಮಸ್ಥಳದ ಭಕ್ತರಾದ ಕಾರಣಕ್ಕೆ ಮೈಲಾರವನ್ನು ...ವರೆಗೂ ಮರೆತುಬಿಟ್ಟಿದ್ದಾರೆ. ಆ ಕಾರಣಕ್ಕೆ ಇಲ್ಲಿ ಯಾವ ಸವಲತ್ತುಗಳೂ ...

...ಣೆಬೆನ್ನೂರು ಸಮೀಪದ ದೇವರಗುಡ್ಡಕ್ಕೆ ಬರುವ ಭಕ್ತರು ಇಲ್ಲಿಂದ ...ತು ಮೈಲು ದೂರದ ಮೈಲಾರಕ್ಕೂ ಹೋಗುವುದರಿಂದ ಹುಣ್ಣಿಮೆಯ ...ನ ಹೊರಡುತ್ತಾರೆ. ಹೋಗಲು ಸರಿಯಾದ ರಸ್ತೆಯಿಲ್ಲ, ನಾನು ಈ ...ಗುಡ್ಡದಲ್ಲಿ ನೋಡಿದ್ದೇನೆಂದರೆ ಗುಡ್ಡದ ಸುತ್ತ ಬಳ್ಳಾರಿ ಜಾಲಿ, ಮಲಮೂತ್ರ ...ಮೆಣಸಿನಕಾಯಿ ಬೊಂಡ ಹಾಗು ಮಂಡಕ್ಕಿ ಉಸ್ಲಿ, ಹಾಗೆಯೇ ಇಲ್ಲಿನ ... ಈವರೆಗೆ ಎಲ್ಲೂ ನೋಡಿರಲಿಲ್ಲ.

...ಜ್ಞಾನ, ಬಡತನ, ಮೂಢನಂಬಿಕೆ ಇದನ್ನೇ ನೂರಾರು ವರ್ಷದಿಂದ ...ಡಿಸಿಕೊಂಡಂತಿದ್ದ ಅವರು ತಮ್ಮ ದೈವ ಮತ್ತು ನಂಬಿಕೆಯ ವಿಷಯದಲ್ಲಿ ... ಬದಲಾವಣೆ ಕಂಡಿದ್ದರೆ ಈ ಗುಡ್ಡದ ಸುತ್ತ ಬೇವು, ಹುಣಸೆ ತಲೆ ...ದ್ದವು. ಕೂಳಿತು ನಾರುವ ತಿಪ್ಪೆಗಳ ಬದಲು ಭಕ್ತರು ವಿಶ್ರಮಿಸಿಕೊಳ್ಳುವ ...ಇರುತ್ತಿದ್ದವು. ಇಲ್ಲಿನ ...ರು ಮತ್ತವರ ಭಕ್ತಿಯನ್ನು ಸೂಕ್ಷ್ಮವಾಗಿ ...ಸುತ್ತಾ ನಾನು ಕೆಲವು ಶತ ...ನವೇ ಹಿಂದಕ್ಕೆ ಹೋಗಿಬಿಟ್ಟೆ.

...ವ ಕಾರಣಕ್ಕೂ, ಈ ಜನರಿಗೂ, ಹಂಪೆಯಲ್ಲಿ ನಡೆಯುತ್ತಿದ್ದ ...ರಾಯನ ಪಟ್ಟಾಭಿಷೇಕದ ಜಾತ್ರೆಗೂ ಕಿಂಚಿತ್ ಸಂಬಂಧವೇ ಕಾಣಲಿಲ್ಲ. ...ಇವರಿಗೂ, ಪ್ರವಾಸದ ಸಂತ್ರಸ್ತರಿಗೂ ನೇರ ಸಂಬಂಧ ಕಾಣಿಸಿತು. ...ಇಲ್ಲಿಗೆ ಬಂದ ಭಕ್ತಾದಿಗಳು ಯಾರನ್ನೂ ದೃಷ್ಟಿಯಿಟ್ಟು ನೋಡುತ್ತಿರಲಿಲ್ಲ ...ಕೋಟಿ ಎಂದು ಜಪಿಸುತ್ತ ಹೋಗುತ್ತಿದ್ದವರ ಲೋಕವೇ ಬೇರೆಯಾಗಿ

● ಬಿ. ಚಂದ್ರೇಗೌಡ


▶▶▶ 2

ಈ 48ನೇ ಪರಿಚ್ಛೇದ:

"The State shall endeavour to organise agriculture and animal husbandry on modern and scientific lines and shall in particular take steps for preserving and improving the breeds of cattle and prohibit the slaughter of cow and other useful cattle, specially milch and draught cattle and their young stock."

ಎಂದಷ್ಟೇ ಹೇಳುತ್ತದೆ. ಅಂದರೆ ದೇಶದ ಕೃಷಿಕ್ಷೇತ್ರ ಮತ್ತು ಪಶು ಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಪುನರ್‌ಸಂಘಟಿಸಬೇಕು ಹಾಗೂ ಪ್ರಭುತ್ವವು ಕೃಷಿಸೇವೆಯಲ್ಲಿ ಮತ್ತು ಹೈನುಗಾರಿಕೆಯಲ್ಲಿ ಬಳಸಲಾಗುವ ಜಾನುವಾರುಗಳಾದ ಹಸು, ದನ, ಕೋಣ, ಎಮ್ಮೆಯಂಥ ರಾಸುಗಳ ಮತ್ತವುಗಳ ಕರುಗಳ ಹತ್ಯೆ ತಡೆಗಟ್ಟಲು ಮತ್ತು ರಕ್ಷಿಸಲು ಕಾನೂನನ್ನು ರಚಿಸಬೇಕು. ಹಾಗೆಯೇ ಇದರಲ್ಲಿ ಸ್ಪಷ್ಟವಾಗಿ ಕಾಣುವಂತೆ ಈ ಕಲಮಿನಲ್ಲಿ ಗೋಹತ್ಯಾ ನಿಷೇಧವನ್ನು ಸಾರಾಸಗಟಾಗಿ ಮಾಡಬೇಕೆಂಬ ಅಥವಾ ಗೋವು ಮಾತ್ರ ಪವಿತ್ರವೆಂಬ ದೃಷ್ಟಿಯಾಗಲೀ ಇಲ್ಲ.

ಅದೇರೀತಿ 1948ರಲ್ಲಿ ರಚಿಸಲಾದ ದಾತಾರ್ ಸಮಿತಿ 'ಸಂಪೂರ್ಣ ಗೋಹತ್ಯಾ ನಿಷೇಧ ಅಪೇಕ್ಷಣೀಯವಾದರೂ ಅದನ್ನು ಎರಡು ಹಂತದಲ್ಲಿ ಮಾಡಬೇಕು. ಮೊದಲ ಹಂತದಲ್ಲಿ 14 ವರ್ಷಕ್ಕೆ ಮೇಲ್ಪಟ್ಟ ಹಸುಗಳನ್ನು ಒಳಗೊಂಡಂತೆ ಇತರ ಜಾನುವಾರುಗಳ ಹತ್ಯೆಗೆ ಅವಕಾಶ ನೀಡಬೇಕು. ಆ ನಂತರ ಕ್ರಮೇಣ, ಸಾಧ್ಯವಾದರೆ ಎರಡು ವರ್ಷಗಳಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧ ಜಾರಿಗೆ ತರಬೇಕು' ಎಂದು ಶಿಫಾರಸ್ಸು ಮಾಡಿತ್ತು. ಅದರಂತೆ ಮೊದಲ ಹಂತದ ನಿಷೇಧ ಅಂದರೆ 14 ವರ್ಷಗಳಾಗದ ಗೋವುಗಳ ಹತ್ಯೆಯನ್ನು ನಿಷೇಧಿಸುವ ಕಾನೂನನ್ನು ಕರ್ನಾಟಕವನ್ನೂ ಒಳಗೊಂಡಂತೆ ಹಲವು ರಾಜ್ಯಗಳು ಜಾರಿಗೆ ತಂದವು.



ಗೋಹತ್ಯೆಗೆ ನಿಷೇಧ ನರಹತ್ಯೆಗೆ ಪರವಾನಗಿ!

ಆದರೆ 1954ರಲ್ಲಿ ಕೇಂದ್ರ ಕೃಷಿ ಇಲಾಖೆಯ ಆಯುಕ್ತ ನಂದಾರವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿ 'ಭಾರತದಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧ ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಭಾರತದಲ್ಲಿ ಹಸಿರು ಹುಲ್ಲು ಮತ್ತು ಪಶು ಆಹಾರದ ಕೊರತೆ ಇರುವುದರಿಂದ ಶೇ.40ರಷ್ಟು ಜಾನುವಾರುಗಳನ್ನು ಮಾತ್ರ ಸಾಕಲು ಸಾಧ್ಯ. ಉಳಿದ ಶೇ. 60 ರಾಸುಗಳನ್ನು ಗೊಡ್ಡು ಮಾಡಬೇಕು' ಎಂದು ಸಲಹೆ ನೀಡಿತ್ತು. ಈ ವರದಿ ನೀಡಿದ್ದು ಮುಸ್ಲಿಮರೂ ಅಲ್ಲ, ಕೃಷಿಯ ಬಗ್ಗೆ ಜ್ಞಾನ ಇಲ್ಲದವರೂ ಅಲ್ಲ ಎಂಬುದನ್ನು ಇಲ್ಲಿ ಒತ್ತಿಹೇಳಲೇ ಬೇಕು. 1976ರಲ್ಲಿ ರಾಷ್ಟ್ರೀಯ ಕೃಷಿ ಆಯೋಗವು ನೀಡಿದ್ದ ವರದಿಯಲ್ಲೂ ಎಮ್ಮೆ ಹಾಗೂ ಇತರ ಹಾಲು ನೀಡುವ ಜಾನುವಾರುಗಳ ಗುಣಮಟ್ಟವನ್ನು ಹೆಚ್ಚಿಸಬೇಕು ಮತ್ತು ಎಮ್ಮೆಗಳನ್ನು ಕೇವಲ ಹಾಲಿಗಾಗಿ ಮಾತ್ರವಲ್ಲದೆ ಉತ್ತಮ ಮಾಂಸ ಪಡೆಯುವ ದೃಷ್ಟಿಯಿಂದಲೂ ಸಾಕಾಣಿಕೆಗೆ ಉತ್ತೇಜನ ನೀಡಬೇಕೆಂದು ವರದಿ ನೀಡಿತ್ತು. ಇದಲ್ಲದೆ ಮೊದಲನೆ ಪಂಚವಾರ್ಷಿಕ ಯೋಜನೆಯಿಂದ ಹಿಡಿದು 11ನೇ ಪಂಚವಾರ್ಷಿಕ ಯೋಜನೆಯವರೆಗೆ ಎಲ್ಲಾ ಯೋಜನೆಗಳು ಜೀವಂತವಿರುವ ಎಲ್ಲಾ ಜಾನುವಾರುಗಳನ್ನು ಸಾಕುವಷ್ಟು ಮೇವು ಹಾಗೂ ಪಶು ಆಹಾರವಿಲ್ಲವೆಂದು ಸ್ಪಷ್ಟವಾಗಿಯೇ ಹೇಳುತ್ತಲೇ ಬಂದಿವೆ.

ಇಂದು ಗೋಹತ್ಯೆಯಿಂದ ಜಾನುವಾರುಗಳ ಸಂಖ್ಯೆ ಇಳಿಯುತ್ತದೆಯೆಂದು ಸಂಘಪರಿವಾರ ಬೊಬ್ಬೆ ಹಾಕುತ್ತಿದೆಯಾದರೂ 1977ರಲ್ಲಿ 17 ಕೋಟಿಯಷ್ಟಿದ್ದ ಜಾನುವಾರುಗಳ ಸಂಖ್ಯೆ ಈಗ 20 ಕೋಟಿಯಷ್ಟಾಗಿದೆಯೆಂದು ಸರ್ಕಾರಿ ಅಂಕಿಅಂಶಗಳೇ ಹೇಳುತ್ತಿವೆ. ಆದರೆ ಪಶು ಸಂರಕ್ಷಣೆಗೆ ನೀಡುತ್ತಿದ್ದ ಹಣ ಮಾತ್ರ 9ನೇ ಯೋಜನೆಯಲ್ಲಿ ಯೋಜನಾ ವೆಚ್ಚದ ಶೇ.1.1ರಷ್ಟಿದ್ದದ್ದು 10ನೇ ಆಯೋಗದಲ್ಲಿ ಶೇ.0.6ಕ್ಕೆ ಇಳಿದಿದೆ. ಹೀಗಾಗಿ ಪಶು ಸಾಕಣೆ ಎಂಬುದು ರೈತನ ಪಾಲಿಗೆ ಮತ್ತೊಂದು ನೇಣುಕುಣಿಕೆಯೇ ಆಗುತ್ತಿದೆ.

1950ರಿಂದೀಚೆಗೆ ದೇಶದ ಹಲವಾರು ರಾಜ್ಯಗಳು ಉಪಯುಕ್ತ ಗೋವು, ಜಾನುವಾರುಗಳು ಮತ್ತು ಅವುಗಳ ಕರುಗಳನ್ನು ರಕ್ಷಿಸುವ ಕಾನೂನನ್ನು ಜಾರಿಗೆ ತಂದಿವೆ. ದೇಶದಲ್ಲಿ ಎಲ್ಲೂ ಸಂಪೂರ್ಣವಾಗಿ ಗೋಹತ್ಯಾ ನಿಷೇಧದ ಕಾನೂನು ಜಾರಿಗೆ ಬಂದಿಲ್ಲ. ಏಕೆಂದರೆ ಅಂಥಾ ಕಾನೂನು ಗೋಮಾಂಸ ತಿನ್ನುವವರನ್ನಷ್ಟೇ ಅಲ್ಲದೆ ಕೃಷಿ ಬಿಕ್ಕಟ್ಟಿನಿಂದ ಕಂಗೆಟ್ಟಿರುವ ರೈತರನ್ನು ಇನ್ನಷ್ಟು ಸಂಕಷ್ಟಕ್ಕೆ ಈಡು ಮಾಡುತ್ತದೆ. ಅಲ್ಲದೆ ಸರ್ಕಾರ ರೈತನಿಗೆ ನೀಡುತ್ತಿದ್ದ ಎಲ್ಲಾ ಸಹಾಯ ಮತ್ತು ಸಹಕಾರಗಳನ್ನು ಹಿಂತೆಗೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅನುಪಯುಕ್ತ ಜಾನುವಾರುಗಳ ಕಡ್ಡಾಯ ರಕ್ಷಣೆಯು ರೈತನನ್ನು ಇನ್ನಷ್ಟು ಆತ್ಮಹತ್ಯೆ ಕಡೆಗೆ ದೂಡುತ್ತದೆ.

ಆದರೆ ಅಲ್ಪಸಂಖ್ಯಾತ ದ್ವೇಷವನ್ನೇ ತಮ್ಮ ರಾಜಕೀಯದ ತಿರುಳನ್ನಾಗಿ ಮಾಡಿಕೊಂಡಿರುವ ಹಿಂದೂತ್ವವಾದಿಗಳು ಈ ದೇಶದ ಇತಿಹಾಸವನ್ನು, ಜನತೆಯ ನಂಬಿಕೆ, ವಿಶ್ವಾಸ ಮತ್ತು ಪುರಾಣಗಳನ್ನು ವಿಕೃತವಾಗಿ ತಿರುಚುತ್ತಾ ಬಂದಿದ್ದಾರೆ. ಈ ದೇಶದಲ್ಲಿ ಗೋಮಾಂಸ ಭಕ್ಷಣೆ ಪ್ರಾರಂಭವಾಗಿದ್ದೇ ಮುಸ್ಲಿಂ ದೊರೆಗಳ ದಾಳಿಯ ನಂತರ ಎಂದು ಹೇಳುತ್ತಾ ಇತಿಹಾಸವನ್ನು ವಿಕೃತಗೊಳಿಸುತ್ತಿರುವ ಈ ಹಿಂದೂತ್ವವಾದಿಗಳು ಈ ದೇಶದಲ್ಲಿ ಬುದ್ಧಧರ್ಮ ಅಸ್ತಿತ್ವಕ್ಕೆ ಬರುವ ಮುನ್ನ ಆರ್ಯರು ಎಂದು ಹೇಳಿಕೊಳ್ಳುವ ಎಲ್ಲರೂ ಗೋಮಾಂಸ ಭಕ್ಷಕರೇ ಆಗಿದ್ದರೆಂಬುದನ್ನು ಮರೆಮಾಚುತ್ತಿದ್ದಾರೆ. ಮನುಸ್ಮೃತಿ, ತೈತ್ತರೀಯ ಬ್ರಾಹ್ಮಣ, ಹಲವು ವೇದಸ್ಮೃತಿಗಳೂ ಸಹ ಗೋಮಾಂಸ ಭಕ್ಷಣೆಯನ್ನು ನಿಷೇಧಿಸಿರಲಿಲ್ಲ ಎಂಬುದನ್ನು ಸಹ ಮುಚ್ಚಿಡುತ್ತಿದ್ದಾರೆ. ತಮ್ಮ ಶ್ರೇಣೀಕೃತ ಸಾಮಾಜಿಕ ನೀತಿಗೆ ವಿರುದ್ಧವಾಗಿದ್ದ ಬೌದ್ಧ ಧರ್ಮದದಿಂದ ಜನತೆಯನ್ನು ಆಕರ್ಷಿಸಲು ಅವರಿಗೆ ಗೋಮಾಂಸ ಭಕ್ಷಣೆಯನ್ನೇ ಪ್ರಚಾರ ಮಾಡುತ್ತಿದ್ದ ಬ್ರಾಹ್ಮಣಧರ್ಮವು ಗೋಮಾಂಸವನ್ನೇ ಅಲ್ಲದೆ ಮಾಂಸಾಹಾರವನ್ನೇ ತ್ಯಜಿಸಿತೆಂಬುದನ್ನು ಡಾ. ಅಂಬೇಡ್ಕರ್‌ರವರು ತಮ್ಮ **"BRAHMIN AND THE DEAD COW"** ಎಂಬ ಲೇಖನದಲ್ಲಿ ಸ್ಪಷ್ಟಪಡಿಸುತ್ತಾರೆ. ಹಾಗೆಯೇ ಗೋಮಾಂಸ ಭಕ್ಷಣೆಯನ್ನು ಮುಂದುವರೆಸಿದ್ದರಿಂದಲೇ ದಲಿತರನ್ನು ಹಿಂದೂ ಸಮಾಜ ಅಸ್ಪೃಶ್ಯರನ್ನಾಗಿ ಕಾಣಲು ಕಾರಣವಾಯಿತೆಂದು ವಾದಿಸುತ್ತಾರೆ. ಇಂದಿಗೂ ದಲಿತ, ಆದಿವಾಸಿ ಮತ್ತು ಶೂದ್ರ ಸಮುದಾಯಗಳಿಗೆ ಸುಲಭದಲ್ಲಿ ಸಿಗಬಹುದಾದ ಪೌಷ್ಠಿಕ ಆಹಾರ ಗೋಮಾಂಸವೇ ಆಗಿದೆ. ಈ ಎಲ್ಲಾ ಹಿನ್ನೆಲೆಯಿಂದಲೇ ಡಾ. ಅಂಬೇಡ್ಕರ್‌ರವರು ಗೋಹತ್ಯಾ ನಿಷೇಧವನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿ ಸೇರಿಸಬಾರದೆಂದೂ ಅಥವಾ ಗೋಮಾಂಸ ಭಕ್ಷಣೆಯನ್ನು ಹೀನಾಯವಾಗಿ ನೋಡಬಾರದೆಂದೂ ಬಲವಾಗಿ ವಾದಿಸಿದ್ದರು. ಆದರೂ ಗೃಹಮಂತ್ರಿ ವಿ.ಎಸ್.ಆಚಾರ್ಯ ಡಾ. ಅಂಬೇಡ್ಕರ್‌ರವರು ಗೋಹತ್ಯಾ ನಿಷೇಧದ ಪರವಾಗಿದ್ದರೆಂದು ಅಧಿಕೃತ ಹೇಳಿಕೆ ನೀಡುತ್ತಾ ಇತಿಹಾಸವನ್ನೇ ತಿರುಚುತ್ತಿದ್ದಾರೆ.

ಕರ್ನಾಟಕದಲ್ಲೂ ಉಪಯುಕ್ತ ಗೋವುಗಳ ರಕ್ಷಣೆ ಮಾಡುವ ಶಾಸನವೊಂದು 1964ರಲ್ಲಿ ಜಾರಿಗೆ ಬಂದಿದೆ. ಈ **THE KARNATAKA PREVENTION OF COW SLAUGHTER AND CATTLE PRESERVATION ACT, 1964** ಪ್ರಕಾರ ಗೋಹತ್ಯೆಯನ್ನು ತಡೆಗಟ್ಟುವ ಬಗ್ಗೆ ಅಸ್ಪಷ್ಟವಾದ ಆದೇಶವಿದ್ದರೂ ಕಾಯಿದೆಯ 5 (1) ಮತ್ತು (2) ನೇ ಕಲಮುಗಳಲ್ಲಿ 12 ವರ್ಷಕ್ಕೆ ಮೇಲ್ಪಟ್ಟ ರಾಸುಗಳನ್ನು ಹತ್ಯೆ ಮಾಡಲು ಪರವಾನಗಿ ನೀಡಲಾಗಿದೆ. ಅದಕ್ಕೆ ಪಶುವೈದ್ಯರ ಪರವಾನಗಿಯಷ್ಟೇ ಬೇಕಾಗುತ್ತದೆ. ಈವರೆಗೆ ಕರ್ನಾಟಕದಲ್ಲಿರುವ ಕಸಾಯಿಖಾನೆಗಳೂ ಸಹ ಇದೇ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿವೆ. ಸಾಮಾನ್ಯವಾಗಿ ಸರ್ಕಾರದಿಂದ ಮಾನ್ಯತೆ ಪಡೆದ ಕಸಾಯಿಖಾನೆಗಳಲ್ಲಿ ವ್ಯವಹಾರದಲ್ಲಿರುವ ವ್ಯಾಪಾರಿಗಳ್ಯಾರೂ ಕರುಗಳನ್ನಾಗಲಿ, 12 ವರ್ಷ ವಯಸ್ಸಾಗದ ರಾಸುಗಳನ್ನಾಗಲಿ ಕೊಲ್ಲುವುದಿಲ್ಲ. ಎಲ್ಲಾ ವ್ಯವಹಾರಗಳಲ್ಲಿ ಇರುವಂತೆ ಅಲ್ಲಿಯೂ ಕೆಲವರು ಈ ನಿಯಮವನ್ನು ಉಲ್ಲಂಘಿಸುತ್ತಾರಾದರೂ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈ ಕಾಯಿದೆಯಲ್ಲಿ ಅವಕಾಶವಿದೆ.

ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆಹಾರ ಸಂಸ್ಕೃತಿಯ ಮೇಲೂ ದ್ವೇಷ ರಾಜಕಾರಣ ಮಾಡುತ್ತಾ ಗೋಹತ್ಯೆಯನ್ನಿರಲಿ ಗೋಮಾಂಸ ಭಕ್ಷಣೆಯನ್ನೇ ದೇಶದ್ರೋಹದಷ್ಟು ಅಪರಾಧ ಎಂದು ಬಣ್ಣಿಸುತ್ತಿದೆ. ಅದರ ಮೂಲಕ ಅಲ್ಪಸಂಖ್ಯಾತರ ಮೇಲೆ ಮಾತ್ರವಲ್ಲ ದಲಿತ ಮತ್ತು ಶೂದ್ರರ ಆಹಾರ ಸಂಸ್ಕೃತಿಯ ಮೇಲೂ ಸಾಂಸ್ಕೃತಿಕ ದಾಳಿಯನ್ನು ನಡೆಸುತ್ತಿದೆ.

The Karnataka Prevention Of Cow Slaughter And Cattle Preservation (Amendment) Bill, 2009 ಎಂಬ ಈ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿರುವ ತಿದ್ದುಪಡಿಯ ಪ್ರಕಾರ ಸರ್ಕಾರ ಯಾವುದೇ ವ್ಯಕ್ತಿಯನ್ನು ಈ ಕಾನೂನನ್ನು ಜಾರಿಗೆ ತರಲು "ಅಧಿಕೃತ ವ್ಯಕ್ತಿ"ಯನ್ನಾಗಿ ನೇಮಿಸಬಹುದು. ಆ ವ್ಯಕ್ತಿಗೆ ಎಲ್ಲಿಯಾದರೂ ಈ ಕಾನೂನು ಉಲ್ಲಂಘನೆಯಾಗುತ್ತಿದೆ ಎಂಬ ಮಾಹಿತಿ ದೊರಕಿದರೆ ಅಂಥ "ಜಾಗವನ್ನು ತಪಾಸಣೆ ಮಾಡುವ", "ಆ ಜಾನುವಾರುಗಳನ್ನು ಮತ್ತು ಸಾಗಾಟಕ್ಕೆ ಬಳಸುತ್ತಿದ್ದ ವಾಹನವನ್ನು ಜಪ್ತಿ ಮಾಡುವ" ಅಧಿಕಾರವನ್ನು ನೀಡುತ್ತಿದೆ. ಅಲ್ಲದೆ ಜಪ್ತಿಯಾದ ವಾಹನವನ್ನು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಹರಾಜು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗೆ ನೀಡುತ್ತದೆ. ಇದರ ವಿರುದ್ಧ ಜಿಲ್ಲಾ ನ್ಯಾಯಾಲಯದಾಚೆಗೆ ದಾವೆಯನ್ನು ಹೂಡುವ ಅವಕಾಶವನ್ನೂ ತಿದ್ದುಪಡಿಯು ನಿರಾಕರಿಸುತ್ತದೆ.

ಇವಿಷ್ಟೂ ಸರ್ಕಾರ ಮುದ್ರಿತ ಮಾಹಿತಿಯಲ್ಲಿ ಸೂಚಿಸಿರುವ ತಿದ್ದುಪಡಿಗಳು. ಆದರೆ ಮಂತ್ರಿಗಳು ತಾವು ತರಲಿರುವ ತಿದ್ದುಪಡಿಯು ಗೋಹತ್ಯೆಯನ್ನು ಮಾತ್ರವಲ್ಲ ಗೋಮಾಂಸ ಭಕ್ಷಣೆಯನ್ನೇ ಅಪರಾಧವನ್ನಾಗಿಸುತ್ತದೆ ಎಂದು ಘೋಷಿಸಿದ್ದಾರೆ. ಭಜರಂಗದಳವನ್ನು ಅಧಿಕೃತ "ಗೋ ಸೇವಾ ಸಮಿತಿ"ಗಳನ್ನಾಗಿ ರಚಿಸಿ ಅಧಿಕಾರ ಕೊಡುವ ಮಾತನ್ನಾಡುತ್ತಿದ್ದಾರೆ. ಅಷ್ಟು ಮಾತ್ರವಲ್ಲದೆ ಪತ್ರಿಕಾ ವರದಿಗಳು ಹೇಳುವಂತೆ ಇಂಥಾ ನಿಯಮಗಳ ಉಲ್ಲಂಘನೆ ಮಾಡುವ ಮೂಲಕ ಘಟಿಸಲಾಗುವ ಅಪರಾಧಕ್ಕೆ 25,000 ರೂ. ಇಂದ 50,010 ರೂವರೆಗೆ ದಂಡ ಮತ್ತು 3-7 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸುವ ಪ್ರಸ್ತಾಪವಿದೆ (ಡೆಕ್ಕನ್ ಹೆರಾಲ್ಡ್, ಡಿಸೆಂಬರ್ 13, 2009).

ಅಂದರೆ ಗೋಹತ್ಯೆ ಮಾತ್ರವಲ್ಲ ಗೋ ಸಾಗಾಟ ಮತ್ತು ಗೋಮಾಂಸ ಭಕ್ಷಣೆಯೂ ಸಹ ದೇಶದ್ರೋಹದಂಥ ಅಪರಾಧವಾಗಿಬಿಡುತ್ತದೆ. ಹಾಗಾದಲ್ಲಿ ಅದು ಇಡೀ ಸಮಾಜದ ಮೇಲೆ ಸಂಘಪರಿವಾರಕ್ಕೆ ಅಮಿತವಾದ ಅಧಿಕಾರವನ್ನು ಕೊಟ್ಟು ಕಂಡರಿಯದ ಅರಾಜಕತೆಯನ್ನು ಉಂಟುಮಾಡುತ್ತದೆ. ಹೀಗಾಗಿ ಇದು ಕೇವಲ ಮುಸ್ಲಿಮರ ವಿರುದ್ಧದ ಕಾಯಿದೆ ಮಾತ್ರವಲ್ಲ, ಗೋಮಾಂಸ ಭಕ್ಷಣೆಯನ್ನು ಮಾಡುವ ದಲಿತರ, ಶೂದ್ರರ ಎಲ್ಲಾ ಅಬ್ರಾಹ್ಮಣರನ್ನು ಅಪರಾಧಿಗಳನ್ನಾಗಿ ಮಾಡುವ ಕಾಯಿದೆಯಾಗಿದೆ.

ಗೋವನ್ನು ಪವಿತ್ರ ಎಂದು ಭಾವಿಸುವ ಸಮುದಾಯದ ಭಾವನೆಗಳೂ ಗೌರವಾರ್ಹವೇ. ಆದರೆ ಈ ತಿದ್ದುಪಡಿಗಳು ಅವರ ಭಾವನೆಗಳ ದುರುಪಯೋಗ ಮಾಡಿಕೊಂಡು ದಲಿತ, ಶೂದ್ರ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಭೌತಿಕ ಮತ್ತು ಸಾಂಸ್ಕೃತಿಕ ಹಲ್ಲೆಯನ್ನು ಮಾಡುವ ಉದ್ದೇಶ ಹೊಂದಿದೆ. ಆದ್ದರಿಂದ ಗೋಮಾಂಸ ಭಕ್ಷಣೆ ಮಾಡುವವರೂ, ಮಾಡದವರೂ, ಗೋವನ್ನು ಪವಿತ್ರ ಎಂದು ಭಾವಿಸುವವರು, ಮನುಷ್ಯರ ವಿವಿಧ ಆಹಾರದ ಸಂಸ್ಕೃತಿಗಳೂ ಮುಖ್ಯ ಎಂದು ನಂಬಿರುವವರು ಎಲ್ಲರೂ ಈ ತಿದ್ದುಪಡಿಗಳನ್ನು ವಿರೋಧಿಸಲೇ ಬೇಕಿದೆ.

ಏಕೆಂದರೆ ಇದು ಗೋಹತ್ಯೆಯನ್ನು ನಿಷೇಧಿಸಿ ನರಹತ್ಯೆಯನ್ನು ಪ್ರಚೋದಿಸುವ ಫ್ಯಾಸಿಸ್ಟ್ ಕಾಯಿದೆಯಾಗಿದೆ. ●

ವೈಕುಂಠರಾಜು ನೆನಪಿನಲ್ಲಿ....

ವೈಕುಂಠ ರಾಜು ಅವರ ಬದುಕಿನ ಕೊನೆಯ ಎರಡು ದಶಕಗಳು ದುರ್ಬಲವಾಗಿದ್ದವು. ಆದರೆ ಆ ಕಾರಣಕ್ಕೆ ಅವರ ಇನ್ನುಳಿದ ಜೀವನ ಹಾಗೂ ಕೊಡುಗೆಗಳ ಮಹತ್ವ ಕಡಿಮೆಯಾಗುವುದಿಲ್ಲ. ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಗೆ ಒಂದು ವ್ಯಕ್ತಿತ್ವ ಬಂದದ್ದೇ ವೈಕುಂಠರಾಜರ ಪ್ರತಿಭೆಯಿಂದ. ಹೊಸ ತಲೆಮಾರಿನ ನೂರಾರು ಬರಹಗಾರರಿಗೆ ಉತ್ತೇಜನ ನೀಡಿ ಬರೆಸಿದ ಅವರು ಆ ಮೂಲಕ ಲಕ್ಷಾಂತರ ಓದುಗರಲ್ಲೂ ಸಾಹಿತ್ಯಾಭಿರುಚಿಯ, ಸಾಮಾಜಿಕ ಮೌಲ್ಯಗಳ ಆಶಯ ರೂಪಿಸಿದವರು.


ಕನ್ನಡ ಪತ್ರಿಕೋದ್ಯಮಕ್ಕೇ ಒಂದು ಮೈಲಿಗಲ್ಲಾದ ಡಾ.ಬಿ.ವಿ.ವೈಕುಂಠರಾಜು ಅವರು ನಿಧನರಾಗಿದ್ದಾರೆ. ಈ ಸಂದರ್ಭದಲ್ಲಿ ಕೆಲವು ಮಾಧ್ಯಮಗಳು ಅವರ ಸಾಧನೆಗಳು ಏನೆಂದು ತಿಳಿಯದೆ ಅವರೊಬ್ಬ ಸಾಮಾನ್ಯ ಎಂಬಂತೆ ಅವರ ಬಗೆಗೆ ನಾಲ್ಕು ಮಾತು ಬರೆದವು. ಒಂದು ಜನಪ್ರಿಯ ದಿನಪತ್ರಿಕೆಯಂತೂ 'ವಾರ ಪತ್ರಿಕೆ'ಯಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರು ಎಂದು ಪ್ರಕಟಿಸಿತು. ಇಂತಹ ಅರೆಬರೆ ವಿಚಾರಗಳನ್ನು ಕಂಡು ವೈಕುಂಠರಾಜು ಅವರು ಹಲವು ಸಲ ಕೆಂಡಾಮಂಡಲವಾಗಿ ಅಬ್ಬರಿಸುತ್ತಿದ್ದರು. 'ಸರಿಯಾಗಿ ಯಾವ ವಿಚಾರವನ್ನೂ ತಿಳಿಯದೆ ಅದನ್ನು ಲೇಖನಿಗೆ ಇಳಿಸಬಾರದು' ಎನ್ನುವುದು ಅವರ ಅಭಿಪ್ರಾಯವಾಗಿತ್ತು. ತಮ್ಮ ಪತ್ರಿಕಾ ಕಚೇರಿಯಲ್ಲಿ ಯಾವ ವಿಚಾರದಲ್ಲಿ ಯಾರು ತಪ್ಪುತಪ್ಪಾಗಿ ಮಾಹಿತಿ ನೀಡಿದರೂ ತಕ್ಷಣವೇ ರಾದ್ಧಾಂತ ಮಾಡಿಬಿಡುತ್ತಿದ್ದರು. 'ಪತ್ರಿಕೆಯಂತಹ ಮಾಧ್ಯಮಗಳು ಎಚ್ಚರಿಕೆಯಿಂದಿರಬೇಕು' ಎಂದು ಸದಾ ಹಂಬಲಿಸುತ್ತಿದ್ದರು. ಪಿ.ಲಂಕೇಶ್ ಅವರಿಗೂ ಬಿ.ವಿ.ವೈಕುಂಠರಾಜು ಅವರಿಗೂ ಆ ದಿನಗಳಲ್ಲಿ ಒಂದು ರೀತಿಯ ಸಮರವಿತ್ತು. ಆದರೆ ಅದು ಆರೋಗ್ಯಪೂರ್ಣ ಮನಸ್ಸುಗಳ ನಡುವೆ ನಡೆಯಬಹುದಾದ ಶೀತಲ ಯುದ್ಧ. ಒಬ್ಬರನ್ನೊಬ್ಬರು ಬುದ್ಧಿಜೀವಿಗಳೆಂದು ಸಾರಿಕೊಳ್ಳುತ್ತಿದ್ದರು. ಒಳಗೊಳಗೇ ಒಬ್ಬರನ್ನೊಬ್ಬರು ಮೆಚ್ಚಿಕೊಳ್ಳುತ್ತಿದ್ದರು.

ನಮ್ಮ ನಡುವಿನ ಒಬ್ಬ ಪ್ರತಿಭಾವಂತ ಪತ್ರಕರ್ತ-ಲೇಖಕರಾದ ವೈಕುಂಠರಾಜು ಅವರು ಇನ್ನಿಲ್ಲವೆ? ಕೆಲವು ಸತ್ಯಗಳನ್ನು ಅರಗಿಸಿಕೊಳ್ಳುವುದು ಕಷ್ಟ. ಆದರೂ ವಾಸ್ತವ ಸಂಗತಿಯನ್ನು ನಂಬಲೇಬೇಕಲ್ಲ. ವೈಕುಂಠರಾಜು ಅವರು ಒಂದು ಮಾತು ಹೇಳುತ್ತಿದ್ದರು: 'ಒಬ್ಬ ಮನುಷ್ಯ ಸತ್ತಾಗ ಈ ಜನ ಅವನನ್ನು ಹಾಡಿಹೊಗಳುತ್ತಾರೆ. ಇಲ್ಲದ್ದನ್ನು ವೈಭವೀಕರಿಸುತ್ತಾರೆ' ಅಂತ. ಅವರ ಮಾತುಗಳಲ್ಲಿ ಸತ್ಯವಿದೆ. ಅವರ ಶಿಷ್ಯೆಯಾಗಿ ನಾನು ಅವರನ್ನು ವೈಭವೀಕರಿಸುವ ಕೆಲಸ ಮಾಡುವುದಿಲ್ಲ.

ವೈಕುಂಠರಾಜು ಅವರು ಬದುಕನ್ನು ಎಂದೂ ಸುಖವಾಗಿ ಕಳೆದುದ್ದಾಗಿ ಎಲ್ಲೂ ಹೇಳಿಕೊಂಡಿಲ್ಲ. ಏಕೆಂದರೆ ಅವರು ಬರೀ ಕಷ್ಟ, ನಷ್ಟ, ನೋವುಗಳನ್ನು ನುಂಗಿಯೇ ಸುಗಮವಲ್ಲದ ಪತ್ರಿಕೆಯ ಹಾದಿ ತುಳಿದವರು. ಏನೇ ಆಗಲಿ ಪತ್ರಿಕೆ ಸರಿಯಾದ ದಿನಾಂಕ ಹೊರಬರಬೇಕು. ಅದಕ್ಕಾಗಿ ಬಹಳವಾಗಿ ಕಳೆದುಕೊಂಡರು. ಪತ್ರಿಕೆ ಮುದ್ರಣ ಕಾಣುವುದು ಕಷ್ಟ ಎನಿಸಿದಕೂಡಲೇ ಮೊದಲು ಹಣದ ವ್ಯವಸ್ಥೆ ಮಾಡಲು ನೋಡುತ್ತಿದ್ದರು. ದಿನದಲ್ಲಿ ಸತತವಾಗಿ ಹದಿನಾಲ್ಕು ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಆ ದಿನಗಳಲ್ಲಿ ಅವರು ಕೈಬರಹದಲ್ಲೇ ಪುಟಗಟ್ಟಲೆ ಬರೆಯುತ್ತಿದ್ದರು. 'ವಾರಪತ್ರಿಕೆ'ಯ ಚುಚ್ಚುಮದ್ದು, ರಾಜಕೀಯ ಸ್ವಾರಸ್ಯ, ಸಂಪಾದಕರ ಡೈರಿ ಇತ್ಯಾದಿ ಜನಪ್ರಿಯ ಅಂಕಣಗಳಲ್ಲದೆ ಇತರ ಅನೇಕ ಲೇಖನಗಳನ್ನೂ ಒಂದೇ ಉತ್ಸಾಹದಲ್ಲಿ ಬರೆದು ಮುಗಿಸುತ್ತಿದ್ದರು. ಅವರ ಕೆಲಸ ನೋಡಿ ಅಚ್ಚರಿಯಾಗುತ್ತಿತ್ತು. ಒಂದು ಕೈಯಲ್ಲಿ ಸಿಗರೇಟ್ ಇಲ್ಲವೆ ಕಾಫೀ ಕಪ್ಪು ಸದಾ ಇರುತ್ತಿತ್ತು. ಅವರ ಕೊಠಡಿಯನ್ನು ಹೊಕ್ಕವರಿಗೆ ಸಿಗರೇಟಿನ ದಟ್ಟ ಹೊಗೆಯ ಸ್ವಾಗತ!

ಊಟ ತಿಂಡಿ ಮರೆತು ಪತ್ರಿಕೆ ಮುದ್ರಣಕ್ಕೆ ಹೋಗುವವರೆಗೂ ಕೆಲಸ ಮಾಡುತ್ತಲೇ ಇರುತ್ತಿದ್ದರು. (ಬಹುಶಃ ಅವರ ಬದುಕಿನ ಅರ್ಧ ಶತಮಾನ ಹೀಗೇ ಕಳೆದಿರಬೇಕು.) ಆ ವಾರದ ಪತ್ರಿಕೆ ಪ್ರಿಂಟಿಂಗ್‌ಗೆ ಹೋದ ಕೂಡಲೇ ಮುಂದಿನ ವಾರದ ತಯಾರಿ ಇರುತ್ತಿತ್ತು. ಅವರೆಂದೂ ಮೈಗಳ್ಳತನ ತೋರಿದವರಲ್ಲ, ಬೇಸರದ ಛಾಯೆ ಅಥವಾ ಉಡಾಫೆ ಎಂದೂ ಮಾಡಿದವರಲ್ಲ. ಅವರಲ್ಲಿ ಆ ಮಟ್ಟದ ಒಂದು ತತ್ವ ಸಿದ್ಧಾಂತವಿತ್ತು. ಹಾಗೆಯೇ ಅವರಲ್ಲಿ ಬಹಳ ನೇರ, ನಿಷ್ಠುರತನ ದಿಟ್ಟತನವಿತ್ತು. ಆಗ ಅವರಿಗೆ ಬರುತ್ತಿದ್ದ ಬೆದರಿಕೆಯ ಕರೆಗಳಿಗಂತೂ ಲೆಕ್ಕವಿಲ್ಲ. ಆದರೆ ಅದಕ್ಕೆ ಅವರೆಂದೂ ಹೆದರುತ್ತಿರಲಿಲ್ಲ. ಬೆದರಿಕೆಯ ಕರೆ ಮಾಡಿದವರಿಗೇ 'ಧೈರ್ಯವಿದ್ದರೆ ಎದುರಿಗೆ ಬಾರೊ...' ಎಂದು ಸವಾಲು ಹಾಕುತ್ತಿದ್ದರು.

ಅವರ ಕೆಲವು ಹಠ, ಖಂಡಿತವಾದಿತನ, ವಿತಂಡವಾದದ ಮಾತುಗಳು ಅನೇಕರಿಗೆ ಹಿಡಿಸುತ್ತಿರಲಿಲ್ಲ. ಬಹಳ ಬೇಗ ನಿಷ್ಠುರಕ್ಕೆ ಒಳಗಾಗುತ್ತಿದ್ದರು. ಅವರಿಗೆ ಸರಿ ಎನಿಸಿಬಿಟ್ಟರೆ ಯಾರು-ಏನು ಎಂದೂ ವಿಚಾರ ಮಾಡದೆ ತಿರುಗಿ ಬೀಳುತ್ತಿದ್ದರು. ಬಹಳ ಕಾಲ ಅವರಿಗೆ ಆತ್ಮೀಯರಾಗಿದ್ದ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆಯವರನ್ನೂ ಬಿಡದೆ ಜಗಳಕ್ಕೆ ಎಳೆಯುತ್ತಿದ್ದರು. ಹೆಗಡೆ ವಿರುದ್ಧವೇ ಲೇಖನ ಬರೆದಾಗ ಅವರು 'ಯಾಕೆ ಹೀಗೆ ಬರೆದಿರಿ ವೈಕುಂಠರಾಜು?' ಎಂದು ಕೇಳುತ್ತಿದ್ದರು. ಅದಕ್ಕೆ ವೈಕುಂಠರಾಜು ಅವರು 'ಹೌದು, ಇರುವ ವಿಚಾರ ಬರೆದೆ. ಅದು ಸುಳ್ಳಲ್ಲವಲ್ಲ?'



ಎಂದು ಮರುಪ್ರಶ್ನೆ ಹಾಕುತ್ತಿದ್ದರು. 'ಇದೇ ಏನು ನಿಮ್ಮ ಸ್ನೇಹ?' ಎಂದು ಹೆಗಡೆ ಮರುಪ್ರಶ್ನಿಸಿದರೆ 'ಸ್ನೇಹ ಬೇರೆ, ಪತ್ರಿಕಾ ಧರ್ಮ ಬೇರೆ' ಎಂದು ಉತ್ತರಿಸಿ ಹೆಗಡೆಯವರನ್ನು ತೆಪ್ಪಗಾಗಿಸುತ್ತಿದ್ದರು. ಕೆಲವೊಮ್ಮೆ ಹೆಗಡೆಯವರು ಮುನಿಸಿಕೊಂಡು ಬಹಳ ದಿನ ಮೌನವಾಗಿದ್ದರೆ ಅದಕ್ಕೂ ರೇಗಿಸಿ 'ಇದೇನು ನೀವು ಮುಟ್ಟು ನಿಂತ ಹೆಂಗಸಿನ ಹಾಗೆ ಮೌನ?' ಎಂದು ಕೆಣಕುತ್ತಿದ್ದರು. ಹೆಗಡೆ ಇಂತಹ ಮಾತುಗಳನ್ನು ಎಂಜಾಯ್ ಮಾಡುತ್ತಿದ್ದರು. ಅನೇಕರು ವೈಕುಂಠರಾಜುರವರ ನಾಲಿಗೆಯಲ್ಲಿ ಬ್ಲೇಡ್ ಇದೆ ಎಂದು ಜರೆದಿದ್ದೂ ಇದೆ.

ನಾನು ಕೂಡ ವೈಕುಂಠರಾಜು ಅವರೊಡನೆ ಸುಮಾರು ಹದಿನೈದು, ಹದಿನಾರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. (ಕಾರಣಾಂತರಗಳಿಂದ ಕಳೆದ ಆರೇಳು ವರ್ಷ ಅತ್ತ ಹೋಗಲಿಲ್ಲ, ಅವರ ಅಂತ್ಯ ದರ್ಶನಕ್ಕೆ ನಾನು ಸಿದ್ಧವಿರಲಿಲ್ಲ, ಒಟ್ಟಿಗೆ ದುಡಿದ ದಿನಗಳು ನನ್ನ ನೆನಪಿಗೆ ಸಾಕು.) ಪತ್ರಿಕೋದ್ಯಮದ ವಿಚಾರ ಸರಿಯಾಗಿ ತಿಳಿದುಕೊಳ್ಳಬೇಕೆಂದರೆ, ಒಂದು ತಪ್ಪೂ ಇಲ್ಲದೆ ಬರವಣಿಗೆ ಸಿದ್ಧಿಸಿರಬೇಕೆಂದರೆ, ಲಂಕೇಶ್ ಸಾರ್ ಇಲ್ಲವೆ ವೈಕುಂಠರಾಜು ಸಾರ್ ಅವರ ಗರಡಿಯಲ್ಲಿ ಪಳಗಿರಬೇಕು ಅಂದರೆ ಅದು ಅತಿಶಯೋಕ್ತಿಯಲ್ಲ. ಅಷ್ಟು ವಸ್ತುನಿಷ್ಠತೆಗೆ ಅಂಟಿಕೊಂಡವರು ಅವರುಗಳು. ತಮ್ಮ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ಮಾಡುವುದರಲ್ಲಿ, ಇತರ ಬರಹಗಾರರನ್ನು ಗುರುತಿಸಿ ಬೆಳೆಸುವುದರಲ್ಲಿ ಅವರಿಬ್ಬರೂ ಅಗ್ರಗಣ್ಯರಾಗಿದ್ದರು.

ಈಗ ನಮ್ಮ ಪತ್ರಿಕೋದ್ಯಮ ಈ ಇಬ್ಬರನ್ನೂ ಕಳೆದುಕೊಂಡಿದೆ. ಮುಂದೆ ಈ ಸ್ಥಾನವನ್ನು ತುಂಬಲು ಬಹುಶಃ ಯಾರೂ ಇಲ್ಲವೆನಿಸುತ್ತೆ. ಇಂದಿನ ಪತ್ರಿಕೋದ್ಯಮಕ್ಕೆ ಅನುಭವ ಬೇಕು ಅನ್ನುವುದಕ್ಕಿಂತಲೂ ಕನ್ನಡ ಬಲ್ಲ ಪೇಜ್‌ಮೇಕರ್‌ಗಳಾಗಿದ್ದರೆ ಸಾಕು. ಅವರೇ ಇಂದು ಪತ್ರಿಕೋದ್ಯಮದ ಪಂಡಿತರು. ಲೇಖನಿಯೊಡಗಿನ ಭಾವನಾತ್ಮಕ ಸಂಬಂಧ ಮಾಯವಾಗಿರುವ ಈ ಸಂದರ್ಭದಲ್ಲಿ ಇಡೀ ಒಂದು ತಲೆಮಾರಿನ ಉದ್ಯಮ ಹೇಗಿತ್ತು ಎಂದು ಬಿಂಬಿಸುತ್ತಿದ್ದ ಒಂದು ಕೊಂಡಿಯೂ ಕಳಚಿಬಿದ್ದಿರುವುದು ನಮ್ಮ ದುರಾದೃಷ್ಟ ಎನ್ನಬೇಕು.

ವೈಕುಂಠರಾಜು ಅವರು ಪತ್ರಕರ್ತರಾಗಿ, ಲೇಖಕರಾಗಿ, ನಾಟಕಕಾರರಾಗಿ ಸದಾ ಸುದ್ದಿಯಲ್ಲಿ ಇದ್ದವರು. ನಾಟಕ ಅಕಾಡಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾಗ ವೃತ್ತಿ ರಂಗಭೂಮಿ ಕಲಾವಿದರಿಗೆ ಮಾಸಾಶನ ದೊರಕುವಂತಹ ಉತ್ತಮ ಕಾರ್ಯವನ್ನು ಮಾಡಿದರು. ಆದರೆ ಹಲವು ದಶಕಗಳ ಕಾಲ ಪತ್ರಿಕೋದ್ಯಮಕ್ಕೆ ದುಡಿಯುವ ಮೂಲಕ ಈ ಸಮಾಜಕ್ಕೆ ಸೇವೆ ಸಲ್ಲಿಸಿದ ಅವರಿಗೆ ಈ ಉದ್ಯಮವಾಗಲಿ, ಸರ್ಕಾರವಾಗಲಿ ಏನು ನೀಡಿತು?

ಅವರೆಂದೂ ಪ್ರಶಸ್ತಿಗಳನ್ನು ಹುಡುಕಿ ಹೋದವರಲ್ಲ. ರಾಜ್ಯ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಇನ್ನಿತರ ಪ್ರಶಸ್ತಿಗಳು ಅವರನ್ನು ಹುಡುಕಿ ಬಂದವು. ಅವರು ಕನ್ನಡ ರಂಗಭೂಮಿಗಾಗಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಹಂಪಿಯ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿತ್ತು. ಅವರ 'ಆಕ್ರಮಣ' ಮತ್ತು 'ಉದ್ಭವ' ಕಾದಂಬರಿಗಳು ಉತ್ತಮ ಚಲನಚಿತ್ರಗಳಾಗಿ ಮೂಡಿಬಂದವಲ್ಲದೆ ಪ್ರಶಸ್ತಿಗಳನ್ನು ಪಡೆದವು. ಅಂತ್ಯ, ಪರ್ಯಟನ, ಸಂದರ್ಭ, ಸನ್ನಿವೇಶ, ಕಾನನ್‌ದೇವಿಯಂತಹ ಇನ್ನಿತರ ಅಮೋಘ ಕೃತಿಗಳನ್ನೂ ವೈಕುಂಠರಾಜು ನೀಡಿದ್ದಾರೆ.

ಪತ್ರಿಕೋದ್ಯಮಕ್ಕೆ ಮತ್ತು ಕನ್ನಡ ಸಾಹಿತ್ಯಲೋಕಕ್ಕೆ ವೈಕುಂಠರಾಜು ಅವರು ಗಣನೀಯ ಸೇವೆ ಸಲ್ಲಿಸಿದ್ದಾರೆ. ಅದೂ ಐವತ್ತು ವರ್ಷಗಳ ಕಾಲ! ಬಣ್ಣದ ಪರದೆಯಲ್ಲಿ ಮಿಂಚುವವರಿಗೆ, ಹೆಚ್ಚುಕಾಲ ರಂಗಭೂಮಿಯಲ್ಲಿ ದುಡಿದ ಕಲಾವಿದರಿಗೆ ಸಜ್ಜನಿಕೆ ತೋರುವ ಸರ್ಕಾರ, ಪತ್ರಿಕೋದ್ಯಮದಲ್ಲಿ ಹಲವು ದಶಕಗಳಕಾಲ ಸೇವೆ ಸಲ್ಲಿಸಿದ ಇಂತಹ ಅಪರೂಪದ ವ್ಯಕ್ತಿಗಳನ್ನು ನೆನಪಿನಲ್ಲಿ ಉಳಿಸುವಂತಹ ಕಾರ್ಯ ಮಾಡದಿರುವುದು ನಿಜಕ್ಕೂ ವಿಷಾದನೀಯ.

● ಭಾಗ್ಯ ಕೃಷ್ಣಮೂರ್ತಿ

ಬೆಲೆ ಕಳೆದುಕೊಂಡ ಚಿತ್ರಸಂತೆ!




ಮೊನ್ನೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪರವಾಗಿ 'ಚಿತ್ರಸಂತೆ'ಯೊಂದು ಬೆಂಗಳೂರಿನಲ್ಲಿ ಏರ್ಪಾಟಾಗಿತ್ತು. ಸ್ಥಳೀಯ ಕಲಾವಿದರನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ 'ಕಲೆಗೆ ಬೆಲೆ ಸಿಗಲಿ' ಎಂದು ಬೌದ್ಧಿಕ ಕಾಲದಲ್ಲಿ ಆರಂಭವಾದ ವಾರ್ಷಿಕ ಕಾರ್ಯಕ್ರಮವಿದು. ಈಗ ನಡೆದದ್ದು ಏಳನೇ ವರ್ಷದ ಚಿತ್ರಸಂತೆ.

ಆರಂಭದ ವರ್ಷಗಳಲ್ಲಿ ಧ್ಯೇಯ, ಸಿದ್ಧಾಂತಕ್ಕೆ ಬದ್ಧವಾಗಿದ್ದ ಈ ಕಾರ್ಯಕ್ರಮ ಬರುಬರುತ್ತಾ ಎಲ್ಲವನ್ನೂ ಗಾಳಿಗೆ ತೂರಿಬಿಟ್ಟಿದೆ. ಅಸಲು ಈ ಚಿತ್ರಸಂತೆ ನಡೆಸುತ್ತಿರುವುದು ಕಷ್ಟದಲ್ಲಿರುವ ಕಲಾವಿದರ ಪೇಂಟಿಂಗುಗಳು ಮಾರಾಟವಾಗಿ ಅವರ ಜೀವನಕ್ಕೊಂದಿಷ್ಟು ನೆರವಾಗಲಿ ಎಂಬ ಉದ್ದೇಶಕ್ಕೆ. ಆದರೆ ಈ ಬಾರಿಯ ಚಿತ್ರಸಂತೆಯಲ್ಲಿ ಕಲಾವಿದರ ಪೇಂಟಿಂಗುಗಳು ಮೂರು ಕಾಸಿನ ಬೆಲೆಯನ್ನೂ ಪಡೆಯದೆ ಸೊರಗಿದವು.

ಈ ಬಾರಿ ಚಿತ್ರಸಂತೆಯಲ್ಲಿ ಕಲಾಕೃತಿಯನ್ನು ಕೊಂಡುಕೊಳ್ಳಲು ಬಂದವರಿಗಿಂತ ಅವುಗಳ ಫೋಟೋ ತೆಗೆದುಕೊಳ್ಳಲು ಬಂದವರೇ ಹೆಚ್ಚಾಗಿದ್ದರು. ಚಿತ್ರಸಂತೆಗೆ ಬಂದ ಬಹುತೇಕರು ಡಿಜಿಟಲ್ ಕ್ಯಾಮೆರಾ ಅಥವಾ ಮೊಬೈಲ್ ಕ್ಯಾಮೆರಾಗಳನ್ನು ಹಿಡಿದು ಪ್ರತಿಯೊಂದು ಪೇಂಟಿಂಗುಗಳನ್ನು ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಕಲಾವಿದರು ವರ್ಷಗಟ್ಟಲೆ ಕಷ್ಟಪಟ್ಟು, ಕ್ಯಾನ್‌ವಾಸ್‌ಗಳ ಮೇಲೆ ತಮ್ಮ ಕಲ್ಪನೆ, ಶ್ರಮವನ್ನೆಲ್ಲಾ ಒರೆಗೆ ಹಚ್ಚಿ ಚಿತ್ರಿಸಿದ್ದ, ಸಾಲಸೋಲ ಮಾಡಿತಂದಿದ್ದ ಕಲಾಕೃತಿಗಳನ್ನು ಕ್ಷಣಮಾತ್ರದಲ್ಲಿ ಜನ ರಾಜಾರೋಷವಾಗಿ ತಮ್ಮ ಸ್ಟಿಲ್ ಕ್ಯಾಮೆರಾಗಳ ಚಿಪ್‌ನ ಮೆಮರಿಗಿಳಿಸುತ್ತಿದ್ದರು ಅಂದರೆ ಬೆಲೆ ಕಟ್ಟಲಾಗದಂಥ ಕಲಾವಿದನ ಶ್ರಮಕ್ಕೆ ನ್ಯಾಯ ಸಿಗುವುದಾದರೂ ಎಲ್ಲಿಂದ?

ಹೀಗೆ ಕಲೆಗೆ ಬೆಲೆಯೇ ಇಲ್ಲದಂತೆ ನಡೆಯುತ್ತಿದ್ದ 'ಕಳ್ಳತನವನ್ನು' ತಡೆಯಲು ಸಂತೆಯ ಆಯೋಜಕರಾಗಲಿ, ಪರಿಷತ್ತಿನ ಆಡಳಿತ ಮಂಡಳಿಯವರಾಗಲಿ ಯಾವ




ಕ್ರಮವನ್ನೂ ಕೈಗೊಂಡಿರಲಿಲ್ಲ. ಕಲಾವಿದರಾದರೂ ಎಷ್ಟು ಎಂದು ಇದನ್ನು ನಿಗ್ರಹಿಸಲು ಸಾಧ್ಯ? ಬಂದ ಗಿರಾಕಿಗಳ ಮೊಬೈಲ್-ಕ್ಯಾಮೆರಾ ಹಾವಳಿಯನ್ನು ತಡೆಯಲಾರದೆ ಬಹುತೇಕ ಕಲಾವಿದರು ಕೈಚೆಲ್ಲಿ ಕುಳಿತಿದ್ದರು.

ಚಿತ್ರಸಂತೆ ಆರಂಭವಾದ ಮೊದಮೊದಲು ನಿಯಮದಂತೆ ಸ್ಥಳೀಯರಿಗೇ ಹೆಚ್ಚು ಅವಕಾಶ ನೀಡಲಾಗುತ್ತಿತ್ತು. ಆದರೆ ಕಳೆದ ಎರಡು ಮೂರು ವರ್ಷಗಳಿಂದ ನಮ್ಮ ನೆಲದ ಪ್ರತಿಭೆಗಳಿಗಿಂತ ತಮಿಳುನಾಡು, ಕೇರಳ, ಆಂಧ್ರ ಮತ್ತು ರಾಜಸ್ಥಾನ್‌ನಂಥ ಪರರಾಜ್ಯಗಳ ಹಾಗೂ ಶ್ರೀಮಂತ ಕಲಾವಿದರ ದಂಡೇ ಇಲ್ಲಿ ಹೆಚ್ಚಾಗುತ್ತಿದೆ. ಅಲ್ಲದೇ ಆರಂಭದಲ್ಲಿ 'ಬೇರೆ ಕಲಾವಿದರ ರೀ ಪ್ರೊಡಕ್ಷನ್(ತದ್ರೂಪ ಕಲಾಕೃತಿ)ಗಳ ಪ್ರದರ್ಶನಕ್ಕೆ ಅವಕಾಶವನ್ನೇ ನೀಡಬಾರದು' ಎಂಬುದು ಆಡಳಿತ ಮಂಡಳಿಯ ಕಟ್ಟಪ್ಪಣೆಯಾಗಿತ್ತು. ಆದರೆ ಈ ಬಾರಿಯ ಸಂತೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದ ಎಂ.ಎಸ್. ಪಂಡಿತ್, ರವಿವರ್ಮ, ಜಮಿನಿ ರಾಯ್, ಲಿಯೋನಾರ್ಡೋ ಡಾವಿಂಚಿ, ಕಾನ್‌ಸ್ಟೇಬಲ್ ಮುಂತಾದವರ ಪೇಂಟಿಂಗುಗಳೇ ಮರುಸೃಷ್ಟಿಗೊಂಡಿದ್ದವು. ಹೀಗಿರುವಾಗ 'ಸಂತೆ'ಯಲ್ಲಿ ಕ್ರಿಯಾಶೀಲತೆಗೆ ಕಿಮ್ಮತ್ತು ಸಿಗುವುದಾದರೂ ಹೇಗೆ?

ಈ ಹಿಂದೆ ಕರ್ನಾಟಕ ಚಿತ್ರಕಲಾ ಅಕಾಡೆಮಿಯವರು 'ಮನೆಗೊಂದು ಕಲಾಕೃತಿ' ಎಂಬ ಕಾರ್ಯಕ್ರಮವನ್ನು ನಡೆಸುತ್ತಿದ್ದರು. ಆದರೆ 'ಚಿತ್ರಸಂತೆ'ಯಂತೇ ಅಲ್ಲೂ ಹಲವಾರು ಅವ್ಯವಸ್ಥೆ, ಅರಾಜಕತೆಗಳು ನಡೆದದ್ದರಿಂದ ಅದು ಬಹಳ ಕಾಲ ನಡೆಯದೇ ಹಳ್ಳಹಿಡಿದಿತ್ತು.

ಈಗ ಚಿತ್ರಸಂತೆಯೂ ಅದೇ ಹಾದಿಯಲ್ಲಿದೆ.....

● ಅರುಣ್



ಸಾಂಸ್ಕೃತಿಕ ಚಲನೆಯ ಹಾದಿ: ಹೊಸತನದಿಂದ ಕೂಡಿರುವ ಪದಚರಿತೆ

ಕೃತಿ- Some ಪದ
ಲೇ- ಪಾರ್ವತೀಶ
ಾರು ಪ್ರಕಾಶನ, ನಂ. 9, ನೆಲಮಹಡಿ, ಇಎಟಿ ರಸ್ತೆ, ಬಸವನಗುಡಿ, ಬೆಂಗಳೂರು-4
ಪು: 172, ಬೆಲೆ: ರೂ. 80

ಸನಪರ ಹೋರಾಟಗಳ ಕಾರ್ಯಕರ್ತರೂ, ಪತ್ರ ಾಆದ ಪಾರ್ವತೀಶ ತಮ್ಮ ಮೊದಲ ಕೃತಿ 'Some ಪ್ರಕಟಿಸಿದ್ದಾರೆ. ಇದರಲ್ಲಿರುವ ಬರಹಗಳು 'ವಾರ್ತಾ ' ಪತ್ರಿಕೆಯಲ್ಲಿ ಅಂಕಣವಾಗಿ ಪ್ರಕಟಗೊಂಡವುಗಳು. ಟ್ಟು 75 ಪದಗಳ ಪ್ರವಾಸ ಕಥನವನ್ನು ಈ ಕೃತಿ ಂಡಿದೆ. ಕನ್ನಡದಲ್ಲಿ ಬಳಕೆಯಲ್ಲಿರುವ, ಆದರೆ ಕನ್ನಡ ದವುಗಳಲ್ಲದ ಈ ಪದಗಳು ಬಳಕೆಗೆ ಬಂದ ವನ್ನು, ಅದಕ್ಕೂ ಮೊದಲು ಅವು ರೂಪುಗೊಂಡ ನ್ನು ಪಾರ್ವತೀಶ ಇದರಲ್ಲಿ ಕೊಟ್ಟಿದ್ದಾರೆ. ಪದಗಳ ಯನ್ನು, ಅವುಗಳ ರೂಪಾಂತರದ, ಅರ್ಥಾಂತರದ ನ್ನು ಬರೆದಿರುವ ಹಲವು ಭಾಷಾ ಶಾಸ್ತ್ರೀಯ ು ಕನ್ನಡದಲ್ಲಿ ಬಂದಿವೆ. ಪಾವೆಂ ಆಚಾರ್ಯ, ಜಿ. ವೆಂಕಟಸುಬ್ಬಯ್ಯ, ಪ್ರೊ. ಕೆ. ವಿ. ನಾರಾಯಣ ಟ್ಟಿನಲ್ಲಿ ಉತ್ತಮ ಕೃತಿಗಳನ್ನು ಪ್ರಕಟಿಸಿದ್ದಾರೆ.

ಾರ್ವತೀಶ ಬರೆದಿರುವ ಕೃತಿ ಮೇಲೆ ಹೇಳಿದ ರರಿಗಿಂತ ಭಿನ್ನವಾದ ಹಾದಿಯಲ್ಲಿ ಇದೆ. ಪದಗಳ ಭಾಷಾ ಶಾಸ್ತ್ರೀಯ ಜಾಡನ್ನು ಗುರುತಿಸುವ ಕಡೆಗೆ ಒತ್ತು ಕೊಟ್ಟಿಲ್ಲ, ಅವರೇ ಲೇಖಕರ ಮಾತಿನಲ್ಲಿ ೊಂಡಿರುವಂತೆ ಅದು ಅವರ ವಿದ್ವತ್ತಿನ ಕ್ಷೇತ್ರವೂ ಬದಲಿಗೆ ಇತಿಹಾಸ ಮತ್ತು ಸಾಮಾಜಿಕ ೀಲತೆಯ ಬಗ್ಗೆ ಆಸಕ್ತಿಯುಳ್ಳವರಾಗಿ ಈ ಕೃತಿಯಲ್ಲಿ ಬೇರೆಬೇರೆ ಕಾರಣಗಳ ಹಿನ್ನೆಲೆಯಲ್ಲಿ ತಮ್ಮ ಕ್ಕೆ ತುಂಬ ದೂರದ ಸ್ಥಳಗಳಿಗೆ ಸಮುದಾಯಗಳಲ್ಲಿ ಚಾಲ್ತಿಗೆ ಬಗೆಯನ್ನು ಹುಡುಕಿದ್ದಾರೆ. ನಸಾಮಾನ್ಯರ ನಡುವೆ ನಿತ್ಯ ುಲ್ಲಿರುವ ವಿಶಿಷ್ಟ ಪದಗಳ ಸವನ್ನು, ಅವುಗಳ ಮೂಲ ನ್ನು ಪಾರ್ವತೀಶ ಮಂಡಿ ವಿಧಾನ ಆಸಕ್ತಿಕರವಾಗಿದೆ. ಅಂಕಣ ಬರಹಗಳಾಗಿ ರಿಗೆ ರುಚಿಸುವಂತಿರಬೇಕೆಂಬ ಎಚ್ಚರದಿಂದಾಗಿ ಳನ್ನು ಸಂಕ್ಷಿಪ್ತವಾಗಿ ಆದರೆ ಮಾಹಿತಿಯ ಕೊರತೆ ರುವಂತೆ ಬರೆದಿರುವುದು ಪಾರ್ವತೀಶರ ಶಿಗೆಯ ಉತ್ತಮ ಗುಣವಾಗಿದೆ.

ಪದ ಚರಿತೆ ಎಲ್ಲಿಯೂ ಅನಗತ್ಯ ಪಾಂಡಿತ್ಯ ನಕ್ಕೆ ಪ್ರಯತ್ನಿಸಿಲ್ಲ. ಹಾಗೆಯೇ ಅದನ್ನು ಭಿರಾಮದ ಕಾಡುಹರಟೆಯನ್ನಾಗಿಯೂ ಹಾಳುಗೆಡ ಳಸುವವರಿಗೆ ಬಹಳ ಮಾಮೂಲಿಯಾದ, ಆದರೆ ುಳ್ಳವರಿಗೆ ಕುತೂಹಲ ಹುಟ್ಟಿಸುವಂತಿರುವ ಪದಗಳ ಜಾಡು ಹಿಡಿದು ನಿಖರವಾದ ಮಾಹಿತಿಯನ್ನು ಹಲವು ಮೂಲಗಳಿಂದ ಸಂಗ್ರಹಿಸಿ ಈ ಕೃತಿಯಲ್ಲಿ ಕೊಡಲಾಗಿದೆ.

ಪುಸ್ತಕ ವಿಮರ್ಶೆ

ಮಾಹಿತಿ ನೀಡುವಾಗ ಬರವಣಿಗೆಗೆ ಸ್ವಾರಸ್ಯಕರ ವಿಧಾನವನ್ನು ಪದಗಳ ಆಯ್ಕೆಗೂ ಅಳವಡಿಸಿಕೊಳ್ಳಲಾಗಿದೆ. ಉದಾ: ಕಲಾಸಿ, ರಿಕ್ಷಾ, ಓಬೀರಾಯನಕಾಲ, ಸವಾಯಿ, ಟಾಟಾ, ಟ್ಯಾಕ್ಸಿ, ಓಕೆ ಮುಂತಾದ ಪದಗಳು ಬಳಕೆಗೆ ಬಂದ ವಿಧಾನವನ್ನು 'Some ಪದ' ಅರ್ಥಪೂರ್ಣವಾಗಿ ವಿವರಿಸುತ್ತದೆ. ಈ ಬಗೆಯ ಪದಗಳ ಬಗ್ಗೆ ಭಾಷಾ ಪಂಡಿತರಿಗೆ ಅಷ್ಟು ಗಮನ ಇರುವುದಿಲ್ಲದಿರುವುದು ಆಶ್ಚರ್ಯಕರವಲ್ಲ. ಒಂದು ಭಾಷೆಯ ಜಾಯಮಾನದಲ್ಲಿ ಪ್ರೌಢಿಮೆಯುಳ್ಳ ವಿಶಿಷ್ಟಾರ್ಥಗಳನ್ನು ಹೊಂದಿರುವ ಪದಗಳ ಬಗ್ಗೆ ಅಧ್ಯಯನ ಮಾಡುವುದು ಸಾಮಾನ್ಯವಾದ ವಿಧಾನ. ಇದಕ್ಕೆ ಭಿನ್ನವಾಗಿ 'Some ಪದ' ಕೃತಿಯಲ್ಲಿ ಸಾಮಾನ್ಯ ಪದಗಳ ಹಿಂದಿರುವ ವೈಶಿಷ್ಟ್ಯಪೂರ್ಣ ನೆಲೆಗಟ್ಟನ್ನು ಹುಡುಕಾಡಲಾಗಿದೆ.



ಬೊಂಬಾಟ್ ಎಂಬ ಪದವನ್ನು ಸಾಮಾನ್ಯವಾಗಿ ತರುಣ ತಲೆಮಾರಿನ ಬಹಳಷ್ಟು ಜನ ಬಳಸುತ್ತಾರೆ. ಹಾಗಂದರೆ ಏನರ್ಥ? ಎಂಬುದು ಕೂಡ ಕೇಳುಗರಿಗೆ ಸಂವಹನಗೊಳ್ಳುತ್ತದೆ. ಆದರೆ ಈ ಅರ್ಥವನ್ನು ಹೊರಡಿಸುವ ಒಂದು ನಿರ್ದಿಷ್ಟ ಪದ ತನ್ನ ಮೂಲದಲ್ಲಿ ಬೇರೆ ಏನನ್ನೋ ಸೂಚಿಸುತ್ತಿದ್ದುದು ತನ್ನ ಗಡಿ ದಾಟಿ ಬಂದಾಗ ಬೇರೆ ಯಾವುದೋ ಭಾವಸೂಚಕವಾಗಿ ನೆಲೆಗೊಂಡಿರುವುದನ್ನು ಈ ಕೃತಿ ವಿವರಿಸುತ್ತದೆ.

ಖಾಕಿ, ಡಕೋಟಾ, ಚೌಚೌ, ಟಿಫಿನ್, ಕ್ಯಾಷ್, ಟ್ಯಾಕ್ಸಿ, ಲಾಟರಿ, ಮಫ್ತಿ, ಟೀಪಾಯಿ, ಕರ್ಫ್ಯೂ, ಪಿವನ್ ಮುಂತಾದ ಹಲವಾರು ಶಬ್ದಗಳ ಮೂಲಾರ್ಥವನ್ನು ಅವು ಈಗ ಚಲಾವಣೆಯಲ್ಲಿರುವ ವಿಧಾನವನ್ನು ಇದರಲ್ಲಿ ನಿರೂಪಿಸಲಾಗಿದೆ. 'ಪೀ' ಎಂದರೆ ಪೋರ್ಚುಗೀಸ್ ಭಾಷೆಯಲ್ಲಿ ಇರುವ ಕಾಲು ಎಂಬರ್ಥದಿಂದ ಭಾರತದಲ್ಲಿ ಬರಿಗಾಲ ಸೈನಿಕರನ್ನು 'ಪಿವನ್' ಎಂದು ಕರೆಯತೊಡಗಿದ್ದು, ನಂತರದಲ್ಲಿ ಕಚೇರಿಗಳಲ್ಲಿ ಇರುವ ಸಹಾಯಕರಿಗೆ ಈ ಪದ ಲಗತ್ತಾಗಿರುವಂತಹ ಹಲವಾರು ವಿಷಯಗಳು ಇದರಲ್ಲಿವೆ.

ಹಳೆ ಮೈಸೂರು ಪ್ರಾಂತ್ಯದಲ್ಲಿ 'ಪಿಂಜರಾ ಪೋಲು' ಎಂಬ ಅವಹೇಳನಾತ್ಮಕ ವಿಶೇಷಣವನ್ನು ವ್ಯಕ್ತಿಗಳಿಗೆ ಬಳಸುವುದು ರೂಢಿಯಲ್ಲಿದೆ. ಬಡಕಲು, ಮುದಿ ಹಸುಗಳನ್ನು ಸಲಹುವ ದೊಡ್ಡಿ ಎಂಬ ಮೂಲ ಸಂಕೇತದಿಂದ ಹೊರಟ ಇದು ಕಡೆಗೆ 'ನಿಷ್ಪ್ರಯೋಜಕ ಮನುಷ್ಯ' ಎಂಬ ಧ್ವನಿ ಹೊರಡಿಸುತ್ತಿರುವುದನ್ನು ಇದರಲ್ಲಿ ದಾಖಲಿಸಲಾಗಿದೆ. ಗಂಡಸರ ಸಾಮಾನ್ಯ ಒಳಉಡುಪಾದ ಬನಿಯನ್ ಮೂಲದಲ್ಲಿ ಬನಿಯಾಗಳು ಧರಿಸುತ್ತಿದ್ದ ಮುಂಡುತೋಳಿನ ಕಸೆ ಅಂಗಿ ರೀತಿಯ ಉಡುಪಾಗಿದ್ದು, ಅದನ್ನು ಇಲ್ಲಿಗೆ ಬಂದ ಐರೋಪ್ಯರು ಕೂಡ ಬಳಸಿ, ಕಡೆಗದು ಬನಿಯನ್ ಆಗಿ ಎಲ್ಲ ಕಡೆ ಪ್ರಚಲಿತಕ್ಕೆ ಬಂದಿರುವ ವಿವರ ಕೂಡ ಇದರಲ್ಲಿದೆ.

ಈ ಕೃತಿಯಲ್ಲಿ ಈ ಬಗೆಯ ಒಟ್ಟು ಎಪ್ಪತ್ತೈದು ಬರವಣಿಗೆಗಳಿವೆ. ಕೇವಲ ಶಬ್ದ ಸೂಚಿಸುತ್ತಿರುವ ಅರ್ಥದ ಹಿನ್ನೆಲೆಯನ್ನು ಮಾತ್ರವೇ ಅಲ್ಲದೇ ಅದು ಖಂಡಾಂತರಗಳನ್ನು ದಾಟಿ ನೆಲೆಗೊಳ್ಳಲು ಕಾರಣವಾದ ರಾಜಕೀಯಾರ್ಥಿಕ ವಿದ್ಯಮಾನಗಳ ಮಾಹಿತಿಯನ್ನೂ ಕ್ಲುಪ್ತವಾಗಿ ಒದಗಿಸಲಾಗಿದೆ. ಸಾಮಾಜಿಕ ಸಂದರ್ಭ, ವಾಣಿಜ್ಯ ರಾಜಕೀಯದ ಚಲನೆ, ಭಾಷಾ ಪರಕೀಯತೆಯಿಂದ ಏರ್ಪಟ್ಟ ಗೊಂದಲ, ಉಚ್ಚಾರಣೆಯ ವಿಧಾನದಿಂದಾಗಿ ಕಾಣಿಸಿಕೊಂಡ ಪಲ್ಲಟಗಳು ಮುಂತಾದ ಹಲವಾರು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಈ ಪದಗಳ ಪ್ರವಾಸ ಕಥನವನ್ನು ಪಾರ್ವತೀಶ ಬರೆದಿದ್ದಾರೆ.


ಇಂತಹ ಬರವಣಿಗೆಗೆ ಸಂಶೋಧಕ ಸ್ವಭಾವವಿರುವುದು ಸಹಜವಾಗಿದೆ. ಗತಕಾಲದ ಯಾವುದೋ ಮೂಲೆಯಲ್ಲಿ ಅಡಗಿರುವ ಅಷ್ಟು ಪ್ರಾಮುಖ್ಯತೆ ಪಡೆದಿಲ್ಲದಿರುವ ಯಾವುದೋ ಘಟನಾವಳಿಗಳಲ್ಲಿ ಯಾವುದೋ ಪದದ ಉಗಮ ಅಡಗಿರುತ್ತದೆ. ಅಂತಹುದನ್ನು ಹುಡುಕಿ, ಓದುಗರಿಗೆ ಗ್ರಾಹ್ಯವಾಗುವಂತೆ ಬರೆಯುವುದಕ್ಕೆ ಆಸಕ್ತಿ ಶ್ರದ್ಧೆ ಬೌದ್ಧಿಕತೆ ಮತ್ತು ಪರಿಶ್ರಮಗಳು ಬೇಕು. ಇವೆಲ್ಲವೂ ಪಾರ್ವತೀಶಗೆ ಇವೆ ಎಂಬುದಕ್ಕೆ ಈ ಕೃತಿಯಲ್ಲಿರುವ ಹಲವಾರು ಬರಹಗಳು ಸಾಕ್ಷಿಯಾಗಿವೆ.

ಬಹುಪಾಲು ವಾಹನಗಳ ಹಿಂದೆ ಬರೆಯಲ್ಪಟ್ಟಿರುವ OK ಎಂಬ ಶಬ್ದವನ್ನು ಎಲ್ಲರೂ ಸಾವಿರಾರು ಸಲ ನೋಡಿರುತ್ತಾರೆ. ಆದರೆ ಅದು ಅಲ್ಲಿ ಯಾಕೆ ಬರೆಯಲ್ಪಟ್ಟಿದೆ ಎಂಬುದಾಗಲೀ, ಅದರರ್ಥ ಏನು ಎಂಬುದಾಗಲೀ ಯಾರೂ ಯೋಚಿಸಿರುವುದಿಲ್ಲ. ಪ್ರಪಂಚ ಯುದ್ಧದ ಹಿನ್ನೆಲೆಯಲ್ಲಿ ಏರ್ಪಟ್ಟ ಡೀಸೆಲ್ ಕೊರತೆಯ ಹಿನ್ನೆಲೆಯಲ್ಲಿ ಈ ಗಾಡಿ ಸೀಮೆಎಣ್ಣೆಯಿಂದ ಚಲಿಸುತ್ತಿದೆ ಎಂಬುದನ್ನು ಸೂಚಿಸಲಿಕ್ಕಾಗಿ ಆನ್ ಕೆರೋಸಿನ್ ಎಂದು ಬರೆಸಲು ಆರಂಭವಾಗಿದ್ದು, ಕಡೆಗೆ ಅದರ ಸಂಕ್ಷೇಪ ನುಡಿ OK ಆಗಿ, ನಂತರದಲ್ಲಿ, ಸರಿ, ಒಪ್ಪಿಗೆ ಎಂಬ ಅರ್ಥ ಹೊರಡಿಸಿಕೊಂಡು ಎಲ್ಲಾ ಕಡೆ ಬಳಕೆಯಲ್ಲಿ ಬಂದಿರುವ ಬಗೆಯನ್ನು ನಾವಿದರಲ್ಲಿ ಕಾಣಬಹುದು. ಹೆಚ್ಚು ಕಮ್ಮಿ ಎಲ್ಲಾ ಪದಗಳ ಪ್ರವಾಸದ ಕಥೆಯೂ ಈ ಬಗೆಯದೊಂದು ಅಚ್ಚರಿ ಒಳಗೊಂಡಿರುವುದನ್ನು 'Some ಪದ' ಈ ಕೃತಿ ಮಂಡಿಸುತ್ತಿದೆ.

ಈ ಕೃತಿ ಬರವಣಿಗೆಯನ್ನು ಪದಚರಿತೆಯ ಬರವಣಿಗೆಗಳ ಹಾದಿಯಲ್ಲಿ 'ಒಂದು ಸಾಂಸ್ಕೃತಿಕ ಚೇಷ್ಟೆ' ಎಂದು ಲೇಖಕ ಹೇಳಿಕೊಂಡಿದ್ದಾರೆ. ನಮ್ಮ ನಿತ್ಯದ ಬದುಕಿನಲ್ಲಿ ಬಳಕೆಯಾಗುತ್ತಿರುವ ನೂರಾರು ಪದಗಳ ಹಿಂದೆ ಒಂದು ಇತಿಹಾಸದ ಚೇಷ್ಟೆ ಇದೆ. ಅದರಲ್ಲಿ ಅಕಸ್ಮಾತ್ ಸಂಭವಿಸಿದವುಗಳು ಕೆಲವಾದರೆ, ಯಾರದೋ ಕಣ್ತಪ್ಪಿನಿಂದ ಅಥವಾ ಹೆಡ್ಡತನದಿಂದ ಸಂಭವಿಸಿದವುಗಳೂ ಇವೆ. ಆಯಾ ಆಡುನುಡಿ ತನ್ನದೇ ಅಂತರ್ಗತ ಚೇಷ್ಟೆಯ ಮುಖಾಂತರ ಕಾಲಾನುಕಾಲಕ್ಕೆ ಇಂತಹ ಪದ ಸಂತಾನವನ್ನು ಸೃಷ್ಟಿಸಿಕೊಂಡು ಬಂದಿದೆ. ಅಂತಹ ಚೇಷ್ಟೆಯ ಜಾಡನ್ನು ಹುಡುಕಿ, ಭಾರವಾಗದ ರೀತಿಯಲ್ಲಿ ಬರೆದಿರುವ ಈ ಬರವಣಿಗೆಯನ್ನು ಚೇಷ್ಟೆ ಎಂದು ಸ್ವಯಂಚೇಷ್ಟೆಗಾಗಿ ಮಾತ್ರ ಪಾರ್ವತೀಶ ಹೇಳಿಕೊಳ್ಳಬಹುದು.

ಉಪಯುಕ್ತ ಮಾಹಿತಿಯನ್ನು ಓದುಗರಿಗೆ ಅತ್ಯಂತ ರುಚಿಕಟ್ಟಾಗಿ, ಬಹು ಶಿಸ್ತೀಯ ಅಧ್ಯಯನದ ನೆರವಿನಿಂದ ಒದಗಿಸಿರುವ ಪಾರ್ವತೀಶರ 'Some ಪದ' ಕೃತಿ ಹೊಸತನದಿಂದ ಕೂಡಿದೆ. ಮಾತ್ರವಲ್ಲ ಪದಗಳ ಸಾಂಸ್ಕೃತಿಕ ಚಲನೆಯ ಹಾದಿಯನ್ನು ಗೊಂದಲಗಳಿಲ್ಲದಂತೆ ನಿರೂಪಿಸುವಲ್ಲಿಯೂ ಯಶಸ್ವಿಯಾಗಿದೆ.

● ಡಾ. ಬಂಜಗೆರೆ ಜಯಪ್ರಕಾಶ



ಮಿಥುನ್ ಅಭಿಮನ್ಯು ಎಂಬ ಏಕಲವ್ಯ...

ಮಿಥುನ್ ಅಭಿಮನ್ಯು ಎಂಬ ಏಕಲವ್ಯ ಟೀಮ್ ಇಂಡಿಯಾಕ್ಕೆ ಎಂಟ್ರಿ ಪಡೆದಿದ್ದಾನೆ.

ಪ್ರಥಮ ದರ್ಜೆ ಕ್ರಿಕೆಟ್‌ಗೆ ಕಾಲಿಟ್ಟು ಇನ್ನೂ ಹತ್ತು ತಿಂಗಳಾಗಿಲ್ಲ. ತನ್ನ ಬೌಲಿಂಗ್ [illegible] ವೇಗದಲ್ಲೇ ಭಾರತ ತಂಡ ಪ್ರವೇಶಿಸಿದ ಈ ಹುಡುಗನ ಹೆಸರು ಮಿಥುನ್ ಅಭಿಮನ್ಯು. [illegible] ಏಕಲವ್ಯನ ಹೋರಾಟವೇ ಹೌದು.

ನವೆಂಬರ್ 3ರಂದು ಉತ್ತರ ಪ್ರದೇಶ ವಿರುದ್ಧ ರಣಜಿ ಪಂದ್ಯ [illegible] ಮಿಥುನ್ ಮೊದಲ ಪಂದ್ಯದಲ್ಲೇ ಹ್ಯಾಟ್ರಿಕ್ ಸಮೇತ 11 ವಿಕೆಟ್ [illegible] ರಣಜಿ ಚಾಂಪಿಯನ್ ಆಗಿದ್ದ ಉತ್ತರಪ್ರದೇಶ ತಂಡದ ಬ್ಯಾಟ್ಸ್‌ಮನ್‌ಗಳಲ್ಲಿ ಭಯ ಹುಟ್ಟಿಸಿಬಿಟ್ಟಿದ್ದ. 2009-10ರ ರಣಜಿ ಸೀಜನ್ನಿನಲ್ಲಿ 9 ಮ್ಯಾಚುಗಳಿಂದ ಈ ಹುಡುಗ 47 ವಿಕೆಟ್ ಪಡೆದಿದ್ದ. ಗಂಟೆಗೆ 140 ಕಿ.ಮೀ. ವೇಗದಲ್ಲಿ ಚೆಂಡು ಎಸೆಯುವ ಮಿಥುನ್‌ಗೆ ಆತನ ಎತ್ತರ (6ಅಡಿ 2ಇಂಚು) ಅಡ್ವಾಂಟೇಜ್ ಆಗಿದೆ. ಈ ಎತ್ತರ ಬಳಸಿಕೊಂಡು ಆತ ಎಸೆಯುವ ಬೌನ್ಸರ್‌ಗಳು ಬ್ಯಾಟ್ಸ್‌ಮನ್‌ಗಳಲ್ಲಿ ಭಯ ಹುಟ್ಟಿಸುತ್ತವೆ. ಹಾಗೆಯೇ ಆತನ ಯಾರ್ಕರ್ ಮತ್ತು ಇನ್-ಕಟ್ಟರ್ ಕೂಡ ಬ್ಯಾಟ್ಸ್‌ಮನ್‌ಗಳನ್ನು ಕಂಗೆಡಿಸುತ್ತವೆ.

[illegible] 17ನೇ ವಯಸ್ಸಿನಲ್ಲಿ!

[illegible]

[illegible] ಮುಡುಗನಂತೆ!

ಗುಡ್‌ಲಕ್ ಮಿಥುನ್....

● ಮಲ್ಲನಗೌಡರ್ ಪಿ.ಕೆ.

ಹೊಯ್ಕೋಗಳು

೧. ಗಗನಕ್ಕೇರಿದ ಬೆಲೆಗಳು
ಹಿಡಿತ ತಪ್ಪಿದ ಹಣದುಬ್ಬರ
ಹೊಡೆತ ತಿನ್ನುತ್ತಿರುವ ಬಡವ

೨. ಚೀರುತ್ತಿರುವ ಮೈಕಾಸುರರು
ಕಾಲು ಶತಮಾನದ ಘೋಷಣೆ
'ಗರೀಬಿ ಹಟಾವ್ರೋ'-ಬೆಕ್ಕಿಗೆ ಗಂಟೆ ಕಟ್ಟಲಾಗುತ್ತಿಲ್ಲ

೩. ಕೆಲವರ ಬಾಯಲ್ಲಿ ಬೆಣ್ಣೆ
ಬಹುತೇಕರ ಹೊಟ್ಟೆಗೆ ಮಣ್ಣು
'ಇದು ನ್ಯಾಯವೆ?' ಪ್ರಶ್ನಿಸಿದವರಿಗೆ ನಕ್ಸಲೈಟರೆಂಬ ಹಣೆಪಟ್ಟಿ

೪. ಕೆರೆಕಟ್ಟೆಗಳನ್ನು ಬತ್ತಿಸಿದವರಿಂದ
ಓಟು ಹಾಕುವ ಮುನ್ನ
ಮೀನಿನೂಟ; ಬಲೆಗಳು ಗದ್ದಲ ಹೊಟ್ಟೆಯಲ್ಲಿ

೫. ಅಯೋಗ್ಯ ರಾಜನೀತಿಗಳು
ಮುಸುವುದಕ್ಕೂ ಸಾಕಾಗದ ಕಾಸು-ಕಡ್ಡಿ
ಅಟ್ಟಹಾಸದ ಹೊಟ್ಟೆಡುಮ್ಮರ ಮಾತು ಕೇಳಲು
ಹೊಟ್ಟೆ ಬೆನ್ನಿಗಂಟಿಗೊಂಡ ಅಸಂಖ್ಯರು ನೆರೆದಿದ್ದಾರೆ



● ಎಂಬಿಆರ್

1974ರಲ್ಲಿ ಲಂಕೇಶರು ಸಂಪಾದಿಸಿದ್ದ 'ಪಾಂಚಾಲಿ' ಎಂಬ ವಿಶೇಷ ಸಂಚಿಕೆಗೆ ಕುವೆಂಪು ಅವರನ್ನು ಲಂಕೇಶ್ ಸಂದರ್ಶಿಸಿದ್ದರು. ಆ ಕಾಲಘಟ್ಟದ ಅತೀ ಮುಖ್ಯ ಸಾಂಸ್ಕೃತಿಕ ರಾಜಕೀಯದ ನಿಲುವುಗಳನ್ನು ಚರ್ಚಿಸುವ ಈ ಸಂದರ್ಶನವನ್ನು 'ಲಂಕೇಶ್ 75' ಸರಣಿಯ ಭಾಗವಾಗಿ ಇಲ್ಲಿ ನೀಡುತ್ತಿದ್ದೇವೆ.

ಕುವೆಂಪು ಅವರಿಗೆ ಲಂಕೇಶರ ಎಂಟು ಪ್ರಶ್ನೆಗಳು

ಕುವೆಂಪು ಅವರನ್ನು ನಾನು ಅಂದು ನೋಡಿದ್ದು ಎರಡನೆ ಸಲ. ನಾನು ನೋಡಲು ಬಂದಿರುವ ವಿಷಯ ತಿಳಿದು ಕೈಯಲ್ಲಿ ನನ್ನ ಪ್ರಶ್ನೆ ಮತ್ತು ತಮ್ಮ ಉತ್ತರಗಳಿಂದ ಕೂಡಿದ ಟೈಪ್ ಮಾಡಿದ ಹಾಳೆಗಳನ್ನು ಹಿಡಿದುಕೊಂಡು ಬಂದರು. ನಾನು ಮತ್ತು ಮಿತ್ರ ದೇವೇಗೌಡರು ನಮಸ್ಕರಿಸಿದೊಡನೆ ಕೂತು ಪ್ರಶ್ನೆ ಮತ್ತು ಉತ್ತರಗಳನ್ನು ಓದುತ್ತ ವಿವರಿಸತೊಡಗಿದರು. ತಮಗೆ ಯಾವುದೇ ಜಾತಿಯ ಬಗ್ಗೆ ಒಣ ಅಭಿಮಾನವಾಗಲಿ ಅನಗತ್ಯ ಪೂರ್ವಗ್ರಹವಾಗಲಿ ಇಲ್ಲವೆಂದು ಸ್ಪಷ್ಟಪಡಿಸಿದರು. ಅವರ ಮಾತಿನಲ್ಲಿ ತಮ್ಮ ಉತ್ತರಗಳು ಜನಕ್ಕೆಲ್ಲಿ ತಿಳಿಯುವುದಿಲ್ಲವೋ ಎಂಬ ಆತಂಕವಿದ್ದಂತಿತ್ತು. ಆದ್ದರಿಂದ ತಮ್ಮ ಕೃತಿಗಳಿಂದ ಉದಾಹರಣೆ ಎತ್ತಿಕೊಂಡು ಮಾತಾಡಿದರು. ನಾನು ಅವೆಲ್ಲವನ್ನೂ ಓದಿದ್ದೆನಾದ್ದರಿಂದ ಆ ವಿವರಣೆ ಅನಗತ್ಯವಾಗಿತ್ತು. ಆದರೆ ಕುವೆಂಪು ಅವರಿಗೆ ಅದಮ್ಯ ಉತ್ಸಾಹವಿದೆ; ಈ ಸಮಾಜದ ಕೆಡಕುಗಳ ಬಗ್ಗೆ ಕೋಪವಿದೆ. ತಾವು ಎಷ್ಟೇ ಬರೆದರೂ ಮಾತಾಡಿದರೂ ಈ ಜನತೆ ಸರಿಹೋಗುತ್ತದೋ ಇಲ್ಲವೋ ಎಂಬ ಸಂದೇಹವಿದೆ. ಆದ್ದರಿಂದಲೇ ಹಲವೊಮ್ಮೆ ವ್ಯಗ್ರವಾಗಿ ಮಾತಾಡುತ್ತಾರೆ. ಅವರು ನನ್ನ ಪ್ರಶ್ನೆಗಳಿಗೆ ಉತ್ತರ ಹೇಳುತ್ತ ಹೊಸ ಸಾಹಿತ್ಯದ ಬಗ್ಗೆ ಮಾತಾಡಿರುವುದನ್ನೂ ಈ ಅರ್ಥದಲ್ಲೇ ತೆಗೆದುಕೊಳ್ಳಬೇಕೆಂದು ಕಾಣುತ್ತದೆ. ಕಿರಿಯ ಲೇಖಕರು ಯಾರಿಗೂ ಅರ್ಥವಾಗದ ಗೊಂದಲಗಳಲ್ಲಿ ಸಿಲುಕಿಕೊಂಡು ತಮ್ಮನ್ನು ತಾವು ಮೋಸಗೊಳಿಸಿಕೊಳ್ಳುವ ಬದಲು ಸಮಾಜಕ್ಕೆ ತಮ್ಮನ್ನು ತಾವು ತೆರೆದುಕೊಳ್ಳಬೇಕೆಂದೂ ಸಮಾಜದ ಅನಿಷ್ಟಗಳನ್ನು ಸರಿಪಡಿಸಬೇಕೆಂದೂ ಅವರು ಸೂಚಿಸುತ್ತಾರೆ. ಇದು ಕಿರಿಯ ಬರಹಗಾರರು ಅನುಭವ ಪಡೆಯುವ ಬಗ್ಗೆ ಉತ್ತಮ ಹಿತವಚನ. ಇನ್ನೊಂದು ಬಗೆಯಲ್ಲಿ ಇದು ನೀತಿಪಾಠ. ಇವೆರಡೂ ಕುವೆಂಪು ಮಾತುಗಳಲ್ಲಿರುವುದು ಎಂಥವರಿಗೂ ಕಂಡುಬರುತ್ತದೆ.


ಆವೊತ್ತು ಮಾತಾಡುವ ಮೂಡಲ್ಲಿದ್ದರು ಕುವೆಂಪು. ನಾವಿಬ್ಬರೂ ಕೆಲಸದ ಮೂಡಿನಲ್ಲಿದ್ದೆವು. ಅವರು ತಮ್ಮ 'ರಾಮಾಯಣ ದರ್ಶನಂ'ನಿಂದ ಓದಿ ತೋರಿಸುವುದಾಗಿ ಸೂಚಿಸಿ ಬೇರೊಂದು ವಿಷಯ ಎತ್ತಿಕೊಂಡು ವಿವರಿಸತೊಡಗಿದರು. 'ಪಾಂಚಾಲಿ'ಯ ವಿವಿಧ ತೊಡಕುಗಳಲ್ಲಿ ಸಿಲುಕಿದ್ದ ನಾನು ಮತ್ತು ದೇವೇಗೌಡರು ನಮಸ್ಕಾರ ಹೇಳಿ ಹೊರಬಿದ್ದೆವು.

ಕುವೆಂಪು ಒಂದು ಸಂಸ್ಥೆ ಅಥವಾ ದೇವತೆಯಾಗಿ ಹುಂಬರ ಮನಸ್ಸಿನಲ್ಲಿ ಬೆಳೆಯುತ್ತಿದ್ದ ವೇಳೆಗೆ ಸರಿಯಾಗಿ ಅವರು ಮೈಕೊಡವಿಕೊಂಡು ಹೊರಬಂದು ಮನುಷ್ಯರೂ ವಿಚಾರವಾದಿಗಳೂ ಆಗಿ ಮಾತಾಡುತ್ತಿದ್ದುದು ನನಗೆ ಸಂತಸ ಉಂಟುಮಾಡಿತ್ತು.

—ಲಂಕೇಶ್

ಲಂಕೇಶ್ ಪ್ರಶ್ನೆ: ಸಾಮಾನ್ಯವಾಗಿ ಸಾರ್ವಜನಿಕ ಸಭೆಗಳಲ್ಲಿ ಮತ್ತು ವಾದವಿವಾದಗಳಲ್ಲಿ ಭಾಗವಹಿಸದ ತಾವು ಈಚೆಗೆ ಹೀಗೆ ಭಾಗವಹಿಸುವ ಮೂಲಕ ತಮ್ಮ ವಿಶಿಷ್ಟ ಬಗೆಯ ಕೀರ್ತಿಗೆ ಕಳಂಕ ತಂದುಕೊಳ್ಳುತ್ತಿರಬಹುದೇ ಎಂಬ ಅಳುಕು ತಮ್ಮ ಅಭಿಮಾನಿಗಳಲ್ಲಿ ಕೆಲವರಿಗಿದೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

ಕುವೆಂಪು ಉತ್ತರ: ಕೀರ್ತಿಗಿಂತಲೂ ನನಗೆ ಹೆಚ್ಚು ಪ್ರಿಯವಾದದ್ದು ಸತ್ಯ. ಸತ್ಯ ಹೇಳಿದರೆ ಕಲುಷಿತವಾಗುವ ಕೀರ್ತಿ ಭ್ರಷ್ಟಾಚಾರದ ವಸ್ತುವಾಗುತ್ತದೆ. ಅಲ್ಲದೆ 'ಕೀರ್ತಿಶನಿ' ಎಂಬ ನನ್ನ ಸಾನೆಟ್ಟಿನಲ್ಲಿ ಅನೇಕ ವರ್ಷಗಳ ಹಿಂದೆಯೇ ನಾನು ಅದನ್ನು ತೊಲಗಾಚೆ ಎಂದು ತೊಲಗಿಸಿದ್ದೇನೆ. ಆದರೂ, ಶ್ರೀ ಎ.ಆರ್.ಕೃಷ್ಣಶಾಸ್ತ್ರಿಗಳು ಹೇಳಿದಂತೆ, ಶನಿ ಒಮ್ಮೆ ಬೆನ್ನು ಹತ್ತಿದರೆ ಬಿಡುವುದಿಲ್ಲವಂತೆ. ನನ್ನ ಮತ್ತೊಂದು ಸಾನೆಟ್ 'ಯಶೋಲಕ್ಷ್ಮಿ' ಈ ವಿಚಾರವಾಗಿ ನನ್ನ ಭಾವನೆ ಏನು ಎಂಬುದನ್ನು ತಿಳಿಸುತ್ತದೆ. ಕೀರ್ತಿ ಕಲುಷಿತವಾಗುವುದಿರಲಿ ಅಪಕೀರ್ತಿಯೇ ಬಂದರೂ ಸತ್ಯ ಹೇಳುವುದನ್ನು ಬಿಡುವುದಿಲ್ಲ.



ಲಂಕೇಶ್: ಕೆಟ್ಟರಲಿ, ಕೆಡದಿರಲಿ ಭಾರತೀಯ ಸಂಸ್ಕೃತಿಯೆಂದರೆ ವೈದಿಕ ಸಂಸ್ಕೃತಿಯೇ ಎಂಬ ಅಭಿಪ್ರಾಯದ ಬಗ್ಗೆ ನಿಮಗೇನನ್ನಿಸುತ್ತದೆ?

ಕುವೆಂಪು: ಇದೊಂದು ತಪ್ಪು ಅಭಿಪ್ರಾಯ. ಭಾರತೀಯ ಸಂಸ್ಕೃತಿ ಬರಿಯ ವೈದಿಕವಲ್ಲ, ಅವೈದಿಕವೂ ಅದರ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಬೌದ್ಧ ಜೈನಗಳಲ್ಲದೆ ನ್ಯಾಯ, ವೈಶೇಷಿಕ, ಸಾಂಖ್ಯ ಯೋಗ ದರ್ಶನಗಳೂ ವೇದದ ಪರಮ ಪ್ರಾಮಾಣ್ಯವನ್ನು ಅವಿಚಾರಕವಾಗಿ ಒಪ್ಪಬೇಕು ಅನ್ನುವುದಿಲ್ಲ, ನನ್ನದು ವಿಶ್ವಸಂಸ್ಕೃತಿ. ಅಭಾರತೀಯವೂ ಅದರಲ್ಲಿ ಸೇರಿದೆ. ಸನಾತನವೂ(ಪುರಾತನ ಅಲ್ಲ) ಶಾಶ್ವತವೂ ಆಧ್ಯಾತ್ಮಿಕವೂ ವಿಚಾರ ಮತ್ತು ವಿಜ್ಞಾನಗಳಿಗೆ ಅವಿರುದ್ಧವೂ ಆಗಿರುವ ಸತ್ಯ ಎಲ್ಲಿಯೇ ಇರಲಿ ಅದನ್ನು ನಾನು ಸ್ವೀಕರಿಸಿದ್ದೇನೆ.

ಲಂಕೇಶ್: ಬ್ರಾಹ್ಮಣ ಜಾತಿಯಲ್ಲಿ ಹಲವು ಒಳಪಂಗಡಗಳಿದ್ದರೂ ಕೇವಲ ಒಂದು ಪಂಗಡವನ್ನು ನೀವು ಟೀಕಿಸಿದ್ದು ಕೇವಲ ಉದಾಹರಣೆಗೋ ಅಥವಾ ಆ ಪಂಗಡ ತೀರಾ ಮಲಿನಗೊಂಡಿದೆ ಎಂಬ ಕಾರಣಕ್ಕೋ?


ಕುವೆಂಪು: ನನ್ನ ಭಾಷಣ ಬ್ರಾಹ್ಮಣ ರಿಗಾಗಲಿ, ಮಾಧ್ವರಿಗಾಗಲೀ ನಿರ್ದೇಶಿಸಿದ್ದಲ್ಲ; ಒಕ್ಕೂಟದವರಿಗಾಗಿ ಮಾತ್ರ. ಜಗತ್ತಿನ ಪುರೋಹಿತಷಾಹಿ ಅವೈಚಾರಿಕ ಮತ್ತು ಅವೈಜ್ಞಾನಿಕ ಮೂಢ ಭಾವನೆಗಳ ಆಶ್ರಯದಲ್ಲಿ ಶ್ರೀಸಾಮಾನ್ಯರನ್ನು ಹೇಗೆ ವಂಚಿಸುತ್ತಾ ಬಂದಿದೆ ಎನ್ನುವುದನ್ನು ಕುರಿತು ವಿಚಾರವಾದಿಗಳಾಗಿ ಬಾಳನ್ನು ನಡೆಸಬೇಕು ಎನ್ನುವ ತರುಣರಿಗೆ ತಿಳಿಸುತ್ತಿದ್ದೆ. ಪ್ರಾಸಂಗಿಕವಾಗಿ, ನಾನು ಕೆಲವೇ ದಿನಗಳ ಹಿಂದೆ ಆ ಪುಸ್ತಕಗಳನ್ನು ಓದುತ್ತಿದ್ದ ಸಂಗತಿ ಮನಸ್ಸಿನಲ್ಲಿ ಹೊಚ್ಚ ಹೊಸದಾಗಿ ಇದ್ದುದರಿಂದ ಮಧ್ವ-ಜಯತೀರ್ಥರ ನಿದರ್ಶನಗಳನ್ನು ಕೊಟ್ಟೆನಷ್ಟೆ; ಆಮೇಲೆ ಗುಲ್ಲೆದ್ದ ಮತಭ್ರಾಂತರ ಗಲಾಟೆಯಿಂದಲೇ ಗೊತ್ತಾದದ್ದು ನಾನು ಎಂತಹ ಹೇಸಿಗೆಯ ಹೊಂಡಕ್ಕೆ ಕಲ್ಲು ಎಸೆದಿದ್ದೇನೆ ಎಂದು.

ಲಂಕೇಶ್: ತಮ್ಮ ಕಾವ್ಯದ ಮತ್ತು ಮುಖ್ಯ ಕಥಾಸಾಹಿತ್ಯದ (fiction) ಕೇಂದ್ರ ನಿಲುವು ವೈದಿಕ, ಆದರ್ಶಮಯ, ಅವಾಸ್ತವ ಎಂದು ಹಲವರು ಟೀಕಿಸುತ್ತಾರೆ. ಇದಕ್ಕೆ ತಮ್ಮ ಉತ್ತರವೇನು?

ಕುವೆಂಪು: ಅವರ ತಲೆ; ನನ್ನದು ವಿಶ್ವಪ್ರಜ್ಞೆ, ನಾನು ಭಾರತೀಯನಾಗಿ ಅದರಲ್ಲೂ ಕನ್ನಡಿಗನಾಗಿ ಹುಟ್ಟಿದ್ದರಿಂದ ಆ ಸಂಸ್ಕೃತಿಯ ಮತ್ತು ಆ ಭಾಷೆಯ ಪರಿಭಾಷೆಯನ್ನು ಅನಿವಾರ್ಯವಾಗಿ ಉಪಯೋಗಿಸುತ್ತೇನಷ್ಟೆ. ಸತ್ಯ ವೈದಿಕವಾಗಿ ಪ್ರಕಟವಾದ ಮಾತ್ರಕ್ಕೆ, ಅಸತ್ಯವಾಗುವುದಿಲ್ಲ. ಆದರ್ಶಮಯವಾದ ಮಾತ್ರಕ್ಕೆ ಅವಾಸ್ತವವಾಗುವುದಿಲ್ಲ. ನನ್ನ ಭಾಷಣದ ಉದ್ದೇಶವೇ ಒಕ್ಕೂಟದ ಹುಡುಗರನ್ನು ಅಂತಹ ತಪ್ಪುದಾರಿಗೆ ಹೋಗದಿರುವಂತೆ ತಡೆಯಬೇಕು ಎಂಬುದಾಗಿತ್ತು. ಚಿನ್ನದ ಒಡವೆಯನ್ನು ಅಕ್ಕಸಾಲಿ ಮಾಡಿದ ಮಾತ್ರಕ್ಕೆ ಚಿನ್ನ ಅಸತ್ಯವಾಗುತ್ತದೆಯೇ? ಗ್ರಾವಿಟೇಶನ್ ಸಿದ್ಧಾಂತವನ್ನು ನ್ಯೂಟನ್ ಕಂಡುಹಿಡಿದ ಮಾತ್ರಕ್ಕೆ ಅದು ಕ್ರೈಸ್ತವಾಗುತ್ತದೆಯೇ? ವೇದದ ಋಷಿ ಸನಾತನ ಶಾಶ್ವತ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಅದಕ್ಕೆ ಬ್ರಹ್ಮನ್ ಎಂದು ಹೆಸರು ಕೊಟ್ಟ ಮಾತ್ರಕ್ಕೆ ಆ ಸತ್ಯ ಆ ಋಷಿಯ ಸೃಷ್ಟಿಯಾಗುತ್ತದೆಯೇ? ಆ ಸತ್ಯ ಋಷಿಗೆ ಪೂರ್ವದಲ್ಲಿಯೇ ಇದ್ದುದು; ಆ ಋಷಿ ಮಾತ್ರವಲ್ಲ ಮನುಷ್ಯರೆಲ್ಲ ಮುಗಿದ ಮೇಲೆಯೂ ಆ ಸತ್ಯಕ್ಕೆ ಚ್ಯುತಿ ಬರುವುದಿಲ್ಲ, ಗುರುತ್ವಾಕರ್ಷಣ ಶಕ್ತಿ ನ್ಯೂಟನ್ನಿಗೆ ಪೂರ್ವದಲ್ಲಿಯೂ ಇತ್ತು ಮನುಷ್ಯ ಕುಲವೇ ನಾಶವಾದ ಮೇಲೆಯೂ ಇರುತ್ತದೆ. ಅಂತಹ ಸತ್ಯವನ್ನು ನಿತ್ಯ ಸನಾತನ ಶಾಶ್ವತ ಎನ್ನುತ್ತೇವೆ. ಬೇರೆ ಬೇರೆ ದೇಶಗಳು, ಬೇರೆ ಬೇರೆ ಭಾಷೆಗಳೂ ಬೇರೆ ಬೇರೆ ಹೆಸರು ಕೊಡಬಹುದಷ್ಟೆ. ನನ್ನ ಜೀವನದರ್ಶನ ಅಂತಹ ಅಚ್ಯುತ ಸತ್ಯದ ಮೇಲೆ ನಿಂತಿದೆ. ನನ್ನ ಸಾಹಿತ್ಯವೂ ಅದನ್ನೆ ಅಭಿವ್ಯಕ್ತಗೊಳಿಸುತ್ತದೆ. ಅದನ್ನು 'ನಿಮ್ಮಲ್ಲಿ' ಕೆಲವರು ವೈದಿಕ ಎಂದು ನಿಂದಿಸುವಂತೆ 'ಅವರಲ್ಲಿ' ಕೆಲವರು 'ಅವೈದಿಕ' ಎಂದೂ ತಿರಸ್ಕರಿಸುತ್ತಾರೆ. ಆದರೆ ನನ್ನ ಸಾಹಿತ್ಯ ಉದ್ಭವಿಸುವುದು ಬದುಕಿನಿಂದ ಬದುಕಿಗಾಗಿ; ಮತ್ತು ಬದುಕಿನಾಚೆಯ ಬದುಕಿಗಾಗಿ.

ಲಂಕೇಶ್: ಈಚೆಗೊಬ್ಬರು ತಮ್ಮ ಸಾಮಾಜಿಕ ವಿಮರ್ಶೆಯನ್ನು ಕುರಿತು ಹೇಳುತ್ತಾ 'ಕುವೆಂಪು ಅವರ ಮಾತಿನಲ್ಲಿ ಬ್ರಾಹ್ಮಣ ವಿರೋಧಿ ಧ್ವನಿ ಕೇಳಿ ಬರುತ್ತಿದ್ದರೆ ಅದಕ್ಕೆ ಕಾರಣವನ್ನು ಅವರ ವೈಯಕ್ತಿಕ ಅನುಭವದಲ್ಲಿ ಹುಡುಕಬೇಕು' ಎಂದಿದ್ದಾರೆ. ಇದಕ್ಕೆ ತಮ್ಮ ಪ್ರತಿಕ್ರಿಯೆ?

ಕುವೆಂಪು: ಶುದ್ಧ ಅಪಾರ್ಥ! ಮೊದಲನೆಯದಾಗಿ ಅದು ಬ್ರಾಹ್ಮಣ ವಿರೋಧಿ ಧ್ವನಿಯಲ್ಲ, ಅಂದರೆ ಬೌದ್ಧ ಜೈನ, ಕ್ರೈಸ್ತ ಇಸ್ಲಾಂ ಮತ್ತು ಲಿಂಗಾಯತ ಪುರೋಹಿತಶಾಹಿಯನ್ನೂ ಒಳಗೊಂಡಿದೆ. ನನ್ನ ಪುರೋಹಿತಶಾಹಿ ಖಂಡನೆಗೆ ಕಾರಣವನ್ನು ನನಗಿರಬಹುದಾದ ವೈಯಕ್ತಿಕ ಅನುಭವದಲ್ಲಿ ಹುಡುಕುವುದು ಅತ್ಯಂತ ಹಾಸ್ಯಾಸ್ಪದ. ನನ್ನ ಮೂವತ್ತು ನಲವತ್ತು ವರ್ಷದ ಹಿಂದಿನ ಬರಹವನ್ನು ಯಾರೋ ಒಬ್ಬರು ಅಂದು ಟೀಕಿಸಿದುದಕ್ಕಾಗಿ ಇಂದು ನಾನು ನಲವತ್ತು ವರ್ಷಗಳ ಮೇಲೆ ರೊಚ್ಚು ತೀರಿಸಿಕೊಳ್ಳುವುದಕ್ಕೆ ಹಾಗೆ ಮಾತನಾಡಿದೆನೆಂದು ಹೇಳುವುದು ನನ್ನ ವ್ಯಕ್ತಿತ್ವಕ್ಕೆ ಅತ್ಯಂತ 'ಅಲ್ಪತನ' ಆರೋಪಿಸಿದಂತಾಗುತ್ತದೆ. ನಾನು ಅಷ್ಟು 'ಸಣ್ಣ'ವನಲ್ಲ, ನಲವತ್ತು ಐವತ್ತು ವರ್ಷಗಳಿಂದಲೂ ನಾನು ಗದ್ಯ, ಪದ್ಯ ನಾಟಕ ಎಲ್ಲದರಲ್ಲಿಯೂ ಹೇಳುತ್ತಾ ಬಂದಿರುವುದನ್ನೆ ಮೊನ್ನೆಯೂ ಹೇಳಿದ್ದೇನೆ ಅಷ್ಟೆ. ಆದರೆ ಇವರು ಯಾರೂ ನೀವೂ ಸೇರಿ, ನನ್ನ ಬರಹಗಳನ್ನು ಅಷ್ಟು ಆಸ್ಥೆಯಿಂದ ಓದಿಯೇ ಇಲ್ಲ ಎಂಬುದು ನನ್ನ ಗುಮಾನಿ. ಇಡೀ ರಾಮಾಯಣದರ್ಶನವೆ ನನ್ನ 'ದರ್ಶನ'ಕ್ಕೆ ಒಡ್ಡಿದ ಮಹಾ ಪ್ರತಿಮೆಯಾಗಿದೆ. (ನಿಮ್ಮ ಎರಡನೆಯ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನೂ ನೋಡಬಹುದು).



ಲಂಕೇಶ್: 'ಬ್ರಾಹ್ಮಣ' 'ಶೂದ್ರ' 'ಮಣ್ಣಿನ ವಾಸನೆ' ಇತ್ಯಾದಿ ಮಾತು ಬಹಳವಾಗಿ ಕೇಳಿಬರುತ್ತಿರುವ ಈ ಕಾಲದಲ್ಲಿ ಬ್ರಾಹ್ಮಣ, ಶೂದ್ರರ ಭಾಷೆ, ಅನುಭವ ದೃಷ್ಟಿಯನ್ನು ಕುರಿತ ತಮ್ಮ ವಿಶ್ಲೇಷಣೆ ಏನು?

ಕುವೆಂಪು: ಈ ಮಾತುಗಳೆಲ್ಲ ಮತ್ತೆ ಪುರೋಹಿತಶಾಹಿಯ ಪಿತೂರಿಯ ಟಂಕಸಾಲೆಯ ನಾಣ್ಯಗಳೆ. ನಿಮ್ಮನ್ನು ದಿಕ್ಕು ತಪ್ಪಿಸಿ ಬದುಕಿನ ಋಜುಮಾರ್ಗದಿಂದ ಕಟಂಕಿತ ಮಾರ್ಗಕ್ಕೆ ತಳ್ಳುವ ಉಪಾಯದಿಂದಲೆ ಅವರು ಅವನ್ನು ಹುಟ್ಟಿಸಿದ್ದಾರೆ. ನೀವೂ ಹಿಂದಿನಂತೆಯೇ ಇಂದು ಬೆಪ್ಪುಗಳಾಗಿ ಅದಕ್ಕೆ ವಶರಾಗಿ, ಜನರ ಬದುಕನ್ನು ಮತಮೌಢ್ಯದಿಂದ ಪಾರು ಮಾಡಿ ಅವರನ್ನು ವೈಚಾರಿಕ ಬುದ್ಧಿ ಮತ್ತು ವೈಜ್ಞಾನಿಕ ದೃಷ್ಟಿ ಸಂಪನ್ನರಾಗಿ ಪರಿವರ್ತಿಸಿ ಅವರ ಮನಸ್ಸು ಮತ್ತು ಹೃದಯಗಳನ್ನು ಬೆಳಗುವ, ಅವರ ಸೋತ ಹೃದಯಗಳನ್ನು ಹುರಿದುಂಬಿಸುವ, ಮತ್ತು ವರ್ಣ ಜಾತಿ ಭೇದಭಾವನೆಗಳನ್ನೆಲ್ಲ ಕಸದಬುಟ್ಟಿಗೆ ತೂರಿ ಅವರನ್ನು ಸಮಾನತಾವಾದಿಗಳನ್ನಾಗಿ ಪರಿವರ್ತಿಸುವ ಸಾಹಿತ್ಯ ಸೃಷ್ಟಿ ಮಾಡುವ ಬದಲು, ಗುಂಪುಗಾರಿಕೆಗಲ್ಲದೆ ಮತ್ತೆ ಯಾರಿಗೂ ಬೇಡದ ಮತ್ತು ಯಾರಿಗೂ ಅರ್ಥವಾಗದ 'ನವ್ಯ' ನಾಮಕ ವಿಕಾರ ಸೃಷ್ಟಿಗೆ ಮರುಳಾಗಿ ಹೋಗಿದ್ದೀರಿ. ಅಂತಹಕೃತಕ ಅನುಕರಣೀಯ ಪಂಥಗಳನ್ನೆಲ್ಲ ನಿಮ್ಮ ಹೃದಯದಿಂದ ಕಿತ್ತೊಗೆದು, ನಿಮ್ಮವರ ಬದುಕನ್ನು ನೇರವಾಗಿ ನೋಡಿ ಅದರಿಂದ ಉದ್ಭವಿಸುವ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅವರನ್ನು ಮೇಲಕ್ಕೆತ್ತುವ ಧೀರಭಾವಗಳನ್ನೂ ಕ್ರಿಯಾಶೀಲ ಆದರ್ಶಗಳನ್ನೂ ನಿಮ್ಮ ಬರವಣಿಗೆಗಳಲ್ಲಿ ನೀಡಬೇಕಾಗಿರುವುದು ಸದ್ಯದ ನಿಮ್ಮ ಆದ್ಯ ಕರ್ತವ್ಯ. ಪುರೋಹಿತಶಾಹಿಯ ಮೆಚ್ಚುಗೆಗೂ ಹೊಗಳಿಕೆಗೂ ಹಾತೊರೆದು ಬಾಯಿ ಬಿಟ್ಟು ನಿಮ್ಮ ಪೌರುಷ ತೇಜಸ್ಸುಗಳಿಗೆ ಅಪಮಾನ ಮಡಿಕೊಳ್ಳುವುದನ್ನು ಒಡನೆಯೇ ನಿಲ್ಲಿಸಬಿಡಿ.

ಲಂಕೇಶ್: ಕನ್ನಡ ಸಾಹಿತಿಗಳು ಬಹುಕಾಲದಿಂದ ಈ ನಾಡ ಹೆಸರಿನ ಬದಲಾವಣೆ, ಕನ್ನಡ ಮಾಧ್ಯಮ ಕುರಿತು ಮಾತನ್ನಾಡುತಿದ್ದರೂ ಕೇವಲ ಹೆಸರಿನ ಬದಲಾವಣೆ ಮಾತ್ರ ಆಗಿ ಮಾಧ್ಯಮದ ಪ್ರಶ್ನೆ ಹಾಗೇ ಉಳಿದಿದೆ. ಇದು ಸಾಹಿತಿಯ ಪ್ರಭಾವದ ದೌರ್ಬಲ್ಯ ತೋರುತ್ತದೆಯೆ?

ಕುವೆಂಪು: ಹಾಗೇನಿಲ್ಲ, ಈಗಾಗಲೆ ತಕ್ಕಷ್ಟು ಕಾರ್ಯ ನಡೆದಿದೆ. ನಡೆಯುತ್ತಲೂ ಇದೆ. ಜನತೆ, ಸರಕಾರ, ಸಾಹಿತ್ಯ ಪರಿಷತ್ತು ಮತ್ತು ವಿಶ್ವವಿದ್ಯಾಲಯಗಳು ಎಲ್ಲವೂ ಕನ್ನಡ ಮಾಧ್ಯಮ ತತ್ವವನ್ನೊಪ್ಪಿ ಕ್ರಿಯಾಶೀಲವಾಗಿ ಮುಂದುವರೆಯುತ್ತಿವೆ. ಅದು ಪೂರ್ತಿ ಕೈಗೂಡಲು ತುಸು ಸಮಯ ಬೇಕಾಗಬಹುದು ಅಷ್ಟೆ.

ಲಂಕೇಶ್: ಈ ನಾಡ ತರುಣರಿಗೆ ತಮ್ಮ ಹಿತವಚನವೇನು?

ಕುವೆಂಪು: ನನ್ನ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಭಾವಗೀತೆ, ಕಾವ್ಯ ಮಹಾಕಾವ್ಯ ಜೀವನಚರಿತ್ರೆ, ಭಾಷಣ, ವಿಮರ್ಶೆ ಇತ್ಯಾದಿ- ನಾನು ಹೇಳಬೇಕಾದ್ದೆಲ್ಲವನ್ನೂ ಹೇಳಿದ್ದೇನೆ. ಇಷ್ಟವಿರುವ ತರುಣರು ಅವುಗಳನ್ನು ಮನಸ್ಸಿಟ್ಟು ಓದಲಿ. ವಿಶೇಷವಾಗಿ, ಅದರ ಮುನ್ನುಡಿ ಸಹಿತ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಪುಸ್ತಕದ ನಾಲ್ಕು ಭಾಷಣಗಳನ್ನಾದರೂ ಓದಲಿ. ಆದರೆ ನಾಲ್ಕನ್ನೂ ಸಮಗ್ರವಾಗಿ ತೆಗೆದುಕೊಳ್ಳಬೇಕು, ಅಷ್ಟೆ. ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಇವುಗಳೇ ಎಲ್ಲರ ಧ್ಯೇಯಮಂತ್ರಗಳಾಗಲಿ.


ಎಡೂರಪ್ಪಾಕೆ ಸೀರಪ್ಪನಂಗೆ ಮಾತಾಡ್ತನಲ್ಲಾ!

ೕರ ಇದ್ದಕ್ಕಿದ್ದಂತೆ ನಗಾಡಿ,

ಡೂರಪ್ಪೇನು ಹಿಂಗೆ ಮಾತಾಡ್ತನಲ್ಲಾ?" ಎಂದ.

ವುನ್ಯಂಗೆ ಮಾತಾಡ್ತ ಇದ್ದನೊ? ಥೇಟ್ ನಿನ್ನಂಗೆ ದ್ತ ಅವುನಪ್ಪ ನೀನು ಅಂಗೆ ಅಲ್ಲವ" ಎಂದ

ಡೂರಪ್ಪನಾಕ್ಷ ಸೀರ ಮಾವುನಿಗೋಲುಸ್ತಿ?" ಎಂದಳು



ಾಡೀ ಎಡೂರಪ್ಪನ್ನೆ ಸೀರವಮಾವುನಿಗೆ ಸಕ್ಕಾಗದಿಲ್ಲ ಕಣೆ. ಒಂದೆರಡು ವಿಷಯದಲ್ಲಿ ಸಬವುದು."

ಮಾವಿಸಿಯದಲ್ಲೋಲುಸ್ತೀ?"

ಈಗ ಸೀರ ಮಾವ ಯಾವುದೇ ವಿಷಯ ಡದಾದ್ರು 'ಆ ನನಮಕ್ಕಳ ಸ್ವಂಟ ಮುರಿಬೇಕು, ಮಕ್ಕಳ ಮ್ಯಟರೆ ಮುರಿಬೇಕು, ಆ ಸೂಳೆ ಮಕ್ಕಳ ಆನ್ನಿಸಿಬುಡಬೇಕು' ಅಂತನೆ. ಅದೇ ತರ ಪ್ಪನೂ ಮಾತಾಡ್ತನೆ."

ಡೂರಪ್ಪ ಅಂಗ್ಯಲ್ಲ ಮಾತಾಡ್ತನೇನ್ನ?" ಎಂದ ಾವ.

ಊ ಕಣ ಮಾವ. ಚರ್ಚಿಗೆ ಕಲ್ಲು ೋರ ಕೈ ಕಡಿಬೇಕು ಅಂದ. ಆ ನ್ಯಾಯ ಮಾಡದಾದ್ರೆ, ಕೈ ಕಾದೋರ್ಯಾರು ಕೈ ಕಡದ್ರೆ ಲ್ ಕೇಸಾಗದಿಲವೆ. ಆಗ ರ್ಚ ಕಲ್ಲು ಬೀರಿದೋರಿಗಿಂತ ಕೈ ಿೀರ್ನೆ ಜೈಲಿಗಾಕ್ತದೆ."

ಊ ಮತ್ತೆ ಕೋರ್ಟು ಸುಮನೆ ?"

ಚರ್ಚಿಗೆ ಕಲ್ಲು ಬೀರೋರು ೇನೆಯೋರಂತೆ. ಅಂಗಂತ ಆ ಲಿಕ್‌ನೆ ಒಪ್ಪಿಗಂಡವುನೆ."

ಅಂಗರೆ ಅಪರಾಧಿಗಳು ಸಿಕ್ಕವುರೆ

ಲ್ಲಿ ಸಿಕ್ಕಿದ್ದರು ಮಾವ? ಹುಡಿಕಿದ್ರೆ ಿಗದು. ಆ ಮುತಾಲಿಕ್ಕು ವುನಪ್ಪಾ ಅಂದ್ರೇ ಎಡೂರಪ್ಪನ ಶಿಕ್ಷೆ ಾಯ್ತು ಅಂದವುನೆ. ಅಂಗಂದ್ರೇನು? ಕಲ್ಲು ೋರ ವಾರಸುದಾರ ಅವುನೆ ತಾನೆ?"

ಅಂಗೆ ಆಯ್ತಪ್ಪ"

ಮುತಾಲಿಕ್ಕನೆ ಆಗ್ಲೀ, ಅವುನ ಕಡಿಯೋರೆ ಆಗ್ಲಿ ್ನಿ ಕೂಡ ಅರೆಸ್ಟು ಮಾಡದಿಲ್ಲ"

"ಅದ್ಯಾಕೇ?"

"ಅವುರ್ಯಲ್ಲ ಗೃಹಮಂತ್ರಿ ಆಚಾರಿ ಕಡಿಯೋರಂತೆ. ಆ ಆಚಾರಿ ಆರೆಸೆಸ್‌ನೋರು ಹೇಳಿದಂಗೆ ಕೇಳ್ತನಂತೆ. ಅಂಗಾಗಿ ಚರ್ಚಿಗೆ ಕಲ್ಲು ಬೀರಿದೋರಾಗ್ಲಿ, ಮಸೀದಿ ಮುಂಡಕೆ ಹಂದಿ ಬಾಡಾಕಿದೋರಾಗ್ಲಿ ಯಾರೂ ಅರೆಸ್ಟಾಗದಿಲ್ಲ, ಯಲ್ಲಾರು ನಾಟಗ ಮಾಡ್ತ ಕುಂತವುರೆ."

"ಅಂಗರ್ಯಲ್ಲ ಬುರ್ನಾಸು ಅಂತಿಯಾ?"

"ಊ ಕಣಮಾವ. ನ್ಯಾಯಾಂಗವೇ ಬುರ್ನಾಸಾಯ್ತು ಕುಂತದೆ. ಏನಾರ ನ್ಯಡಿಬಾರದ್ದು ನ್ಯಡದ್ರೆ ಆ ಕೂಡ್ಲೆ ಆಯೋಗ ನೇಮಕ ಮಾಡಿ ಬುಡ್ತರೆ. ಆಯೋಗ ತನಿಖೆ ಮಾಡಿ ಇಂಥೋರು ಅಪರಾಧಿಗಳು ಅಂತ ಹೇಳ್ತದೆ. ಆಗ ಸರಕಾರ ಆಕ್ಷನ್ ತಗಬೇಕು ತಾನೆ? ಮೂಲಗೆ ಮಡಗಿ ಸುಮ್ಮನಾಯ್ತದೆ. ನೋಡೀಗ್ಲು ಅಂಗೇ ಆಯ್ತಾ ಅದೆ."

"ಈಗೇನಾಯ್ತಾಯಿದ್ದತೂ?"

"ಚರ್ಚ್ ಮೇಲೆ ದಾಳಿ ಮಾಡಿದ್ವಾರು ಪತ್ತೆಹಚ್ಚ ಅಂತ ಆಯೋಗ ನೇಮಕ ಮಾಡಿದ್ರು. ಅದು ಹಿಂದೂ ಸಂಘಟನೆ ಕೈವಾಡವೆ. ಅದೂ ಭಜರಂಗಿ, ರಾಮಸೇನೆ ಇಂತವ್ಯಲ್ಲ ಕೋತಿ ಕ್ಯಲಸ ಮಾಡ್ಯವೆ ಅಂತ ತೀರ್ಪು ಕೊಟ್ಟದೆ. ಎಡೂರಪ್ಪನ ಆಜ್ಞೆ ಪ್ರಕಾರ ಅವುರ ಕೈ ಕತ್ತರಸಬೇಕೀಗ. ಆದ್ರೆ ಅಂಗೆ ಮಾಡ್ಯರೆ? ಆಯೋಗ ತಗದು ಅತ್ತಗೆ ಮಡಗಿ ಅವುರು ಮಾಡದ್ನೆ ಮಾಡಿಕಂಡೋಯ್ತದೆ. ಅಂತ ಒಗಿಸಿಗೆ ಆಯೋಗ ಯಾಕೆ ನೇಮಕ ಮಾಡಬೇಕು? ತನಿಖೆ ಯಾಕೆ ಮಾಡಬೇಕು ಅಂತ?" ಎಂದು ಉಗ್ರಿ ಆವೇಶದಿಂದ ಭಾಷಣ ಬಿಗಿಯುವಾಗ ಕಾಣಿಸಿಕೊಂಡ ವಾಟಿಸ್ಸೆ,

"ಸಿಚುಯೇಶನ್ನ ತಣ್ಣಗೆ ಮಾಡಕ್ಕೆ ಆಯೋಗ ನೇಮಕ ಮಾಡ್ತರೆ ಕಣೊ ಉಗ್ರಿ. ಅಷ್ಟೂ ಗೊತ್ತಾಗದಿಲವೆ?" ಎಂದ.

"ನಿಜ ಕಣೊ. ಈ ಹಿಂದೆ ಮಾಡಿರೊ ಆಯೋಗ, ಅವು ಕಡುದು ಕಟ್ಟೆ ಹಾಕಿದ್ದು, ಅದ ತಗಂಡು ಇವುರು ಮಾಡಿದ್ದ ನೋಡ್ತಾ ಹೋದ್ರೆ ಉರಿಯೋ ಬೆಂಕಿಗೆ ನೀರ್ವಾಕಿದ್ದು ಬುಟ್ರೆ ಬೆಂಕಿ ಒಡ್ಡಿದೋರು ಇವುರಿಗೆ ಬೇಕಾಗಿಲ್ಲ. ಅದ್ಕೆ ಪಾಪ ಎಡೂರಪ್ಪನಂಥೋರು ಕೈ ಕಡಿರಿ, ನಾಲಗೆ ಸೀಳಿ ಅಂದು ಸುಮ್ಮನಾಯ್ತನೆ ಅತ್ತಗೆ."

"ಒಂದುಕೊಂದು ಸೇರಿಸಿ ಮಾತಾಡ್ತಿಯಲ್ಲ, ಎಡೂರಪ್ಪೆಲ್ಲಿ ನಾಲಿಗೆ ಸೀಳಿ ಅಂದಿದ್ದನೂ?" ಎಂದಳು ಜುಮ್ಮಿ

"ಓ ನೀನು ಸರಿಯಾಗಿ ಕೇಳಿಸಿಕೊಂಡಿಲ್ಲ ಬುಡು ಯಡೂರಪ್ಪನ್ನ ಯಾರಾದ್ರು ಟೀಕೆ ಮಾಡಿದ್ರೆ ಅವುರ ನಾಲಗೆ ಸೀಳಿ ಅಂದವುನೆ ಗೊತ್ತೆ" ಎಂದ ಉಗ್ರಿ.

"ಯಾಕಂಗಂದವುನೆ ಗೊತ್ತೇನೊ ಉಗ್ರಿ? ಆ ಸಿಟಿಯೇಷನ್ ಅರ್ಥ ಮಾಡಿಕೊಬೇಕು ನೀನು. ಅಲ್ಲೀ ಜನಾರ್ದನ ರೆಡ್ಡಿ ಇದ್ದ, ಸ್ರೀರಾಮುಲು ಇದ್ದ, ಅವುರು ಈ ಹಿಂದೆ ಎಡೂರಪ್ಪನ್ನ ಬಾಯಿಗೆ ಬಂದಂಗೆ ಬೈಕಂಡು ತಿರುಗಾಡಿದ್ರು. ಅದ ಎಡೂರಪ್ಪ ತಡಕಂಡಿದ್ದ. ಅದೂ ಅಲ್ದೆ ಜನಾರ್ದನ ರೆಡ್ಡಿ ಜೊತೆ ಮಾತಾಡ್ತಾಯಿರುವಾಗ ಎಮ್ಮೆಲ್ಲೆ ಪಾಟೀಲ ಎಡೂರಪ್ಪನ್ನ ಟೀಕೆ ಮಾಡಿಬುಟ್ಟ. ಆಗ ಎಡೂರಪ್ಪನಿಗೆ ಉರಿಯತ್ತಿಗತ್ತು."

"ಎಡೂರಪ್ಪನಿಗೆ ಉರಿಯತ್ತಿಗಂಡ್ರೆ ಕೇಳಬೇಕೆ. ಅಂಗೆ ಕಡಜದ ಕೈಲಿ ಕಚ್ಚಿಸಿಗೊಂಡೋನಂಗಾಡ್ತನೆ."

"ಅವುನು ಒಂದೊಂದು ಸತಿಯ ತಾನು ಮುಖ್ಯಮಂತ್ರಿ ಅನ್ನದ್ನೆ ಮರತಬುಡ್ತನೇ ಕಣೊ ಉಗ್ರಿ. ಪರೆಗ್‌ಜಾಂಪಲ್ ಮುಖ್ಯಮಂತ್ರಿಯಾದೋನು ಆಡೋ ಮಾತು ಭಾಳ ಇಂಪಾರ್ಟೆಂಟಾಗಿರತವೆ. ಕೆಲವು ಕೂಡ್ಲೆ ಜಾರಿಯಾಗೊತರ ಇರತವೆ. ಹಿಂದೆ ರಾಜರ ಕಾಲದಲ್ಲಿ ಇದೇ ತರ ಆಯ್ತಿತ್ತು, ಅದ್ಕೆ ಅವುರು ಎಚ್ಚತ್ತಗಂಡು ಮಾತಾಡೋರು. ಈ ಎಡೂರಪ್ಪ ಬಿಜೆಪಿ ಲೀಡ್ರಾಗಿದ್ವಾಗ ಸಾಬರ ಕೈಕತ್ತರಸಬೇಕು, ನಾಲಗೆ ಕತ್ತರಸಬೇಕು ಅಂತ ಯೋಚನೆ ಮಾಡತಿದ್ವಾ ಅನ್ನಸ್ತದೆ."

"ಆ ಯೋಚನೆ ಈಶ್ವರಪ್ಪುಂದಲವೇನೊ."

"ಎಜ್ಜಾಟ್ಲಿ ಕರಟ್. ಅವುನು ದನ ಕಡಿಯೋರ ಕೈ ಕತ್ತರಸಬೇಕು, ಅದ ತಿನ್ನೋರ ನಾಲಗೆ ಸೀಳಬೇಕು ಅಂತಿದ್ದ. ಅಂತ ಮಾತು ಈಶ್ವರಪ್ಪ ಎಡೂರಪ್ಪ ಇಬ್ಬರ ಬಾಯಲೂ ಬತ್ತವೆ ಅಂದ್ರೆ ಸುಮ್ಮಸುಮ್ಮನೆ ಬರದಿಲ್ಲ. ಮೀಟಂಗಲಿ ಮಾತಾಡಿರತರೆ. ಅದ್ನೆ ಯೋಚನೆ ಮಾಡಿರತರೆ. ಅದ್ಕೆ ಅವು ಸಾರವಜನಿಕ ಸಭೆಲೂ ಈಚಗೆ ಬತ್ತವೆ. ಏನು ಮಾಡಕ್ಕಾಗಲ್ಲ, ಅವುರ ಆಲೋಚನೆನೆ ಅವುರ ನಾಲಗೆ."

"ಬಿಜೆಪಿಗಳು ವಳ್ಳೆ ಮಾತಾಡ್ತರೆ ಅಂತ ತಿಳಕಂಡಿದ್ದೆ ನಾನು" ಎಂದ ಸೀರ.

"ನಾನೂ ಅಂಗೆ ಅನ್ನಕಂಡಿದ್ದೆ" ಎಂದಳು ಜುಮ್ಮಿ.

ಆಗ ನಗಾಡಿದ ವಾಟಿಸ್ಸೆ,

"ಅಲ್ಲಾ ಕಣಕ್ಕಾ, ಆ ಈಶ್ವರಪ್ಪ ಹೇಳ್ತನೆ 'ನಾನು ಆರೆಸೆಸ್ ಸೇರಿ ಮನುಸಾದೆ. ನನಿಗೆ ವಳ್ಳೆ ಸಂಸ್ಕಾರ ಸಿಕ್ತು' ಅಂತನೆ. ಅಂಗನ್ನ ಕಂಡೆ ಹಿಂಗವುನೆ. ಇನ್ನ ಮದ್ಲುಯಂಗಿದ್ದ ಅಂತ ನೀನೆ ಲ್ಯಕ್ಕ ಹಾಕು."

"ಅದೆಯಪ್ಪ, ಯಂಗಿದ್ದಾ?"

"ಸಂಪಂಗಿ, ಸಿ.ಟಿ. ರವಿ ಸೇರಿಸಿದ್ರೆ ಯಂಗಿರತನ್ನೊ ಅಂಗಿದ್ದೇನೊ."

"ಏ, ಸಂಪಂಗಿ, ಸಿ.ಟಿ. ರವಿ ಸೇರಿಸಿದ್ರೆ ಹ್ಯಾಂಡ್ ಸಮ್ಯಾಯ್ತನೆ ಕಣೊ. ಜ್ವತೆಗೆ ಸ್ವಲುಪ ರೇಣುಕಾಚಾರಿನೂ ಮಿಕ್ಸವಡಿಬೇಕು" ಎಂದು ಉಗ್ರಿ ನಕ್ಕ.

"ಈಶ್ವರಪ್ಪ ಹೆಂಗಸರ ವಿಷಯದಲ್ಲಿ ರೇಣುಕಾಚಾರಿತರ ಅಲ್ಲ ಕಣೊ."

"ಏ ನಾನು ಆಕಾರ ಮಿಕ್ಸ್ ಮಾಡದೆ ಕಣೊ, ಗುಣನಲ್ಲಾ."

"ರೇಣುಕಾಚಾರಿ ಯಾಕೊ ತಣ್ಣಗಾದನಲ್ಲಾ" ಎಂದಳು ಜುಮ್ಮಿ.

"ಅವುನು ಮಂತ್ರಿಯಾಗಿ ಬೀಗನ ಅಂತ ಮೈಸೂರಿಗೆ ಬಂದಿದ್ನಂತೆ ಕಣಕ್ಕ. ಬಿಜೆಪಿಗಳ್ಯಾರೂ ಅತ್ಯಕೋಗಲಿಲವಂತೆ. ಅವುನು ಎಲ್ಲೇ ಹೋದ್ರು ಬಿಜೆಪಿಗಳು ದೂರಹೋದರಂತೆ. ಅದೂ ಅಲ್ದೆ ಜಯಲಕ್ಷ್ಮಿ ಕೋರ್ಟಿಗೆ ಯಳದಿದ್ದಳಂತೆ. ಪಾಪ ಕೋರ್ಟಿಗೆ ಬಂದು ಕಟಕಟೆಲಿ ನಿಂತಗಂಡಿದ್ನಂತೆ" ಎಂದ ವಾಟಿಸ್ಸೆ.

"ಅರರರೆ, ಏನು ಸರಕಾರನಯ್ಯ ಎಡೂರಪ್ಪಂದು. ಅವುನ ಶಾಸಕರು, ಮಂತ್ರಿಗಳ್ಯಲ್ಲ ಕೋರ್ಟಿಗೆ ಅಲಿತ ಕುಂತವುರೆ. ಅದೂ ಸಾಲ್ದು ಅಂತ ಸ್ವತಃ ಅವುನೆ ಕೈಕಡಿಸಿ, ನಾಲಗೆ ಸೀಳಿ, ಕುಂಡಿ ಕವುರಿ ಅಂತನೆ. ಅದ ನೋಡಿ ರೆಡ್ಡಿಗಳು ನಗ್ತರೆ" ಎಂದ ಉಗ್ರಿ.

"ರೆಡ್ಡಿಗಳು ನಗ್ತರೆ ಅಂದ್ರೆ ಅವುರು ಮೊದುಲ್ನೆದಾಗಿ ನಾಗರಿಕರೆ ಅಲ್ಲ ಕಣೊ ಉಗ್ರಿ. ಮೂಲತಃ ಅವುರು ಹೈನಾಗಳು. ಪ್ರಾಣಿ ಸಾಯದಕೂ ಮದ್ಲೆ ತಿಂತವೆ ಅವು. ಅದೇ ತರ ರೆಡ್ಡಿಗಳು. ಪ್ರವಾಹದ ಜನಗಳ ಹ್ಯಣಗಳ ಮ್ಯಾಡಿ ಬಂಡಾಯ ಏಳ್ತರೆ, ಉತ್ಸವ ಮಾಡ್ತರೆ, ಮ್ಯರಿತರೆ, ನಗತರೆ. ಅಂಥೊರ ಸುದ್ದಿ ಯಾಕೆ ಮತಾಡ್ತಿ ಸುಮ್ಮನಿರತ್ಲಗೆ." ●



ಕಬ್ಬುರಿಗಾಗಿ ಇಂಗ್ಲಿಷ್ ಕೊರೆತ

ಮೊನ್ನೆ ಉಡುಪಿಯಲ್ಲಿ ಒಂದು ಸಾಂಸ್ಕೃತಿಕ ಸಭೆ ಇತ್ತು, ಬಹುಕಾಲದಿಂದ ಇಂಥ ಸಭೆಗಳಿಗೆ ಹೋಗಿರುವ ಈ ಸಲ ಅಲ್ಲಿ ಆಗಬಹುದಾದ್ದನ್ನು ನೆನೆಸಿಕೊಂಡು ಸುಮ್ಮನಾದೆ. ಅನೇಕ ವಿಷಯಗಳು ಚರ್ಚಿಸದಿದ್ದರೇ ಚೆಂದ. ಚರ್ಚಿಸುತ್ತಾ ಚರ್ಚಿಸುತ್ತಾ ನಮ್ಮ ಮನಸ್ಸು ಸಾರ್ವಜನಿಕರು ನಡೆವ ಕಾಲುದಾರಿಗಳಾಗುತ್ತವೆ. ಅಲ್ಲಿ ಗರುಕೆ ಬೆಳೆಯುವುದಿಲ್ಲ.


ದೇನೇ ಇರಲಿ, ಅಲ್ಲಿ ಆಯಿತೆಂದು ಹೇಳಲಾದ ಒಂದು ಸಣ್ಣ ವಿಷಯ ನನ್ನ ಮನಸ್ಸಿನಲ್ಲಿದೆ. ನಾನೂ ಅನೇಕ ಸಲ ದನ್ನು ಮಾಡಿರುವುದರಿಂದ ಚಿಂತಿಸಿ ಇದನ್ನು ಹೇಳುತ್ತಿದ್ದೇನೆ. ಸುಮಾರು ಐನೂರು ಜನರಿದ್ದ ಆ ಸಭೆಗೆ ಪ್ರಫುಲ್ ಕರ್ ಎಂಬ ಮಹಿಳೆ ಬಂದಿದ್ದರು. ಅವರಿಗೆ ಕನ್ನಡ ಬರುವುದಿಲ್ಲ, ಅವರಿಗೆ ಅರ್ಥವಾಗಲಿ ಎಂದು ನಮ್ಮ ಕನ್ನಡ ಲೇಖಕರು ತಮ್ಮ ಭಾಷಣಗಳನ್ನು ಇಂಗ್ಲಿಷ್‌ನಲ್ಲಿ ಮಾಡಿದರು. ವಿಚಿತ್ರವೆಂದರೆ, ಅವರು ಕನ್ನಡದಲ್ಲಿ ಮಾತಾಡಿ ್ ಜಯಕರ್ ಅವರಿಗೆ ವಿಷಯ ಏನೆಂದು ವಿವರಿಸಿದ್ದರೆ ಸಾಕಾಗಿತ್ತು, ಸೂಕ್ಷ್ಮಜ್ಞಳಾದ ಆ ಹೆಣ್ಣು ಮಗಳು ಿ ಅರ್ಥಮಾಡಿಕೊಳ್ಳುತ್ತಿದ್ದಳು.

ಬ್ಬರಿಗಾಗಿ ಐನೂರು ಜನಕ್ಕೆ ವಿದೇಶ ಭಾಷೆಯಲ್ಲಿ ಕೊರೆಯುವುದು ವಿಚಿತ್ರ, ಅಸಹಜ ಮತ್ತು ಮೂರ್ಖತನ ಭಾರತೀಯರಿಗೆ ಅನ್ನಿಸುವುದೇ ಇಲ್ಲ, ಇಲ್ಲಿ ಇಂಗ್ಲಿಷ್ ಜ್ಞಾನ ಪ್ರದರ್ಶಿಸಲು ಸ್ಪರ್ಧೆಯೇ ಏರ್ಪಡುತ್ತದೆ. ಇದು ್ ಗುಲಾಮರಾಗಿದ್ದ ದೇಶಗಳಲ್ಲಿ ಬಿಟ್ಟರೆ ಬೇರೆಲ್ಲೂ ಕಂಡುಬರುವುದಿಲ್ಲ, ತಮ್ಮ ಮಾತೃಭಾಷೆಯಲ್ಲಿ, ರಾಜ್ಯಭಾಷೆಯಲ್ಲಿ ಡುವುದು ಕೇವಲ ಸ್ವಾಭಿಮಾನದ ದೃಷ್ಟಿಯಿಂದ ಒಳ್ಳೆಯದಲ್ಲ; ಇದು ವಿಷಯ ಹೇಳಲು, ಸಮರ್ಪಕವಾಗಿ ಸಹಾಯಕವಾಗುತ್ತದೆ. ನಾನು ಇಂಗ್ಲಿಷ್‌ನಲ್ಲಿ ಬರೆಯತೊಡಗಿದರೆ, ಮಾತಾಡತೊಡಗಿದರೆ ಅನೇಕ ಸಲ ಚನೆಯ ದಾರಿಯೇ ತಪ್ಪುತ್ತದೆ.

ಹೊರೈಸನ್ಸ್ !


ನನ್ನೆದುರು ಎರಡು ವಾರದಿಂದ ಒಂದು ಇಂಗ್ಲಿಷ್ ಪುಸ್ತಕವಿದೆ. ಅದನ್ನು ಕೊಟ್ಟವರು ಅದರ ಕರ್ತೃ ಕೃಷ್ಣಮೂರ್ತಿ ಎಂಬುವರು. ಕೇಂದ್ರ ಸರ್ಕಾರದ ಬಜೆಟ್‌ಗೆ ಪ್ರತಿಕ್ರಿಯೆ ನೀಡಲು ಈ ಕೃಷ್ಣಮೂರ್ತಿ ಬಂದಿದ್ದರು. ನಮ್ಮಿಬ್ಬರ ಪ್ರತಿಕ್ರಿಯೆಯನ್ನೂ ನಮ್ಮ ಕಚೇರಿಯಲ್ಲೇ ದೂರದರ್ಶನದವರು ತೆಗೆದುಕೊಂಡರು. ಆಗ ಕೃಷ್ಣಮೂರ್ತಿ ತಮ್ಮ **INDIA ON TO NEW HORIZONS** ಎಂಬ ಪುಸ್ತಕ ಕೊಟ್ಟರು. ಅದನ್ನು ಇಸಿದುಕೊಳ್ಳುತ್ತಾ "ಕನ್ನಡದಲ್ಲಿ ಮಾತಾಡ್ತೀರಲ್ಲ ಕನ್ನಡದಲ್ಲೇ ಏಕೆ ಬರೆಯಬಾರದು?" ಅಂದೆ. ಈ ಕೃಷ್ಣಮೂರ್ತಿ ಯವರಲ್ಲಿ ಉತ್ತರ ಇರಲಿಲ್ಲ. ಅವರು ಹೋದಮೇಲೆ ಪುಸ್ತಕ ಓದಲು ಯತ್ನಿಸಿದೆ. ಇದು ಇಂಗ್ಲಿಷ್‌ಗೆ ಕಳಂಕ ಮಾತ್ರವಲ್ಲ, ಕೃಷ್ಣಮೂರ್ತಿಯವರ ಮಿದುಳಿಗೆ ಬರೆ ಹಾಕಿದಂತೆ ಇತ್ತು. ನಮ್ಮ ದೇಶದ ಜನರ ಶಕ್ತಿ ಎಂಥ ವ್ಯರ್ಥ ಕೆಲಸಗಳಲ್ಲಿ ವ್ಯಯವಾಗುತ್ತಿದೆ ಎಂದು ಯೋಚಿಸತೊಡಗಿದೆ. ಆಮೇಲೆ ಈ ಕೃಷ್ಣಮೂರ್ತಿಯವರ ಸಾಧನೆ, ಸ್ಥಾನಮಾನಗಳ ಬಗ್ಗೆ ಪುಸ್ತಕದ ಬೆನ್ನಲ್ಲಿದ್ದುದು ನೋಡಿ ನಕ್ಕೆ. ಇಲ್ಲಿ ಯಾವುದೂ ಸುಮ್ಮನೇ ಆಗಿರುವುದಿಲ್ಲ !

(ಮಾರ್ಚ್ 29, 1992)



ಅವರಿಗೇನು ಮಾಡಬೇಕು ಮಕ್ಕಳಾ?

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಮೊದಲೇ ಭಾನುವಾರ. ಅವತ್ತು 'ಸಂಡೆ ಪೆಷಲ್' ಇದ್ದರೇನೇ ಅದೊಂದು ಮನೆ ಅನ್ನಿಸಿಕೊಳ್ಳೋ ಯೋಗ್ಯತೆ ಬರೋದು. ಇಲ್ಲದಿದ್ದರೆ ಅದು ಮನೆಯೇ ಅಲ್ಲ. ಅಂತಹ ದ್ದರಲ್ಲಿ ಅವತ್ತು ಬೀಗರ ಊಟ. ಅದೂ 'ಈಗರ್ಭ' ಶ್ರೀಮಂತರ ಮನೆಯದ್ದು. ಅದೆಷ್ಟೋ ಬನ್ನೂರು ಕುರಿಗಳನ್ನ ಚಕಚಕಾ ಅನ್ನಿಸಿದ್ದರಂತೆ. ಇದು ಸಾಲದು ಅಂತ ಟನ್ ಗಟ್ಟಲೆ ಕೋಳಿ ತರಿಸಿದ್ದರಂತೆ. ಇರಬೇಕು. ಯಾಕೆಂದರೆ ಒಬ್ಬೊಬ್ಬರಿಗೂ ಒಂದು ಕೋಳಿ ಕಾಲಿನ ಖಾದ್ಯ ಬರುವಂತೆ ಅದೆಂತದೋ 'ಪೆಷಲ್ ಡಿಸ್' ಮಾಡಿಸಿದ್ದರು. 'ಅಡಿಗೆಯೋರು ಎಲ್ಲಿಯೋ ರೂಂತೀರಿ.... ಬೆಂಗ್ಳೂರ ಕಡೆ.. ಯಾವ ಬೆಂಗ್ಳೂರು... ತಗ್ಗಿಸಿ ಅದ್ನ... ಬೊಂಬಾಯಿಂದ ಬಂದರಂತೆ. ಬದ್ನಕ್ಕೂ ಅಲ್ಲಿಂದ್ಲೆ ಜನ ತಂದರಂತೆ' ಎಂದು ಮುಂತಾಗಿ ಜಾನಪದ ಕತೆಯಂತೆ 'ಬೀಗರೂಟದ' ಗಮಲು ಈ ಸುತ್ತಲೆಲ್ಲ ಗಾಳಿಯಲ್ಲಿ ಹಾರಾಡುತ್ತಿತ್ತು. ಈ 'ಐಭೋಗದೂಟ' ನೋಡುವ ವಾಂಚಲ್ಯ ತುಂಬಿತು. ಮದುವೆ, ಬೀಗರೂಟಕ್ಕೆ ಸೇರುವ ಜನರ ಆಧಾರದ ಮೇಲೇ ಅವರ ಜನಪ್ರಿಯತೆ, ಅದಕ್ಕೂ ಮಿಗಿಲಾಗಿ 'ಸಾಹುಕಾರಿಕೆ' ನಿಂತಿರುವುದು ಎಂದು ನಂಬಿದವರಾದ್ದರಿಂದ ಊರಿಗೆಲ್ಲ 'ಪತ್ರಿಕೆ' ಹಂಚುವ ಕಾರ್ಯ ಪರಂಪರಾನುಗತವಾಗಿ ನಡೆಯುತ್ತ ಬಂದಿರಲಾಗಿ ನಮ್ಮ ಮನೆಗೂ ಬಂದಿತ್ತು. ಗುಂಪಿನಲ್ಲಿ ಗೋವಿಂದ ಆದೆ. 'ಯಾರೂ ಯಾಕ್ಬಂದೆ, ನಿನ್ನ ಕರ್ದಿದ್ದೋರು ಯಾರು' ಅಂತ ಕೇಳ್ಲಿಲ್ಲ ಸದ್ಯ. ಶ್ರೀಮಂತರ ಮನೆ ಊಟ ಆದರೂ ಸೊಗಸಾಗಿಯೇ ಇತ್ತು. ಕಂಠಭರ್ತಿ ಕತ್ತರಿಸಿದೆ. ದಢೂತಿ ಕಡಪ್ಪೆ ನುಂಗಿದ ನಂತರ ನಾಗರಹಾವು ಸೋಮಾರಿತರಹ ಬಿದ್ಕೊಳ್ಳಲ್ವೆ ಹಾಗೇನೆ ಅಲ್ಲೇ ಬಿದ್ಕೋಬೇಕು ಅನ್ನಿಸುತ್ತಿತ್ತು. ಕಷ್ಟದಿಂದ ಮನೆ ತಲುಪಿದೆ. ಹಾಸಿಗೆಗೆ ಮೈ ಕೊಟ್ಟರೆ ಸಾಕಲ್ಲಪ್ಪ ಎಂದು. ಅದು ಕಂಡು ತಕ್ಷಣ ಬಿದ್ಕೊಂಡೆ. ದೇಹಕ್ಕೆ ಸಮಾಧಾನ ಆದಂಗಾಯಿತು. ಹಾಳಾದ ನಿದ್ದೆ ಅನ್ನೋದು ಬರಲಿಲ್ಲ. ಇದಕ್ಕೆ ರಾಮಬಾಣ ಅಂತಾವ 'ಉದ್ಗ್ರಂಥ' ಯಾವುದಾದರೂ ಇದೆಯ ಅಂತ ಕಣ್ಣಲ್ಲೇ ತಡಕಾಡಿದೆ. ಯಾವುದೂ ತಕ್ಷಣಕ್ಕೆ ಕಣ್ಣಿಗೆ ಬೀಳಲಿಲ್ಲ. ಪಕ್ಕದಲ್ಲೇ ಅನಾಥವಾಗಿ ಬಿದ್ದಿದ್ದ ದಿನಪತ್ರಿಕೆ ಹಿಡಿದುಕೊಂಡೆ. ಪುಟ ಮಗುಚುವಷ್ಟರಲ್ಲಿ ನಿದ್ರಾದೇವಿ ತಬ್ಬಿಕೊಂಡಳು.

ಗಡ್ಡದ್ದಾದ ಬಾಡಿನ ಊಟದ ಕಾರಣವೋ ಅಥವಾ ಸತ್ಕುಲಪ್ರಸೂತರೂ, ಸದ್ಗುಣ ಸಂಪನ್ನರೂ, ಸಚ್ಚಾರಿತ್ರ್ಯರೂ ಇನ್ನೂ ವಗ್ಗೈರೆ ವಗ್ಗೈರೆ ಆದ ಆಳುವ ಮಂದಿಯ ವಾಕ್‌ಝರಿಯ ಪರಿಣಾಮವೋ ತಿಳಿಯದು. ಒಂದು ಕನಸು ಬಿತ್ತು. ಆ ಕನಸು ಎಂತಹದ್ದು ಎಂದರೆ....

ಮೇಷ್ಟ್ರುಗಳಿಗೆ ತಮ್ಮ ವೃತ್ತಿಯೇ ಸರ್ವೋತ್ಕೃಷ್ಟವಾದುದು ಎಂಬ ಭ್ರಮೆ ಆವರಿಸಿರುತ್ತಲ್ಲಾ, ಅವರ ಪ್ರಪಂಚವೇ ಶಾಲಾ ಆವರಣ ಆಗಿರುತ್ತಲ್ಲಾ.... ಅಲ್ಲೇ ನಡೆದ ಸಂಗತಿ ಇದು. ಬಾಲಕರಾಗಿದ್ದಾಗ ಮೇಷ್ಟ್ರು ಬಾಯಿಪಾಠ ಮಾಡಿಸುತ್ತಿದ್ದ ವಿಧಾನಾನ, ವಿಷಯಾನ ಕರಾರುವಾಕ್ಕಾಗಿ ಗ್ರಹಿಸುವಂತೆ ಮಾಡುತ್ತಿದ್ದ ರೀತೀನ ನೆನಪಿಸಿಕೊಳ್ಳಿ. ಇತ್ತೀಚಿನವರಿಗೆ ಅದರ ಪರಿಚಯ ಇರಲಾರದು. ಉದಾಹರಣೆಗೆ ಹೇಳುವುದಾದರೆ ಅವರೇನು ಮಾಡುತ್ತಿದ್ದರಪ್ಪ ಎಂದರೆ:... ಧರಣಿ ಮಂಡಲ ಮಧ್ಯದೊಳಗೆ ಎನ್ನುತ್ತಿದ್ದರು. ಹುಡುಗರೆಲ್ಲರೂ ತಮ್ಮ ಶಕ್ತಿಯನ್ನೆಲ್ಲ ಗಂಟಲಲ್ಲಿ ಕ್ರೋಢೀಕರಿಸಿರುವಂತೆ, ಎಲ್ಲರೂ ಒಟ್ಟಿಗೆ ಧರಣಿ ಮಂಡಲ ಮಧ್ಯದೊಳಗೆ ಎಂದು ಚಾವಣಿ ಹಾರುವಂತೆ ಅರಚುತ್ತಿದ್ದರು. ಹೀಗೇ ಇದು ಮುಂದುವರೆಯುತ್ತಿತ್ತು. ಇದೇ ಧಾಟಿಯಲ್ಲಿ ಬಿದ್ದ ಕನಸು ಏನಪ್ಪ ಎಂದರೆ....

ಶಾಲೆಯ ಟೀಚರ್ ಅಂದರೆ ಹೆಣ್ಣು ಮೇಡಂ (ಗಂಡು ಮೇಡಂ ಅಂತಾನೂ ಇದಾರಾ!) ನಿಂತಿದ್ದಾರೆ. ವಿದ್ಯಾರ್ಥಿಗಳು ಕುತೂಹಲದಿಂದ ಅವರನ್ನು ವೀಕ್ಷಿಸುತ್ತಿದ್ದಾರೆ.


ಮೇಡಂ: ಮಕ್ಕಳೇ ನಾನು ಹೇಳಿದ ಹಾಗೇ ನೀವೂ ಹೇಳಬೇಕು. ಏನು ಹೇಳಿ?

ವಿದ್ಯಾರ್ಥಿ ಸಮೂಹ: ನೀವು ಹೇಳಿದ ಹಾಗೇ ಹೇಳಬೇಕು.

ಮೇಡಂ: ಮಠ, ಮಂದಿರ, ಮಸೀದಿ, ಚರ್ಚ್‌ಗಳು ಪವಿತ್ರ

ವಿ.ಸ.: ಮಠ, ಮಂದಿರ, ಮಸೀದಿ, ಚರ್ಚ್‌ಗಳು ಪವಿತ್ರ

ಮೇಡಂ: ಅವುಗಳ ಮೇಲೆ ದಾಳಿ ಮಾಡಬಾರದು.
ವಿ.ಸ.: ಅವುಗಳ ಮೇಲೆ ದಾಳಿ ಮಾಡಬಾರದು.
ಮೇಡಂ: ಡಾಳಿ ಮಾಡಿದರೇನು ಮಾಡಬೇಕು?
ವಿ.ಸ.: ದಾಳಿ ಮಾಡಿದರೇನು ಮಾಡಬೇಕು?
ಮೇಡಂ: ದಾಳಿಕೋರರ ಕೈ ಕತ್ತರಿಸಬೇಕು.
ವಿ.ಸ.: ದಾಳಿಕೋರರ ಕೈ ಕತ್ತರಿಸಬೇಕು.
ಮೇಡಂ: ಹೇಗೆ ಕತ್ತರಿಸಬೇಕು?
ವಿ.ಸ.: ಹೇಗೆ ಕತ್ತರಿಸಬೇಕು?
ಮೇಡಂ: (ಅಭಿನಯಪೂರ್ವಕವಾಗಿ) ಹೀಗೆ...



ವಿ.ಸ.: (ಅನುಕರಿಸುತಾ) ಹೀಗೆ...
ಮೇಡಂ: ಗುಡ್. ಹಿಂದೂಧರ್ಮ ಪವಿತ್ರ
ವಿ.ಸ.: ಗುಡ್ ಹಿಂದೂಧರ್ಮ ಪವಿತ್ರ
ಮೇಡಂ: ಗುಡ್, ಹಿಂದೂಧರ್ಮ ಅಲ್ಲ..... ಬರೀ ಹಿಂದೂ ಧರ್ಮ ಪವಿತ್ರ.
ವಿ.ಸ.: ಬರೀ ಹಿಂದೂಧರ್ಮ ಪವಿತ್ರ.
(ಮೇಡಂ ಗಲಿಬಿಲಿಗೊಂಡು, ತಲೆ ಹೊಗೆಯುವರು).
ಮೇಡಂ: say as I say.... ಹಿಂದೂ ಧರ್ಮಪವಿತ್ರ
ವಿ.ಸ.: ಹಿಂದೂಧರ್ಮ ಪವಿತ್ರ.
ಮೇಡಂ: ಅದನ್ನು ಹೀಯಾಳಿಸಬಾರದು.
ವಿ.ಸ.: ಅದನ್ನು ಹೀಯಾಳಿಸಬಾರದು.
ಮೇಡಂ: ಹೀಯಾಳಿಸುವವರು ದೇಶದ್ರೋಹಿಗಳು
ವಿ.ಸ.: ಹೀಯಾಳಿಸುವವರು ದೇಶದ್ರೋಹಿಗಳು
ಮೇಡಂ: ಹಿಂದೂಧರ್ಮ ಹೀಯಾಳಿಸುವವರ
ವಿ.ಸ.: ಹಿಂದೂಧರ್ಮ ಹೀಯಾಳಿಸುವವರ
ಮೇಡಂ: ನಾಲಿಗೆ ಕತ್ತರಿಸಬೇಕು
ಮೇಡಂ: ನಾಲಿಗೆ ಕತ್ತರಿಸಬೇಕು
ಮೇಡಂ: ಹೇಗೆ ಕತ್ತರಿಸಬೇಕು?
ವಿ.ಸ.: ಹೇಗೆ ಕತ್ತರಿಸಬೇಕು?
ಮೇಡಂ: (ಅಭಿನಯ ಪೂರ್ವಕವಾರಿ) ಹೀಗೆ
ವಿ.ಸ.: (ಅನುಕರಿಸುತಾ) ಹೀಗೇ....

(ಕೈ ನಾಲಿಗೆ ಕತ್ತರಿಗೆ ಅನುರೂಪವಾಗಿರುವವರೇ ಕಂಡರು. ಕಾರ್ಯೋನ್ಮುಖವಾಯಿತು ವಿದ್ಯಾರ್ಥಿ ಸಮೂಹ. ಇತರರೇನು ಕಡುಬು ತಿನ್ನುತ್ತಾ ಕುಳಿತಿರುವ ಜಾಯಮಾನದವರಲ್ಲ, ಅವರೂ ಇದೇ ಮಾಡಿದರು! ದೇಶದ ತುಂಬ ನಾಲಿಗೆ, ಕೈ ಇಲ್ಲದವರದ್ದೇ ದರ್ಬಾರು!

ಬೆಚ್ಚಿಬಿದ್ದೆ. ಮೈ ಎಲ್ಲ ಬೆವತಿತ್ತು. ಮಗ್ಗುಲಾದೆ. ಮತ್ತೆ ಶಾಲೆಯ ದೃಶ್ಯಾವಳಿ ಕಂಡಿತು)

ಮೇಡಂ: ಹೇಳಿ ಮಕ್ಕಳಾ... ಐಪಿಎಲ್ ಎಂದರೇನು?

ವಿ.ಸ.: ಇಂಡಿಯನ್ ಪ್ರೀಮಿಯರ್ ಲೀಗ್ (ಎಲ್ಲರಿಗೂ ಕ್ರಿಕೆಟ್ ಜ್ಞಾನ ತುಂಬಿತುಳುಕುವಂತಿತ್ತು. ನಮ್ಮ ಜನಪ್ರಿಯ ದಿನಪತ್ರಿಕೆ ಆರಾಧಕರಿರಬೇಕು ಈ ಹೈಕಳು. ರಾಹುಲ್ ದ್ರಾವಿಡ್‌ಗೆ ಅರ್ಧ ಗಂಟೆಗೂ ಕಡಿಮೆ ಅವಧಿಯ ಆಪರೇಷನ್ನನ್ನೇ ಘನಂದಾರಿ ವಿಷಯ ಅಂತ ತಿಳಿದು ಮೊದಲನೆ ಪುಟದ ಮೊದಲ ಸುದ್ದಿ ಮಾಡಿತ್ತಲ್ಲ ಆ ಜವಾಬ್ದಾರಿ ಪತ್ರಿಕೆಯನ್ನು ಮನನ ಮಾಡುವವರಿರಬೇಕು!)

ಮೇಡಂ: ಗುಡ್, ವೆರಿಗುಡ್.. ಅಲ್ಲಿ ಆಡುವ ಮ್ಯಾಚ್ ಎಂತಹದ್ದು?

ವಿ.ಸ.: ಟ್ವೆಂಟಿ- ಟ್ವೆಂಟಿ ಮಿಸ್

ಮೇಡಂ: ವೆರಿ ಗುಡ್. ಯಾವ ದೇಶವಾದರೂ ಆಡಬಹುದಾ?

ವಿ.ಸ.: ಆಗಬಹುದು ಮಿಸ್.

ಮೇಡಂ: ಮಕ್ಕಳಾ ಯೋಚಿಸಿ ಹೇಳಿ... ಒಂದು ದೇಶದವರನ್ನ ಸೇರಿಸೋಲ್ಲ.... ಯಾವ ದೇಶ ಹೇಳಿ.....

ವಿ.ಸ.: ಪಾಕಿಸ್ತಾನ ಮಿಸ್


ಮೇಡಂ: ಅವರನ್ನೂ ಸೇರಿಸಿ ಕೊಳ್ಳಿ ಎನ್ನುವವರಿಗೇನು ಮಾಡಬೇಕು?

ವಿ.ಸ.: ಪಾಕಿಸ್ತಾನಕ್ಕೆ ಓಡಿಸಬೇಕು ಮಿಸ್!

ಮೇಡಂ: ಗುಡ್, ವೆರಿ ಗುಡ್, ವೆರಿ ವೆರಿ ಗುಡ್!

(ಭಯದಿಂದ ನಡುಗಿದೆ. ಸದ್ಯ ಕನಸು!) ●

ಕಂಪೆನಿಗಳ ದಲ್ಲಾಳಿ ಹೆಗ್ಗಡೆ



"ಹೇಳುವುದು ಶಾಸ್ತ್ರ ಇಕ್ಕುವುದು ಗಾಳ" ಈ ಮಾತು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರಿಗೆ ಹೇಳಿಮಾಡಿಸಿದಂತಿದೆ. ಕೃಷಿ ಮೇಳ, ಗ್ರಾಮಾಭಿವೃದ್ಧಿ ಸಂಘ ಮುಂತಾದ ಗಿಮಿಕ್‌ಗಳಿಂದ ಜನರನ್ನು ಸೆಳೆಯುತ್ತಿದ್ದ ಹೆಗ್ಗಡೆಯವರ ನಿಜಬಣ್ಣ ಇದೀಗ ಜಗಜ್ಜಾಹೀರಾಗಿದೆ.

ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ವಿಶ್ವ ತುಳು ಸಮ್ಮೇಳನದಲ್ಲಿ ತಾನೋರ್ವ 'ಪರಿಸರಪ್ರೇಮಿ' ಎಂಬ ಹಣೆಪಟ್ಟಿಯನ್ನು ಅಂಟಿಸಿಕೊಂಡು ತಿರುಗಾಡುತ್ತಿದ್ದ 'ಜಯಶ್ರೀಕೃಷ್ಣ ಪರಿಸರ ಪ್ರೇಮಿ' ಸಮಿತಿಯ ಅಧ್ಯಕ್ಷನಾಗಿರುವ ಜಯಕೃಷ್ಣ ಶೆಟ್ಟಿಯ ಹೇಳಿಕೆಯಿಂದಲೇ ಈ ಹೆಗ್ಗಡೆ ಎಷ್ಟರಮಟ್ಟಿಗೆ ಕೃಷಿಕರ ಪರವಾಗಿದ್ದಾರೆ, ಎಷ್ಟರಮಟ್ಟಿಗೆ ಗ್ರಾಮಾಭಿವೃದ್ಧಿ ಮಾಡಬಲ್ಲರು ಎಂಬುದು ಸ್ಪಷ್ಟವಾಗಿದೆ.

ಹೊಗಳಿಕೆ ತೆಗಳಿಕೆ

ಅಸಂಖ್ಯಾತ ಕೃಷಿ ಭೂಮಿ, ಸಾವಿರಾರು ಜೀವರಾಶಿಗಳು, ಅಪಾರ ಕೃಷಿಕರ ಬಾಳನ್ನು ನರಕಮಯವಾಗಿಸುವ, ಇಡೀ ಕರಾವಳಿಯನ್ನು ಸುಟ್ಟು ಬಿಡುವ ನಾಗಾರ್ಜುನ ಎಂಬ ಕಾರ್ಖಾನೆಯ ಸ್ಥಾಪನೆಗೆ 'ಹೆಗ್ಗಡೆಯವರ ಶ್ರೀರಕ್ಷೆಯಿದೆ' ಎಂದು ಇದೇ ಜಯಕೃಷ್ಣ ಶೆಟ್ಟಿ ಹೇಳಿಕೆ ನೀಡಿದ್ದಾನೆ. ಆ ಮೂಲಕ ಹೆಗ್ಗಡೆಯವರ ಪರಿಸರ ಪ್ರೇಮದ ಅಸಲಿ ಮುಖವನ್ನು ಬಹಿರಂಗಪಡಿಸಿದ್ದಾನೆ.

ಅದಕ್ಕೆ ಪೂರಕವೆಂಬಂತೆ ಕೈಗಾರಿಕಾ ಪರವಾಗಿರುವ ಹೆಗ್ಗಡೆಯವರ ಮಾತುಗಳೂ ಅವರ ನಯವಂಚಕತನವನ್ನು ಸಾಬೀತುಪಡಿಸುತ್ತವೆ. ಗ್ರಾಮಾಭಿವೃದ್ಧಿ ಎಂಬ ಹಣೆಪಟ್ಟಿ ಕಟ್ಟಿಕೊಂಡು ಜನಸಾಮಾನ್ಯರನ್ನು ವಂಚಿಸುತ್ತಿರುವ ಹೆಗ್ಗಡೆಯವರು, ಅದೇ ಗ್ರಾಮೀಣ ಜನರ ಬದುಕನ್ನು ಸರ್ವನಾಶ ಮಾಡಲು ಅಡಿಯಿಟ್ಟಿರುವ ನಾಗಾರ್ಜುನದಂತಹ ಕೈಗಾರಿಕೆಗಳಿಗೆ ಬೆಂಬಲ ನೀಡುತ್ತಿರುವುದು ಗ್ರಾಮೀಣ ಜನರಿಗೆ ಮಾಡುತ್ತಿರುವ ದ್ರೋಹವಲ್ಲವೇ? ಹೀಗಿರುವಾಗ ಗ್ರಾಮಾಭಿವೃದ್ಧಿ ಹಾಗೂ ಕೃಷಿಕರ ಬಗ್ಗೆ ಮಾತನಾಡುವ ಯಾವ ನೈತಿಕ ಹಕ್ಕು ಕೂಡಾ ಹೆಗ್ಗಡೆಯವರಿಗೆ ಇಲ್ಲ. 'ಪ್ರೇತದ ಬಾಯಲ್ಲಿ ಮಂತ್ರಾಕ್ಷತೆ ಪಠಿಸಿದಂತೆ' ಎಂಬ ಗಾದೆಯಂತೆ ಹೆಗ್ಗಡೆ ವರ್ತಿಸುತ್ತಿದ್ದಾರೆ. ಅದಕ್ಕೆ ರಾಜ್ಯ ಸರ್ಕಾರ ಅವರಿಗೆ 'ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ.

ಒಂದೆಡೆ ಸಾವಿರಾರು ಎಕರೆ ಕೃಷಿ ಭೂಮಿಯನ್ನು ನೆಲಸಮ ಮಾಡಿ ಕೃಷಿಕರ ಸಮಾಧಿಯ ಮೇಲೆ ಏಳುತ್ತಿರುವ ನಾಗಾರ್ಜುನಕ್ಕೆ ಹೆಗ್ಗಡೆ ಶ್ರೀರಕ್ಷೆ ನೀಡುತ್ತಿದ್ದರೆ, ಮತ್ತೊಂದೆಡೆ ಅಮಾಯಕ ಜನರನ್ನು ಒಗ್ಗೂಡಿಸಿ ವರ್ಷಂಪ್ರತಿ 'ಕೃಷಿ ಮೇಳ' ಎಂಬ ಕಾರ್ಯಕ್ರಮವನ್ನು ಮಾಡಿ ಜನರನ್ನು ವಂಚಿಸುತ್ತಿದ್ದಾರೆ. ಕೃಷಿಕರ, ಕೃಷಿ ಭೂಮಿಯ ಸರ್ವನಾಶಕ್ಕೆ, ನಾಗಾರ್ಜುನಕ್ಕೆ ಬೆಂಬಲ ನೀಡಿರುವ ಹೆಗ್ಗಡೆಯವರಿಗೆ ಕೃಷಿಕರ ಬಗ್ಗೆ ಮಾತನಾಡುವ ಅಧಿಕಾರವಿದೆಯೇ? ಕೃಷಿಮೇಳ ನಡೆಸುವ ನೈತಿಕ ಹಕ್ಕು ಇದೆಯೇ? ಇವರ ಈ ಕೃಷಿಮೇಳ ಯಾವ ಪುರುಷಾರ್ಥಕ್ಕೆ? ಈ ಎಲ್ಲಾ ಪ್ರಶ್ನೆಗಳಿಗೆ ಹೆಗ್ಗಡೆಯವರೇ ಉತ್ತರಿಸಬೇಕಾಗಿದೆ.

ವಿಚಾರಸಂಕಿರ್ಣವೊಂದರಲ್ಲಿ ಹೆಗ್ಗಡೆಯವರು ಕೈಗಾರಿಕೆಯ ಪರವಾಗಿ ಮಾತನಾಡುತ್ತಾ, "ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ಇದೆ. ಅದಕ್ಕಾಗಿ ಇನ್ನೂ ಹೆಚ್ಚಿನ ಕೈಗಾರಿಕೆಗಳು ಬರಬೇಕಾಗಿದೆ" ಎಂದಿದ್ದಾರೆ. ಹೆಗ್ಗಡೆಯವರು ಒಮ್ಮೆ ಧರ್ಮಸ್ಥಳ ಬಿಟ್ಟು ಜಿಲ್ಲೆಯಲ್ಲಿರುವ ಕೈಗಾರಿಕೆಗಳಿಗೆ ಭೇಟಿ ನೀಡಬೇಕಿದೆ. ಆಗ ನಮ್ಮ ಜಿಲ್ಲೆಯ ಎಷ್ಟು ಜನರಿಗೆ ಕೈಗಾರಿಕೆಗಳು ಉದ್ಯೋಗ ನೀಡಿವೆ ಎಂಬುದು ಅವರಿಗೆ ಅರ್ಥವಾಗುತ್ತದೆ.

ಅಷ್ಟಕ್ಕೂ ಕೇವಲ ಒಂದು ಉದ್ಯೋಗಕ್ಕೋಸ್ಕರ ಚಿನ್ನದ ಮೊಟ್ಟೆಯಿಡುವ ಕೋಳಿಯಂತಹ ಈ ಭೂಮಿಯನ್ನು ಬಿಟ್ಟು ಕೊಡಲು ಜನ ದಡ್ಡರಲ್ಲ, ಹಾಗೆಯೇ ತಮ್ಮ ಭೂಮಿಯನ್ನು ಕಂಪೆನಿಗಳಿಗೆ, ಕೈಗಾರಿಕೆಗಳಿಗೆ ಮಾರಿಬಿಡುವ ಪೆದ್ದರೂ ಅಲ್ಲ. ಹೆಗ್ಗಡೆಯವರು "ನಮಗೆ ಮದುವೆಗೆ ಹೋಗಲು ರಸ್ತೆ ಬೇಡ, ಕೈಗಾರಿಕೆಗಳಿಗೆ ರಸ್ತೆ ನಿರ್ಮಿಸಿಕೊಡಿ" ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ. ಅದನ್ನು ನೋಡಿ ಇವರು ಕಂಪೆನಿಗಳ ದಲ್ಲಾಳಿಯೇ ಎಂಬ ಸಂಶಯ ಮೂಡುತ್ತದೆ. ಈಗ ಹೆದ್ದಾರಿಗಳು ಸಂಪೂರ್ಣವಾಗಿ ಕೆಟ್ಟು ಹೋಗಿರುವಾಗ ಕೈಗಾರಿಕೆಗಳಿಗೆ ರಸ್ತೆ ನಿರ್ಮಿಸಿಕೊಡಿ ಎಂದು ಆಗ್ರಹಿಸುವುದು ಎಷ್ಟು ಸರಿ? ಅದು ಅವರಿಗೆ ಶೋಭೆ ತರುವಂತಹ ವಿಷಯವೇ?

- ಕೃಷ್ಣ ಕೆ. ತೆಂಕ ಎಕ್ಕಾರು, ಕೃಷಿಭೂಮಿ ಸಂರಕ್ಷಣಾ ಸಮಿತಿ

ಬಹಳ ದಿನಗಳ ನಂತರ ಮತ್ತೆ ನಿಮ್ಮ (ನಮ್ಮ) ಪತ್ರಿಕೆ ನಮ್ಮ ಊರಿಗೆ ಬರುತ್ತಿದೆ. ಇದು ಸಂತೋಷ. ವಿಷ್ಣುವರ್ಧನ್ ಸಾವು ಕುರಿತು ಬಂದ ಎಲ್ಲ ಲೇಖನಗಳೂ ತುಂಬ ಚೆನ್ನಾಗಿವೆ. ವಿಷ್ಣು ಅಷ್ಟು ದೊಡ್ಡ ನಟರಾಗಿ ಬೆಳೆದರೂ ಕೂಡ ಪಕ್ವ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲೇ ಇಲ್ಲ. ತಮ್ಮ ಬದುಕಿನ ಗೊಂದಲಗಳಿಂದ ಅವರು ಮತ್ತಷ್ಟು ಗೊಂದಲಗೊಳ್ಳುವಂತಾದದ್ದೇ ಒಂದು ದುರಂತ. ತಮ್ಮ ಗೊಂದಲಗಳನ್ನೆಲ್ಲ ನೀಗಿಸಿಕೊಳ್ಳುವ ಯತ್ನವನ್ನು ಕೂಡಾ ಅವರು ಮಾಡಿದಂತಿಲ್ಲ. ಕೊನೆಕೊನೆಗೆ ಆಧ್ಯಾತ್ಮಿಕ ಚಿಂತನೆಗೆ ಅವರು ಮೊರೆ ಹೋದರೂ ಅದೆಲ್ಲ ಅಪದ್ಧ ಗಿಳಿ ಪಾಠದಂತೆ ಗೋಚರಿಸುತ್ತಿತ್ತು. ಹೀಗೆ ದೊಡ್ಡ ನಟನೊಬ್ಬನ ಬಾಳು ಪಕ್ವಗೊಳ್ಳದೆ ಟೊಳ್ಳಾಗಿಬಿಟ್ಟಿತು.

-ಹುರುಕಡ್ಲಿ ಶಿವಕುಮಾರ, ಬಳ್ಳಾರಿ

ತಮ್ಮ ಪತ್ರಿಕೆಯ ಚಾರ್ವಾಕ ಅಂಕಣದಲ್ಲಿ 'ವಿಜಯನಗರವೋ? ಮೊಗಲರಾಳ್ವಿಕೆಯೋ? ಎಲ್ಲರೂ ಜೆಗಣೆಗಳೇ ನನ್ನ ನೆತ್ತರಿಗೆ! ಲೇಖನ ಅದ್ಭುತವಾಗಿದೆ. ಅನೇಕ ದಾಖಲೆಗಳ ಸಹಿತ ರೈತಾಪಿ ಜನರ ಶೋಷಣೆ ಕುರಿತು ಶಿವಸುಂದರ್ ಬರೆದಿದ್ದಾರೆ. ಜನಾರ್ದನ ರೆಡ್ಡಿಗೆ ಜನರ ಕಷ್ಟಗಳು ಬೇಕಿಲ್ಲ. ಹೆಸರುಬೇಕು, ಮೆರೆಯಬೇಕು. ಮುಂದೆ ಅಣ್ಣನಾಗಲಿ ಇಲ್ಲ ತಾನಾಗಲಿ ಮುಖ್ಯಮಂತ್ರಿ ಆಗಬೇಕು ಎಂಬ ದುರಾಸೆ ಇದೆ. ಹೀಗಾಗಿ ಬರೀ ದುಷ್ಟ ಕಾರ್ಯದಲ್ಲೇ ನಿರತನಾಗಿದ್ದಾನೆ. ಹಂಪಿ ವಿಶ್ವವಿದ್ಯಾಲಯಕ್ಕೂ ಶ್ರೀಕೃಷ್ಣದೇವರಾಯನ ಹೆಸರು ಇಡಲು ಹೊರಟಿದ್ದ. ಆದರೆ ಪಾಪು ಸಹಿತ ಅನೇಕ ಪ್ರಮುಖರ ಪ್ರತಿಭಟನೆ ಬಂದ ಕಾರಣ ಈಗ ಬಳ್ಳಾರಿ-ಕೊಪ್ಪಳಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸೃಷ್ಟಿಸಿ ಅದಕ್ಕೆ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡುವುದಾಗಿ ಘೋಷಿಸಿದ್ದಾನೆ.

ಕಣ್ಣು ತೆರೆಸುವ ಲೇಖನಕ್ಕೆ ಧನ್ಯವಾದಗಳು. ಲಂಕೇಶರ 75ನೇ ಹುಟ್ಟು ಹಬ್ಬಕ್ಕೆ ಪುಸ್ತಕಗಳನ್ನು ಸಿದ್ಧಪಡಿಸುತ್ತಿರುವ ನಿಮಗೆ ಅಭಿನಂದನೆಗಳು. ಗೌರಿ ಲಂಕೇಶ್ ಪತ್ರಿಕೆಗೆ ಶುಭವಾಗಲಿ

-ಬಶೀರ ಅಹ್ಮದ್ ಹೊಸಮನಿ, ಬಾಗಲಕೋಟೆ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)

ಜೂ. ಎನ್‌ಟಿಆರ್‌ನ ಮದುವೆ ರಗಳೆ...


ಂಧ್ರದಲ್ಲೀಗ ರಾಜಕೀಯ, ಸಿನಿಮಾ ಮತ್ತು ಬಿಕ ವಿಚಾರಗಳು ಒಟ್ಟೊಟ್ಟಿಗೇ ೂಂಡು ರಾಡಿಯೆದ್ದು ಹೋಗಿದೆ. ಅದಕ್ಕೆ ಚಿನ ಉದಾಹರಣೆ ಯುವ ನಟ ಯರ್ ಎನ್‌ಟಿಆರ್‌ನ ುವೆಯ ಸುತ್ತ ಹಬ್ಬಿಕೊಂಡಿರುವ ಾಹಲ.


ಚಂದ್ರಬಾಬು ನಾಯ್ಡು

ದೇನು ಸೋಜಿಗವೋ ಲ್ಲ, ಮದುವೆ ದಗಳಿಂದಾಗಿ ಎನ್‌ಟಿಆರ್ ಬ ನೆಮ್ಮದಿಗಿಂತ ಹೆಚ್ಚು ಗಳನ್ನೇ ಎದುರಿಸಿದೆ.


ಎನ್‌ಟಿಆರ್

ೂನಿಯರ್ ಎನ್‌ಟಿಆರ್‌ನ ಹರಿಕೃಷ್ಣ ಮತ್ತು ಶಾಲಿನಿ ತಿಗಳಾಗಿದ್ದರೂ ಅವರಿಬ್ಬರು ೂ ಅಧಿಕೃತವಾಗಿ ುವೆಯೇ ಆಗಿಲ್ಲ. ಅಷ್ಟೇ ಅಲ್ಲ, ತೆಲುಗು ದೇಶಂ ಪಕ್ಷದಿಂದ ಸಭಾ ಸದಸ್ಯರಾಗಿರುವ ಹರಿಕೃಷ್ಣ ಸಭಾದ ವೆಬ್ ಸೈಟಿನಲ್ಲಿ ತನ್ನ ತಿಯ ಹೆಸರನ್ನು ಶ್ರೀಮತಿ ಕುಮಾರಿ ಎಂದು ದಿಸಿದ್ದಾರೆ. ಏಕೆಂದರೆ ಲಕ್ಷ್ಮಿ ಕುಮಾರಿ ಅಧಿಕೃತ ಮೊದಲನೆ ಪತ್ನಿ; ಶಾಲಿನಿ ಅವರ ೃತ ಎರಡನೆ ಪತ್ನಿ.


ಹರಿಕೃಷ್ಣ

ನ್ನು ಒಂದಾನೊಂದು ಕಾಲದಲ್ಲಿ ತೆಲುಗು ಸಿನಿಮಾ ರಾಜಕೀಯದಲ್ಲಿ ಉಜ್ವಲವಾಗಿ ಅಖಂಡ ಆಂಧ್ರವನ್ನು ತನ್ನ ದಲ್ಲಿಟ್ಟುಕೊಂಡಿದ್ದ ಎನ್‌ಟಿಆರ್ ವೈವಾಹಿಕ ವಿವಾದಗಳಿಂದ ಾಗಿರಲಿಲ್ಲ. ಅವರು ಏಳು ಪುತ್ರರು ನಾಲ್ಕು ಪುತ್ರಿಯರ ತಂದೆಯಾಗಿ ೂ, ಹತ್ತಾರು ಮೊಮ್ಮಕ್ಕಳನ್ನು ದ್ದಾಗಲೂ, 70 ವರ್ಷ ವಯಸ್ಸಿನ ಹಣ್ಣುಹಣ್ಣು ಕನಾಗಿದ್ದಾಗಲೂ ಲಕ್ಷ್ಮಿ ಪಾರ್ವತಿ ಎಂಬ ೊಂದಿಗೆ ಸಂಬಂಧ ಬೆಳೆಸಿದ್ದರು. ಅದು ದೊಡ್ಡ ತವಾಗಿ ಕೊನೆಗೆ ಆಕೆಯನ್ನು ಮದುವೆಯಾಗಿದ್ದರು. ಆ ವಿಷಯ ರಾಜಕೀಯ ತಿರುವುಗಳನ್ನು ವುದರ ಜೊತೆಗೆ ದೊಡ್ಡ ಕೌಟುಂಬಿಕ ಕಲಹವಾಗಿ ಟ್ಟಿತ್ತು. ಕೊನೆಗೆ ಅವರ ಪುತ್ರಿ ಭುವನೇಶ್ವರಿಯ ಗಂಡ ಚಂದ್ರಬಾಬು ನಾಯ್ಡು ಟಿಡಿಪಿ ಪಕ್ಷವನ್ನೇ ಹೈಜಾಕ್ ಮಾಡಿ ಎನ್‌ಟಿಆರ್ ಅವರನ್ನು ಮೂಲೆಗುಂಪು ಮಾಡಿದ್ದು ಈಗ ಇತಿಹಾಸ.


ಲಕ್ಷ್ಮಿ ಪ್ರಣತಿ


ಈಗ ಎನ್‌ಟಿಆರ್ ಅವರನ್ನೇ ಹೋಲುವ, ಅವರ ಹೆಸರನ್ನೇ ಇಟ್ಟುಕೊಂಡಿರುವ ಅವರ ಮೊಮ್ಮಗನ ಮದುವೆಯೂ ವಿವಾದದಲ್ಲಿ ಸಿಲುಕಿದೆ.

ಜೂನಿಯರ್‌ನ ಮಾವನಾಗಿರುವ, ತೆಲುಗು ದೇಶಂನ ನಾಯಕನೂ ಆಗಿರುವ ಚಂದ್ರಬಾಬು ನಾಯ್ಡು ಖುದ್ದು ನಿಂತು ತನ್ನ ಮತ್ತೊಂದು ಹತ್ತಿರದ ಸಂಬಂಧಿ ನರ್ನೆ ಮಲ್ಲಿಕಾ ಎಂಬುವರ ಪುತ್ರಿ ಲಕ್ಷ್ಮಿ ಪ್ರಣತಿ ಎಂಬಾಕೆಯೊಂದಿಗೆ ಇತ್ತೀಚೆಗೆ ಜೂನಿಯರ್‌ನ ಮದುವೆ ನಿಶ್ಚಯಿಸಿದ್ದರು. ಅಷ್ಟೇ ಅಲ್ಲ, ಬರುವ ಮಾರ್ಚ್ 18ರಂದು ಕೋಟಿಗಟ್ಟಲೆ ಖರ್ಚಿನಲ್ಲಿ ಅದ್ದೂರಿಯಾಗಿ ಈ ಮದುವೆಯನ್ನು ನೆರವೇರಿಸಲು ಯೋಜಿಸಲಾಗಿತ್ತು, ಆದರೀಗ ಈ ಮದುವೆಗೆ ಕಾನೂನೇ ತೊಡಕಾಗಿದೆ. ಅದಕ್ಕೆ ಕಾರಣ ಮದುಮಗಳು ಇನ್ನೂ ಅಪ್ರಾಪ್ತ ವಯಸ್ಸಿನವಳಾಗಿರುವುದು!

ಅಸಲು ಈ ಹುಡುಗಿ ಆಂಧ್ರದಲ್ಲಿ ಈಗ ದೊಡ್ಡ ಬೂಮ್ ಕ್ರಿಯೇಟ್ ಮಾಡಿರುವ 'ಎನ್ ಚಾನೆಲ್'ನ ಒಡೆಯ ಶ್ರೀನಿವಾಸ ರಾವ್ ಎಂಬಾತನ ಮಗಳೂ ಕೂಡ. ಈ ಶ್ರೀನಿವಾಸ ರಾವ್ ಕೋಟಿಗಟ್ಟಲೆ ಆಸ್ತಿ ಹೊಂದಿದ್ದಾನೆ. ಆಂಧ್ರದಲ್ಲಿ ರಾಜಕೀಯಕ್ಕೂ ಸಿನಿಮಾಕ್ಕೂ ಗಳಸ್ಯ ನಂಟು. ಚಂದ್ರಬಾಬು ಟಿಡಿಪಿಯ ಸರ್ವಾಧಿಕಾರಿ. ಜೂನಿಯರ್ ಆ ಪಕ್ಷದ ಸ್ಟಾರ್ ಕ್ಯಾಂಪೇನರ್. ಶ್ರೀನಿವಾಸ್ ರಾವ್ ತನ್ನ ಟಿವಿ ಚಾನೆಲ್ ಮೂಲಕ ಪ್ರಭಾವ ಹೊಂದಿದ್ದಾನೆ. ಈ ಮೂರೂ ಈ ಮದುವೆಯಲ್ಲಿ ಸಮ್ಮಿಳನಗೊಂಡಿದ್ದವು.

ಈ ಸುದ್ದಿ ಹೊರಬೀಳುತ್ತಿದ್ದಂತೆಯೇ, ಇನ್ನೂ ದ್ವಿತೀಯ ಪಿಯುಸಿಯಲ್ಲಿರುವ ಅಪ್ರಾಪ್ತ ಬಾಲಕಿಯೊಂದಿಗೆ ಜೂ. ಎನ್.ಟಿ.ಆರ್‌ನ ಮದುವೆ ಪ್ರಸ್ತಾಪವನ್ನು ಪ್ರಶ್ನಿಸಿ ಸಿಂಗಲೂರಿ ಶಾಂತಿ ಪ್ರಸಾದ್ ಎಂಬ ಅಡ್ವೋಕೇಟೊಬ್ಬರು ಮಚಲೀಪಟ್ಟಣದಿಂದ ಅಬ್ಜೆಕ್ಷನ್ ಪಿಟಿಷನ್ ಹೂಡಿದರು. ಶಾಂತಿ ಪ್ರಸಾದ್ ಅವರ ದಾವೆಯನ್ನು ಮನ್ನಿಸಿದ ಅಲ್ಲಿನ ಮ್ಯಾಜಿಸ್ಟ್ರೇಟ್ ಗುರಪ್ಪ ನಾಯ್ಡು ಹಿಂದೂ ವಿವಾದ ಕಾಯ್ದೆ ಅಡಿಯಲ್ಲಿ 'ಬಾಲ್ಯ ವಿವಾಹ' ಮಾಡಲು ಪ್ರಯತ್ನ ಮಾಡಬಾರದು ಎಂದು ಮದುವೆಗೆ ತಡೆಯಾಜ್ಞೆ ನೀಡಿದ್ದಾರೆ.

ಈಗ ಈ ವಿವಾದದಿಂದಾಗಿ ಈ ಮದುವೆ ಮುಂದೂಡಲ್ಪಟ್ಟಿದೆ. ಬರುವ ಮೇ ತಿಂಗಳಿಗೆ ಲಕ್ಷ್ಮಿ ಪ್ರಣತಿಗೆ ಹದಿನೆಂಟು ವರ್ಷ ವಯಸ್ಸು ತುಂಬಲಿದ್ದು ಅಂದೇ ಈ ಮದುವೆಯನ್ನು ಮಾಡಲು ನಿರ್ಧರಿಸಲಾಗಿದೆ.





ಆದರೆ ಈ ವಿವಾದದ ಹಿಂದೆ ತೆಲುಗಿನ ಸೂಪರ್ ಸ್ಟಾರ್ ಚಿರಂಜೀವಿಯ ಕೈವಾಡವಿದೆ ಎಂಬ ಪುಕಾರು ಕೂಡಾ ಹಬ್ಬಿದೆ. ಕಳೆದ ಚುನಾವಣೆಯಲ್ಲಿ ಜೂ. ಎನ್‌ಟಿಆರ್ ಚಿರಂಜೀವಿಯ 'ಪ್ರಜಾರಾಜ್ಯಂ' ಪಕ್ಷದ ವಿರುದ್ಧ ಪ್ರಚಾರ ಮಾಡಿದ್ದ. ಹಾಗೆಯೇ ಚಿರು ಪುತ್ರ ರಾಮ್ ಚರಣ್ ತೇಜಾನ ಸಿನಿಮಾಗಳಿಗೆ ಎದುರಾಗಿ ಜೂನಿಯರ್‌ನ ಸಿನಿಮಾಗಳು ಬಿಡುಗಡೆಯಾಗುತ್ತಿರುವುದರಿಂದ ಆತನನ್ನು ರಾಜಕೀಯ ಮತ್ತು ಸಿನಿಮಾ ಕ್ಷೇತ್ರದಲ್ಲಿ ಏಕಕಾಲಕ್ಕೆ ಮಟ್ಟ ಹಾಕುವುದಕ್ಕೆ ಈ ಪ್ರಯತ್ನ ನಡೆಯಿತು ಎಂಬುದು ಹಲವರ ಲೆಕ್ಕಾಚಾರ. ಆದರೆ ಚಿರು ಆಪ್ತರು ಹೇಳುವುದೇನೆಂದರೆ "ಚಿರಂಜೀವಿ ಯಾವುದೇ ವ್ಯಕ್ತಿಯ ಖಾಸಗಿ ಜೀವನದೊಂದಿಗೆ ಚೆಲ್ಲಾಟವಾಡುವ ಚಿಲ್ಲರೆ ಮನುಷ್ಯನಲ್ಲ" ಎಂಬುದು.

ಪ್ರಸ್ತುತ ವಿವಾದವನ್ನೂ ಮೀರಿ 'ಯಮದೊಂಗ' ಎನ್‌ಟಿಆರ್‌ನ ಮದುವೆ ವೇಳೆಗೆ ಅದಿನ್ನೆಷ್ಟು ವಿಘ್ನಗಳು ಎದುರಾಗುತ್ತವೋ ಆ ಏಡುಕುಂಡಲವಾಡನೇ ಬಲ್ಲ.

● ಅರುಣ್‌ಕುಮಾರ್ ಜಿ.




ಚಂದ್ರಿಕಾರ ಲತಾ ಭಜನೆ

ಕನ್ನಡ ಚಿತ್ರರಂಗದ ಲತಾ ಮಂಗೇಶ್ಕರ್ ಎಂದೇ ಗಾಯಕಿ ಚಂದ್ರಿಕಾ ಗುರುರಾಜ್ ಅವರನ್ನು ಉದ್ಯಮದವರು ಕರೆಯುತ್ತಾರೆ. ಇದರರ್ಥ ಆಕೆ ಲತಾಜೀಯಷ್ಟು ಮಧುರವಾಗಿ ಹಾಡುತ್ತಾರೆಂದು ಅಲ್ಲ. ರಸಮಂಜರಿ ಕಾರ್ಯಕ್ರಮಗಳಲ್ಲಿ ಅವರು ಬಹುತೇಕ ಹಾಡುವುದೇ ಲತಾಜೀಯ ಹಾಡುಗಳನ್ನಾದ್ದರಿಂದ ಚಂದ್ರಿಕಾ ಕನ್ನಡದ ಲತಾಜೀ ಆಗಿದ್ದಾರೆ.

ಇತ್ತೀಚೆಗೆ ಆಕೆಯ ಜೀವನದಲ್ಲಿ ಆಕಸ್ಮಿಕ ಘಟನೆಯೊಂದು ನಡೆಯಿತಂತೆ. ತಿರುಪತಿ ತಿರುಮಲದ ಟ್ರಸ್ಟಿ ಆದಿಕೇಶವಲು ಅವರ ಮಗಳು ಈಕೆಯನ್ನು ತಿರುಪತಿಗೆ ಸಮಾರಂಭವೊಂದಕ್ಕೆ ಆಹ್ವಾನಿಸಿದರಂತೆ. ಅಲ್ಲಿ ನೋಡಿದರೆ ಅದು ಲತಾಜೀಯವರನ್ನು ಸನ್ಮಾನಿಸುವ ಕಾರ್ಯಕ್ರಮ. ವೇದಿಕೆಯಲ್ಲಿ ಚಂದ್ರಿಕಾರಿಗೂ ಒಂದು ಕುರ್ಚಿ ಮೀಸಲಾಗಿತ್ತು. ಇದು ಕನಸೋ ನನಸೋ ಎಂದು ಅವರು ಅಚ್ಚರಿಪಟ್ಟರಂತೆ. "ಲತಾಜೀಯವರನ್ನು ಒಮ್ಮೆಯಾದರೂ ಮಾತನಾಡಿಸಬೇಕು ಎಂಬುದು ನನ್ನ ಜೀವನದ ಮಹತ್ವಾಕಾಂಕ್ಷೆಯಾಗಿತ್ತು. ಯಾಕೆಂದರೆ ಕಳೆದ 35 ವರ್ಷಗಳಿಂದ ದಿನನಿತ್ಯವೂ ಆಕೆಯ ಹಾಡುಗಳನ್ನು ಒಂದಲ್ಲ ಒಂದು ಬಾರಿ ಹಾಡುತ್ತಾ ಕಾಲ ಕಳೆದಿದ್ದೇನೆ. ಅಂತಹ ಮಹಾನ್ ಗಾಯಕಿಯ ಹಾಡುಗಳನ್ನು ಹಾಡುವ ನನಗೇ ಜನ ಇಷ್ಟೊಂದು ಪ್ರೀತಿಯ ಸುರಿಮಳೆ ಸುರಿದಿದ್ದಾರೆ ಎಂದರೆ ಅವರಿನ್ನೆಂತಹ ಅದ್ಭುತ ಗಾಯಕಿ. ಆದರೆ ಅವರನ್ನು ಭೇಟಿಯಾಗುವ ಸಾಧ್ಯತೆ ಕಡಿಮೆಯಿದ್ದುದರಿಂದ ಇತ್ತೀಚೆಗೆ ಆ ಬಗ್ಗೆ ಜಾಸ್ತಿ ಚಿಂತಿಸಲೇ ಇಲ್ಲ. ಆದರೆ ಮೊನ್ನೆ ಎರಡು ದಿನಗಳ ಕಾಲ ನಾನು ಆಕೆಯ ಜೊತೆ ಕಳೆದೆ ಎಂದರೆ ನನಗೇ ನಂಬಲಾಗುತ್ತಿಲ್ಲ. She is a divine woman" ಎಂದು ಚಂದ್ರಿಕಾ ಹೇಳಿದರು.

ಅಂತು ತಿರುಪತಿಯಲ್ಲಿ ಲತಾಜೀಗೋಸ್ಕರ ಆಕೆಯೇ ಹಾಡಿದ 60ರ ದಶಕದ ಮೀರಾ ಭಜನಾಗಳನ್ನು ಹಾಡಿದ್ದು ಅವರು ಮೆಚ್ಚಿ ಮಾತನಾಡಿದ್ದು ಇದೆಲ್ಲವನ್ನೂ ಚಂದ್ರಿಕಾ ಗುರುರಾಜ್ ಈಗ ಸಂತೋಷದಿಂದ ಹೇಳಿಕೊಂಡು ತಿರುಗಾಡುತ್ತಿದ್ದಾರೆ.


ಒಬ್ಬ ಜನಪ್ರಿಯ ಗಾಯಕಿಯೇ ಲತಾಜೀಯನ್ನು ಕಂಡು ಇಷ್ಟೊಂದು ಥ್ರಿಲ್ ಆಗಿದ್ದಾರೆಂದರೆ ಭಾರತದ ಕೋಗಿಲೆ ಲತಾ ಮಂಗೇಶ್ಕರ್ ಎಷ್ಟು ಅದ್ಭುತ ಗಾಯಕಿ! ●



ಮುಸುರಿ 25

ಹಾಸ್ಯನಟ ಮುಸುರಿ ಕೃಷ್ಣಮೂರ್ತಿ ನಿಧನಹೊಂದಿ ಕಾಲು ಶತಮಾನವೇ ಸಂದುಹೋಯಿತು. ಈ 25 ವರ್ಷಗಳಲ್ಲಿ ಮುಸುರಿಯನ್ನು ಚಿತ್ರೋದ್ಯಮದವರಾಗಲಿ, ಚೇಂಬರ್‌ನವರಾಗಲೀ ನೆನಸಿಕೊಳ್ಳಲಿಲ್ಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಮುಸುರಿಯ ಮಕ್ಕಳಾದ ಗುರುದತ್ ಮತ್ತು ಜಯಸಿಂಹ ಮುಸುರಿ ಚಿತ್ರಗಳಲ್ಲಿ ನಟಿಸುತ್ತಾ, ಸಿನಿಮಾಗಳನ್ನು ನಿರ್ಮಿಸುತ್ತಾ ತಂದೆಯ ಹೆಸರನ್ನು ಆಗೊಮ್ಮೆ ಈಗೊಮ್ಮೆ ನೆನಪಿಸುವಂತೆ ಮಾಡುತ್ತಿದ್ದರು.

ಇಷ್ಟೆಲ್ಲಾ ಮುಸುರಿ ಪುರಾಣ ಹೇಳಲೊಂದು ಕಾರಣವಿದೆ. ಅದೇನೆಂದರೆ ಮುಸುರಿ ನಿಧನದ 25ನೇ ವರ್ಷವನ್ನು ಮುಸುರಿ ಮಕ್ಕಳು ತಮ್ಮದೇ ಆದ ರೀತಿಯಲ್ಲಿ ಆಚರಿಸುತ್ತಿದ್ದಾರೆ. ಮುಸುರಿ ನಿರ್ಮಾಣ ಸಂಸ್ಥೆಯ ಅಡಿಯಲ್ಲಿ 'ಪ್ರೇಮಾ ಅಂದರೆ ಇಷ್ಟೇನಾ?' ಎಂಬ ಚಿತ್ರವನ್ನು ಈ ಸಹೋದರರು ನಿರ್ಮಿಸಿದ್ದಾರೆ. ಯಾವುದೇ ಸದ್ದುಗದ್ದಲವಿಲ್ಲದೆ ಈ ಚಿತ್ರವನ್ನು ಮುಗಿಸಿರುವ ಸಹೋದರರು ಸದ್ಯದಲ್ಲೇ ಬಿಡುಗಡೆ ಮಾಡಲಿದ್ದಾರಂತೆ. ನಾಯಕನಾಗಿ ಗುರುದತ್ ಮತ್ತು ನಿರ್ದೇಶಕರಾಗಿ ಜಯಸಿಂಹ ಉದ್ಯಮದಲ್ಲಿ ಯಶಸ್ಸು ಕಾಣದಿದ್ದರೂ ಛಲಬಿಡದೆ ತ್ರಿವಿಕ್ರಮನಂತೆ ಹೋರಾಡುತ್ತಿರುವುದು ಮೆಚ್ಚಬೇಕಾದದ್ದೇ. ●



ಜೂನಿಯರ್‌ಗಳ ಸವಾಲ್!

ರಾಮೋಜಿರಾವ್ ನಿರ್ಮಾಣದ 'ನಿನ್ನು ಚೂಡಲಾನಿ' ಚಿತ್ರದ ಮೂಲಕ ಅತೀ ಕಿರಿಯ ವಯಸ್ಸಿಗೇ ಜೂ. ಎನ್‌ಟಿಆರ್ ಹೀರೋ ಆದರೂ ಆ ಚಿತ್ರ ಹಿಟ್ ಆಗಲಿಲ್ಲ, ಆನಂತರ ಬಂದ 'ಸ್ಟೂಡೆಂಟ್ ನಂ1' ಹಿಟ್ ಆಗಿ ಆತನಿಗೆ ಸ್ಟಾರ್‌ಗಿರಿ ತಂದುಕೊಟ್ಟಿತ್ತು. ಆಮೇಲೆ ಬಂದ ಆತನ ಹಲವಾರು ಸಿನಿಮಾಗಳು ತೋಪೆದ್ದರೂ 'ಸಿಂಹಾದ್ರಿ', 'ಯಮದೊಂಗ' ಮತ್ತು 'ಅಧುರ್ಸ್' ಎಂಬ ಚಿತ್ರಗಳು ಸೂಪರ್‌ಹಿಟ್‌ಗಳಾದವು.

ಆದರೆ ಈತನ ಎಲ್ಲ ಚಿತ್ರಗಳ ದಾಖಲೆಯನ್ನೂ ಚಿರು ಮಗ ರಾಮ್ ಚರಣ್ ತೇಜಾ ನಟಿಸಿರುವ 'ಮಗಧೀರ' ಮೀರಿಸಿಬಿಟ್ಟಿದೆ. ಇದನ್ನು ನೋಡಿ ಜೂನಿಯರ್‌ನ ಅಭಿಮಾನಿಗಳು ಆತಂಕಗೊಂಡಿದ್ದಾರೆ. 'ಮಗಧೀರ'ನನ್ನು ಹಿಂದಿಕ್ಕಬೇಕು ಎಂದು ಎಷ್ಟೇ ಹರಸಾಹಸ ಮಾಡಿದರೂ ಜೂನಿಯರ್ ನಟಿಸಿದ್ದ 'ಅಧುರ್ಸ್' ನಿರೀಕ್ಷೆ ಮಟ್ಟ ತಲುಪಲಿಲ್ಲ.

ಇದೆಲ್ಲದರಿಂದ ಆಂಧ್ರದಲ್ಲಿ ಈ ಯುವ ನಟರ ಸ್ಟಾರ್ ವಾರ್ ಇನ್ನೂ ಹೆಚ್ಚು ರಂಗು ಪಡೆದಿದೆ. ಸದ್ಯ ಜೂ. ಎನ್‌ಟಿಆರ್ ನಟಿಸಲಿರುವ, ಮೆಹರ್ ರಮೇಶ್ ನಿರ್ದೇಶನದ ಹೊಸ ಚಿತ್ರವೊಂದು ಸೆಟ್ಟೇರುತ್ತಿದೆ. ಇದು ಇದುವರೆಗೆ ತೆಲುಗಿನಲ್ಲಿ ಬಂದ ಎಲ್ಲ ಚಿತ್ರಗಳನ್ನು ಮೀರಿಸುವಷ್ಟು ಹೈ ಬಜೆಟ್ ಅನ್ನು ಹೊಂದಿದೆಯಂತೆ.

ಇದೆಲ್ಲದಕ್ಕೂ ಕಾರಣ 'ಏನೇ ಆಗಲಿ, ಜೂನಿಯರ್ ಎನ್‌ಟಿಆರ್ ಚಿರು ಮಗ ರಾಮ್ ಚರಣ್ ತೇಜಾನನ್ನು ಮೀರಿಸಬೇಕು' ಎಂಬುದೇ ಆಗಿದೆಯಂತೆ. ●

Regd.No.KA/RNP/BGS/2036/2008-10 Posted at : Basavanagudi, B'lore-4.   R B P LANKESH, Kannada Weekly Price Rs. 12/-



"ಇದನ್ನು ಅಧಿಕಪ್ರಸಂಗ ಎಂದು ಹೇಳುತ್ತೀರೋ ಅಥವಾ ಹೊಸ ಚಿಂತನೆ ಎಂದು ಮೆಚ್ಚುತ್ತೀರೋ? ನೀವೇ ನಿರ್ಧರಿಸಿ.

ನಾಯಕ ನಟ ಕಂ ನಿರ್ದೇಶಕ ಶಿವಧ್ವಜ್ ಮೊನ್ನೆ ಒಂದು ಸಂತೋಷಕೂಟವನ್ನು ಕರೆದಿದ್ದರು. ಅವರ ನಿರ್ದೇಶನದ 'ಗಗ್ಗರ' ಎಂಬ ತುಳುಚಿತ್ರ ಅತ್ಯುತ್ತಮ ಪ್ರಾದೇಶಿಕ ಚಿತ್ರ ಎಂಬ ಗೌರವಕ್ಕೆ ರಾಷ್ಟ್ರಮಟ್ಟದಲ್ಲಿ ಪಾತ್ರವಾದ ಸಂಭ್ರಮವನ್ನು ಹಂಚಿಕೊಳ್ಳಲು ಆ ಗೋಷ್ಠಿಯನ್ನು ಏರ್ಪಡಿಸಿದ್ದರು.

"ಕರ್ನಾಟಕದಲ್ಲಿ ತಯಾರಾಗುವ ತುಳು, ಕೊಡವ, ಕೊಂಕಣಿ ಮತ್ತು ಲಂಬಾಣಿ ಚಿತ್ರಗಳನ್ನು ಕನ್ನಡ ಭಾಷೆಗೆ ಡಬ್ ಮಾಡಲು ಅನುಮತಿ ನೀಡಬೇಕೆಂದು ಸಂಬಂಧಪಟ್ಟ ಎಲ್ಲರನ್ನೂ ಸೇರಿಸಿ ವಾಣಿಜ್ಯ ಮಂಡಳಿಗೆ ಮನವಿ ನೀಡಲು ನಿರ್ಧರಿಸಿದ್ದೇನೆ" ಎಂದು ಶಿವಧ್ವಜ್ ಆ ಸಂತೋಷ ಕೂಟದಲ್ಲಿ ಹೇಳಿದ್ದು ಈಗ ಚರ್ಚಾವಸ್ತುವಾಗಿದೆ.

"ಹಾಗಾದರೆ ನೀವು ಡಬ್ಬಿಂಗ್ ಪರವೇ?" ಎಂದು ಕೇಳಿದರೆ ಶಿವಧ್ವಜ್ ಅಷ್ಟೇ ಜಾಣತನದಿಂದ "ನಾನು ಖಂಡಿತವಾಗಿಯೂ ಪರಭಾಷಾ ಚಿತ್ರಗಳ ಡಬ್ಬಿಂಗ್ ಅನ್ನು ವಿರೋಧಿಸುತ್ತೇನೆ. ಆದರೆ ಕರ್ನಾಟಕದಲ್ಲಿರುವ ಉಪಭಾಷೆಗಳ ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಲು ಅನುಮತಿ ನೀಡಿ ಎಂಬುದಷ್ಟೇ ನನ್ನ ಮನವಿ" ಎಂದರು.

"ಕೊಂಕಣಿ, ಕೊಡವ, ತುಳು ಮತ್ತು ಲಂಬಾಣಿ ಭಾಷೆ ಮತ್ತು ಸಂಸ್ಕೃತಿಗೆ ತನ್ನದೇ ಆದ ಅಸ್ತಿತ್ವ ಇದೆ. ಆದರೆ ಇವೆಲ್ಲವೂ ಕರ್ನಾಟಕ ರಾಜ್ಯ ಮತ್ತು ಕನ್ನಡ ಭಾಷೆಯ ಆಶ್ರಯದಲ್ಲೇ ಬೆಳೆಯುತ್ತಿರುವ ಉಪಭಾಷೆ ಎಂಬುದನ್ನು ನೆನಪಿಸಿಕೊಳ್ಳಬೇಕು" ಎಂಬುದು ಶಿವಧ್ವಜ್ ವಾದ. "ನಮ್ಮದೇ ನೆಲದಲ್ಲಿ ಅರಳಿದ ಉಪಭಾಷೆ ಮತ್ತು ಉಪ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳನ್ನು ಕರ್ನಾಟಕದ ಸಮಸ್ತ ಕನ್ನಡಿಗರು ನೋಡುವಂತಾಗಬೇಕಾದರೆ ಅದು ಕನ್ನಡ ಭಾಷೆಗೆ ಡಬ್ ಆದರೆ ಮಾತ್ರ ಸಾಧ್ಯ" ಎಂಬುದು ಅವರ ಮತ್ತೊಂದು ಪಾಯಿಂಟ್. ಒಂದು ರೀತಿಯಲ್ಲಿ ಶಿವಧ್ವಜ್ ಮುಂದಿಟ್ಟಿರುವ ವಿಷಯ ಚರ್ಚಿಸಬೇಕಾದದ್ದೇ. ನಮ್ಮ ನೆಲದಲ್ಲಿ ಹುಟ್ಟಿರುವ ಉಪಭಾಷೆ ಮತ್ತು ಸಂಸ್ಕೃತಿಯನ್ನು ರಕ್ಷಿಸುವುದು ಕನ್ನಡಿಗರಾದ ನಮ್ಮೆಲ್ಲರ ಹೊಣೆಗಾರಿಕೆಯೂ ಹೌದು. ಅಷ್ಟೇ



ಅಲ್ಲ, ಆ ಭಾಷೆಯ ಚಿತ್ರಗಳಿಗೆ ಡಬ್ಬಿಂಗ್ ಸೌಲಭ್ಯ ಒಂದು ರೀತಿಯಲ್ಲಿ ಆಕ್ಸಿಜನ್ ನೀಡುತ್ತದೆ ಹಾಗೂ ಅಂತಹ ಪ್ರಯತ್ನದಿಂದ ಒಂದೇ ರಾಜ್ಯದಲ್ಲಿ ನಾಲ್ಕು ಭಾಷೆಯ ಚಿತ್ರಗಳ ಸರ್ವತೋಮುಖ ಅಭಿವೃದ್ಧಿಯಾಗುವ ಸಾಧ್ಯತೆಯೂ ಇದೆ. ನಮ್ಮ ದೇಶದ ಬೇರಾವುದೇ ರಾಜ್ಯದಲ್ಲಿ ಇಂತಹ ಉಪಭಾಷೆಗಳ ಚಿತ್ರಗಳ ನಿರ್ಮಾಣ ಇಲ್ಲದಿರುವುದರಿಂದ ಈ ನಿಟ್ಟಿನಲ್ಲೂ ನಾವು ಇಡೀ ದೇಶಕ್ಕೆ ಒಂದು ಮಾದರಿಯಾಗುವ ಅವಕಾಶವೂ ಇದೆ. ಹಾಗೆ ನೋಡಿದರೆ ನಾಲ್ಕು ಉಪ ಭಾಷೆಗಳ ಚಿತ್ರ ನಿರ್ಮಾಣ ಸಂಖ್ಯೆ ಹೆಚ್ಚಾದಲ್ಲಿ ಅದರಿಂದಾಗಿ ನಮ್ಮ ಕಾರ್ಮಿಕರಿಗೆ, ತಂತ್ರಜ್ಞರಿಗೆ ಹೆಚ್ಚು ಉದ್ಯೋಗಾವಕಾಶ ದೊರೆತಂತಾಗುತ್ತದೆ. ಇದೊಂದು ರೀತಿಯಲ್ಲಿ ಸೊರಗಿಹೋಗುತ್ತಿರುವ ಕನ್ನಡ ಚಿತ್ರೋದ್ಯಮಕ್ಕೂ ಪರೋಕ್ಷವಾಗಿ ಸಹಕಾರಿಯಾಗುತ್ತದೆ. ಈಗ ಸದ್ಯಕ್ಕೆ ಈ ಭಾಷೆಯ ಚಿತ್ರಗಳಿಗೆ ಮಾರುಕಟ್ಟೆ ಕೊರತೆ ಇದ್ದು ವರ್ಷಕ್ಕೆ ಒಂದೆರಡು ಚಿತ್ರಗಳಷ್ಟೇ ನಿರ್ಮಾಣವಾಗುತ್ತಿವೆ.

ಇಂತಹ ಒಂದು ವಾದ ಮತ್ತು ಚರ್ಚೆಯನ್ನು ಕನ್ನಡ ಚಿತ್ರೋದ್ಯಮದ ಗಣ್ಯರು ಮತ್ತು ವಾಣಿಜ್ಯ ಮಂಡಳಿಯ ಪದಾಧಿಕಾರಿಗಳು ಹೇಗೆ ಸ್ವಾಗತಿಸುತ್ತಾರೋ ಗೊತ್ತಿಲ್ಲ. ಆದರೆ ದೊಡ್ಡಣ್ಣನ ಸ್ಥಾನದಲ್ಲಿರುವ ಕನ್ನಡದ ನಿರ್ಮಾಪಕರು ಮುಕ್ತ ಮನಸ್ಸಿನಿಂದ ಈ ವಿಷಯವನ್ನು ಗ್ರಹಿಸಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ. ಆದರೆ ಒಂದು ವೇಳೆ ಇಂತಹ ಡಬ್ಬಿಂಗ್‌ಗೆ ಅನುಮತಿ ನೀಡಲು ನಿರ್ಧರಿಸಿದರೆ ಅದು ದುರುಪಯೋಗವಾಗದಂತೆ ಸೂಕ್ತ ಷರತ್ತುಗಳನ್ನೂ ಹಾಕಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಫಿಲ್ಮ್‌ಚೇಂಬರ್ ಅಧ್ಯಕ್ಷೆ ಜಯಮಾಲಾ ಮತ್ತು ಸಿನಿಮಾ ಅಕಾಡೆಮಿಯ ಅಧ್ಯಕ್ಷ ನಾಗಾಭರಣ ಅವರು ಗಂಭೀರವಾಗಿ ಚಿಂತಿಸಬೇಕಿದೆ. ಕನ್ನಡ ಚಿತ್ರರಂಗದ ಶ್ರೇಯೋಭಿವೃದ್ಧಿಗೆ ಯಾವ ರೀತಿಯಲ್ಲೂ ಇದು ತೊಂದರೆಯಾಗುವುದಿಲ್ಲವೆಂದು ಖಾತ್ರಿ ಮಾಡಿಕೊಂಡು, ಅಂತಹ ಹೊಸ ಪ್ರಯೋಗಕ್ಕೆ ಅವಕಾಶ ಮಾಡಿಕೊಟ್ಟರೆ ತಪ್ಪೇನಿಲ್ಲ.

● ಶೆಣೈ



ಆದಿತ್ಯ ಅಪಘಾತ!

ಥ್ಯಾಂಕ್ ಗಾಡ್, ಆದಿತ್ಯನ ಜೀವಕ್ಕೆ ಏನೂ ಅಪಾಯವಾಗಲಿಲ್ಲ. ಮೊನ್ನೆ ರವಿ ಶ್ರೀವತ್ಸ ನಿರ್ದೇಶನದ 'ಡೆಡ್ಲಿ ಸೋಮ-2' ಚಿತ್ರಕ್ಕಾಗಿ ಸ್ಟಂಟ್ ಮಾಸ್ಟರ್ ಥ್ರಿಲ್ಲರ್ ಮಂಜು ಸಾರಥ್ಯದಲ್ಲಿ ಸಾಹಸ ದೃಶ್ಯದ ಚಿತ್ರೀಕರಣ ನಡೆಯುತ್ತಿದ್ದಾಗ ನಾಯಕ ನಟ ಆದಿತ್ಯ ಬಿದ್ದು ಪ್ರಜ್ಞೆ ಕಳೆದುಕೊಂಡ. ಮೊದಲೇ ಸಾಲು ಸಾಲು ನಿಧನದ ಸುದ್ದಿ ಕೇಳಿ ಕನ್ನಡ ಚಿತ್ರರಂಗದ ಜನ ದುಃಖದಲ್ಲಿರುವ ಈ ಸಂದರ್ಭದಲ್ಲೇ ಆದಿತ್ಯ ಅಪಘಾತಕ್ಕೀಡಾಗಿದ್ದು ಗಾಬರಿ ಮೂಡಿಸಿತ್ತು.

ಆದರೆ ಆತ ಅಪಾಯದಿಂದ ಪಾರಾಗಿದ್ದಾನೆ ಎಂಬ ಸುದ್ದಿ ಕೇಳಿದಾಕ್ಷಣ ಎಲ್ಲರೂ ನಿಟ್ಟುಸಿರುಬಿಟ್ಟರು.

ಆದರೆ ನಮ್ಮ ಚಿತ್ರರಂಗದ ಜನಕ್ಕೆ ಏನು ರಾಡಿ ಹಿಡಿದಿದೆಯೋ ಗೊತ್ತಿಲ್ಲ. ಮೊದಲೆಲ್ಲಾ ಇಂತಹ ಸಣ್ಣಪುಟ್ಟ ಅಪಘಾತಗಳಾದರೆ ಅದು ಮಾಧ್ಯಮಗಳಿಗೆ ಗೊತ್ತಾಗದ ಹಾಗೆ ಉದ್ಯಮದವರೇ ಬಚ್ಚಿಡುತ್ತಿದ್ದರು. ಆದರೆ ಮೊನ್ನೆ ಆದಿತ್ಯನ ವಿಷಯದಲ್ಲಿ ಏನಾಯಿತು ಗೊತ್ತೇ? ಆತ ಅಪಘಾತಕ್ಕೊಳಗಾಗಿದ್ದಾನೆ ಎಂದು ಪಿಆರ್‌ಓ, ನಿರ್ಮಾಪಕರು-ನಿರ್ದೇಶಕರು, ಆಪ್ತರಿಗೆ ಮತ್ತು ಮಾಧ್ಯಮವರಿಗೆಲ್ಲಾ ಎಸ್ಸೆಮ್ಮೆಸ್ ಮಾಡಿದರು. ಅಂದರೆ ಈ ಅಪಘಾತದಿಂದಲೂ ಒಂದಿಷ್ಟು ಪಬ್ಲಿಸಿಟಿ ಪಡೆಯುವುದು ಅವರ ಉದ್ದೇಶ.

ಇತ್ತೀಚೆಗೆ ಟಿವಿ ವಾಹಿನಿಗಳು ಪರಸ್ಪರ ಪೈಪೋಟಿಗಿಳಿದು ಒಂದು ಚಿಕ್ಕ ಘಟನೆಯನ್ನೂ ವೈಭವೀಕರಿಸಿ ತೋರಿಸುವುದು ನಿಮಗೆಲ್ಲಾ ಗೊತ್ತೇ ಇದೆ. ಮಾಧ್ಯಮದವರ – ಅದರಲ್ಲೂ ಮುಖ್ಯವಾಗಿ ಟಿವಿಯವರ – ಈ ದೌರ್ಬಲ್ಯವನ್ನು ಸಿನಿಮಾದವರು ಚೆನ್ನಾಗಿ ಉಪಯೋಗಿಸುತ್ತಿದ್ದಾರೆಂಬುದು ಕೂಡಾ ನಿಜ.

ಆದರೆ ಪ್ರೇಕ್ಷಕರ ಪುಣ್ಯವೋ ಏನೋ? ಆದಿತ್ಯ ಅಪಘಾತಕ್ಕೊಳಗಾಗಿದ್ದು 'ಬ್ರೇಕಿಂಗ್ ನ್ಯೂಸ್' ಆಗಲಿಲ್ಲ. ಅಷ್ಟೇ ಅಲ್ಲ, ಪ್ರಿಂಟ್ ಮೀಡಿಯಾಗಳಲ್ಲೂ ಆ ಸುದ್ದಿ ಮರುದಿನ ಒಳಪುಟಗಳಲ್ಲಿ ಚಿಕ್ಕದಾಗಿ ಕಾಣಿಸಿಕೊಂಡಿತು.

ವಾಸ್ತವವಾಗಿ ಮಾಧ್ಯಮದವರು ಮಾಡಬೇಕಾದದ್ದು ಥ್ರಿಲ್ಲರ್ ಮಂಜು ಮತ್ತು ರವಿ ಶ್ರೀವತ್ಸನ ವಿಚಾರಣೆ. ಅದರಲ್ಲೂ ಥ್ರಿಲ್ಲರ್ ಮಂಜು ಈ ಹಿಂದೆಯೂ ಅನೇಕ ಬಾರಿ ತನ್ನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದಾಗಿ ಈ ರೀತಿಯ ಅವಘಡಕ್ಕೆ ಎಡೆಮಾಡಿದ್ದಾರೆ.

ಒಬ್ಬ ನಟನ ಜೀವದ ಸುರಕ್ಷತೆಯ ಬಗ್ಗೆ ಒಂದಿಷ್ಟೂ ಮುತುವರ್ಜಿ ವಹಿಸಿದ ನಿರ್ದೇಶಕರು, ಸ್ಟಂಟ್ ನಿರ್ದೇಶಕರು, ಫಿಲ್ಮ್ ಚೇಂಬರ್ ಮತ್ತು ನಿರ್ಮಾಪಕರ ಸಂಘದವರ ಬಗ್ಗೆ ಏನು ಹೇಳಬೇಕು ಎಂಬುದೇ ತೋಚುವುದಿಲ್ಲ. ●



ಶ್ರೀಹರಿ
ಪೂಜಾ ಗಾಂಧಿ



ಅಂಜಲಿ ಅಳಲು

ನಟಿ ಅಂಜಲಿ ಪ್ರಾಣಾಪಾಯದಿಂದ ಪಾರಾಗಿದ್ದಾಳೆ.

ಕಾಶೀನಾಥ್‌ರ 'ಅಜಗಜಾಂತರ' ಸೇರಿದಂತೆ ಹಲವಾರು ಚಿತ್ರಗಳಲ್ಲಿ ತನ್ನ ಮಾದಕ ನಟನೆಯಿಂದ ಫೇಮಸ್ ಆಗಿದ್ದ 90ರ ದಶಕದ ಅದೇ ಹಾಟ್ ಹುಡುಗಿಯೇ ಈಗ ಮರುಜೀವ ಪಡೆದು ಬಂದಿರುವಾಕೆ.

ಈಗ್ಗೆ ಹತ್ತು ವರ್ಷಗಳ ಹಿಂದೆ ಚಿತ್ರರಂಗಕ್ಕೆ ವಿದಾಯ ಹೇಳಿದ ಅಂಜಲಿ ಭಾರತೀಯ ಮೂಲದ ಉದ್ಯಮಿಯೊಬ್ಬರನ್ನು ವರಿಸಿ ದುಬೈನಲ್ಲಿ ನೆಲೆಸಿದ್ದಳು.

ಒಂದು ವರ್ಷದ ಹಿಂದಷ್ಟೇ ಅಂಜಲಿಯ ತಮ್ಮ ನಾಗರಾಜ್ ಕೂಡ ದುಬೈಗೆ ಹೋಗಿ ಅಕ್ಕನೊಂದಿಗೆ ಸೆಟಲ್ ಆಗಿದ್ದರು. ಕಳೆದ ವಾರ, ಮನೆಮಂದಿಯೆಲ್ಲಾ ದುಬೈನ ಹೋಟೆಲೊಂದಕ್ಕೆ ಹೋಗಿದ್ದರು. ಅಂಜಲಿ ಹೋಟೆಲ್‌ನ ಒಳಗೆ ಎಂಟ್ರಿ ಕೊಡುತ್ತಿದ್ದಂತೇ ಆ ಹೋಟೆಲಿಗೆ ತಗುಲಿಸಿದ್ದ 45 ಕೆಜಿಯ ವಿನೈಲ್ ಬೋರ್ಡ್ ಕಳಚಿ ಕೆಳಗೆ ಬಿದ್ದಿತು. ಈ ಆಕಸ್ಮಿಕದಲ್ಲಿ ಅಂಜಲಿ ಕೂದಲೆಳೆ ಅಂತರದಲ್ಲಿ ಬಚಾವಾದರೂ ಆ ಬೋರ್ಡು ಆಕೆಯ ತಮ್ಮ ನಾಗರಾಜ್ ಅವರ ತಲೆ ಮೇಲೆ ಬಿದ್ದುಬಿಟ್ಟಿತು.

ಗಾಬರಿಗೆ ಬಿದ್ದ ಎಲ್ಲರೂ 'ಏನಾಗಿದೆ?' ಎಂದು ನೋಡುವಷ್ಟರಲ್ಲಿ 30 ವರ್ಷ ವಯಸ್ಸಿನ ನಾಗರಾಜ್ ಅವರ ಪ್ರಾಣಪಕ್ಷಿಯೇ ಹಾರಿಹೋಗಿದೆ.

ಐದಾರು ದಿನಗಳ ಪ್ರಯಾಸದ ನಂತರ, ಐದಾರು ಲಕ್ಷಗಳ ಖರ್ಚುವೆಚ್ಚಗಳನ್ನು ಭರಿಸಿ ಮೊನ್ನೆ ಬುಧವಾರ ಆತನ ಮೃತದೇಹವನ್ನು ಬೆಂಗಳೂರಿಗೆ ತಂದು ಅಂತಿಮಕಾರ್ಯ ನೆರವೇರಿಸಿದ್ದಾರೆ.

ಇನ್ನೂ ಸಣ್ಣಮಕ್ಕಳ ತಂದೆಯಾಗಿದ್ದ ನಾಗರಾಜನ ಪತ್ನಿ ಗಂಡನ ಅಕಾಲಿಕ ಮರಣದ ದುಃಖವನ್ನು ಸಹಿಸಿಕೊಳ್ಳಲಾರದೆ ಗಿಡಕ್ಕೆ ಸಿಂಪಡಿಸುವ ಕ್ರಿಮಿನಾಶಕವನ್ನು ಸೇವಿಸಿ ಈಗ ಸಾವುಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಅಂಜಲಿ ಸೇರಿದಂತೆ ಮನೆಯ ಬಹುತೇಕ ಮಂದಿ ಈ ಆಘಾತದಿಂದ ಆಸ್ಪತ್ರೆ ಸೇರಿದ್ದಾರೆ.

ಕಳೆದುಹೋದ ಒಂದು ಜೀವ ಈಗ ಇಡೀ ಕುಟುಂಬದ ನೆಮ್ಮದಿಯನ್ನೇ ಕಿತ್ತೊಗೆದಿದೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44